ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ – ೧೧೭
ವಿಚಾರ ಸಾಹಿತ್ಯಮಾಲೆ – ೩೮
ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ
ಸಹಕಾರದೊಂದಿಗೆ

ಪ್ರಧಾನ ಸಂಪಾದಕರು
**ಡಾ. ಪ್ರಧಾನ್ ಗುರುದತ್ತ**

ಸಂಪಾದಕರು
**ಡಾ. ಎ. ವಿ. ನರಸಿಂಹಮೂರ್ತಿ**

# ಭಾರತ ಮತ್ತು ಶೀತಲ ಸಮರ

## ಭವನದ ಗ್ರಂಥ ವಿಶ್ವವಿದ್ಯಾನಿಲಯ

ಮಾಲೆಯ
ಮೂಲ ಸಂಪಾದಕರು
**ಕೆ. ಎಂ. ಮುನ್ಷಿ**
**ಆರ್. ಆರ್. ದಿವಾಕರ್**

ವ್ಯವಸ್ಥಾಪಕ ಮಂಡಳಿ
**ಲೀಲಾವತಿ ಮುನ್ಷಿ** – ಅಧ್ಯಕ್ಷೆ
**ಕೆ. ಕೆ. ಬಿರ್ಲಾ** – ಸದಸ್ಯರು
**ಎಸ್. ಜಿ. ನೇವಾತಿಯ** – ಸದಸ್ಯರು
**ಜಿ. ಎಚ್. ದವೆ** – ಸದಸ್ಯರು
**ಎಸ್. ರಾಮಕೃಷ್ಣನ್** – ಸದಸ್ಯರು

**ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿ**

**ಎನ್. ರಾಮಾನುಜ** – ಅಧ್ಯಕ್ಷರು
(ಅಧ್ಯಕ್ಷರು, ವಿದ್ಯಾ ಭವನ, ಕರ್ನಾಟಕ)

**ಡಾ. ಮತ್ತೂರು ಕೃಷ್ಣಮೂರ್ತಿ**
(ಕಾರ್ಯಕಾರಿ ನಿರ್ದೇಶಕರು, ವಿದ್ಯಾ ಭವನ, ಬೆಂಗಳೂರು)
**ಎಚ್. ಎನ್. ಸುರೇಶ್**
(ನಿರ್ದೇಶಕರು, ಕಾರ್ಯಕ್ರಮ ಮತ್ತು ಯೋಜನೆಗಳು
ವಿದ್ಯಾ ಭವನ, ಬೆಂಗಳೂರು)
**ಡಾ. ಎ. ವಿ. ನರಸಿಂಹಮೂರ್ತಿ**
(ಅಧ್ಯಕ್ಷರು, ವಿದ್ಯಾ ಭವನ, ಮೈಸೂರು)



# ಭಾರತ ಮತ್ತು ಶೀತಲ ಸಮರ

**ಆನೋ ಭದ್ರಾಃ ಕ್ರತವೋ ಯನ್ತು ವಿಶ್ವತಃ**
**(ಎಲ್ಲ ಸದ್ವಿಚಾರಗಳು ಎಲ್ಲೆಡೆಯಿಂದಲೂ ಬರಲಿ)**
**–ಋಗ್ವೇದ, I. ೮೯–೧**

ಮೂಲ
**ಕೆ. ಪಿ. ಎಸ್. ಮೆನನ್**

ಅನುವಾದ
**ಎಚ್. ಆರ್. ಚಂದ್ರವದನ ರಾವ್**

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ,** ಬೆಂಗಳೂರು
ಮತ್ತು
**ಭಾರತೀಯ ವಿದ್ಯಾ ಭವನ,** ಮೈಸೂರು

**Bharata mattu Sheetala Samara :** Kannada translation of *India and the Cold War* by **K.P.S. Menon;** Kannada translation by **H.R. Chandravadana Rao;** Editor-in-Chief : **Dr. Pradhan Gurudatta**; Editor of the series : **Dr. A.V. Narasimha Murthy;** published under the joint auspices of **Kuvempu Bhasha Bharati Pradhikara**, Kalagrama, Jnana Bharathi, Behind Bangalore University Campus, Mallattahalli, Bangalore - 560 056, and **Bharatiya Vidya Bhavana,** Mysore; Published by **P. Narayana Swamy,** Registrar, Kuvempu Bhasha Bharathi Pradhikara : 2010; Pp. xxii + 53 ; Price: Rs. 10/-

© ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಮತ್ತು
ಭಾರತೀಯ ವಿದ್ಯಾ ಭವನ, ಮೈಸೂರು

ಮುದ್ರಣ : ೨೦೧೦
ಪುಟಗಳು : xxii + ೫೩
ಬೆಲೆ : ರೂ. ೧೦/-

ಪ್ರಕಾಶಕರು :
**ಪಿ. ನಾರಾಯಣಸ್ವಾಮಿ**
ರಿಜಿಸ್ಟ್ರಾರ್
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು – ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ : **ಮಯೂರ ಪ್ರಿಂಟ್ ಆಡ್ಸ್**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆಡ್ಸ್**
ನಂ. ೬೯, ಸುಭೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ : ೫-೮-೨೦೦೯
ಸಿಎಂ/ಪಿಎಸ್/೧೪೭/೦೯

## ಮೊದಲ ಮಾತು

ಕನ್ನಡ ನಾಡಿನ ಹೆಮ್ಮೆಯ ಮಹಾಕವಿ ಶ್ರೀ ಕುವೆಂಪು ಅವರು ಕನ್ನಡದ ಕೀರ್ತಿಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿದ ಮಹಾಚೇತನ. ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸಂಸ್ಥಾಪಿಸಿರುವ **'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'** ರಾಷ್ಟ್ರೀಯ ಸಾಹಿತ್ಯಕ ಮತ್ತು ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಬೇಕೆಂಬುದು ಸರ್ಕಾರದ ಸದಾಶಯ. ಬೆಂಗಳೂರು **'ಜ್ಞಾನಭಾರತಿ'** ಆವರಣದಲ್ಲಿ ನಿರ್ಮಿಸಲಾಗಿರುವ ಬೃಹತ್ ಭವನದ ಸಮುಚ್ಚಯದಲ್ಲಿ ಶಿಕ್ಷಣ, ತರಬೇತಿ ಮತ್ತು ಪ್ರಕಟಣೆಗಳ ರೂಪದಲ್ಲಿ ಬಹು-ಆಯಾಮದ ಅದರ ಚಟುವಟಿಕೆಗಳು ಅರಳಿ ನಿಲ್ಲಲಿವೆ.

ಅದು ಆರಂಭಿಸಲಿರುವ ಭಾಷಾಂತರ ಮತ್ತು ತೌಲನಿಕ ಸಾಹಿತ್ಯ ಸಂಬಂಧವಾದ ವಿಶಿಷ್ಟ ಶಿಕ್ಷಣಗಳು ಆಡಳಿತ ಕ್ಷೇತ್ರ, ನ್ಯಾಯಾಂಗ ಕ್ಷೇತ್ರ ಮತ್ತು ಶಿಕ್ಷಣ ಕ್ಷೇತ್ರಗಳಿಗೆ ಪೂರಕವಾಗಿ, ಕನ್ನಡವನ್ನು ಸರ್ವತೋಮುಖವಾಗಿ ಬೆಳೆಸಲು ಸಹಾಯಕವಾಗಲಿವೆ.

ಭಾರತೀಯ ಭಾಷಾ-ಸಾಹಿತ್ಯಗಳ ಉತ್ತಮೋತ್ತಮ ಕೃತಿಗಳನ್ನು ಮಾತ್ರವಲ್ಲದೆ, ವಿಶ್ವಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳನ್ನು ಜಾಗತಿಕ ಸಾಹಿತ್ಯಕ್ಕೆ ಪರಿಚಯಿಸಿಕೊಡುವ ಕರ್ತವ್ಯದ ಜೊತೆಗೆ, ಜ್ಞಾನ-ವಿಜ್ಞಾನ ಮತ್ತು ತಂತ್ರಜ್ಞಾನದ ಮಹತ್ವದ ಕೃತಿಗಳನ್ನು ಕನ್ನಡಕ್ಕೆ ತರುವ ಮಹತ್ತರ ಕಾರ್ಯವನ್ನೂ ಅದು ಹಮ್ಮಿಕೊಳ್ಳಬೇಕಾದ ಅಗತ್ಯವಿದೆ.

ನಾಡಿನ ಶ್ರೇಷ್ಠ ವಿದ್ವಾಂಸರ ಸಲಹೆ-ಸೂಚನೆ-ಮಾರ್ಗದರ್ಶನಗಳ ಬೆಳಕಿನಲ್ಲಿ ಅದರ ಕೆಲಸ ಕಾರ್ಯಗಳು ಆದರ್ಶಪ್ರಾಯವಾಗಿ ಮೂಡಿಬರಲಿ ಹಾಗೂ ಇದೊಂದು ವಿಶಿಷ್ಟ ಸಂಸ್ಥೆಯಾಗಿ ದೇಶ-ವಿದೇಶಗಳ ಗಮನವನ್ನೂ ಸೆಳೆಯುವಂತಾಗಲಿ ಎಂದು ಹಾರೈಸುತ್ತೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳಲ್ಲಿ ಆಸಕ್ತರೆಲ್ಲರೂ ಪಾಲ್ಗೊಳ್ಳಬೇಕೆಂಬ, ಇದರ ಪ್ರಕಟಣೆಗಳನ್ನು ಜನಸಮುದಾಯ ಆದರ-ವಿಶ್ವಾಸಗಳಿಂದ ಸ್ವೀಕರಿಸುವರೆಂಬ ಆಶಯ ನಮ್ಮದಾಗಿದೆ.

ಭಾರತೀಯ ವಿದ್ಯಾಭವನದಂಥ ರಾಷ್ಟ್ರೀಯ ಮಹತ್ವದ ಸಂಸ್ಥೆಯ ಸಹಯೋಗದೊಂದಿಗೆ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾಲಯ ಮಾಲೆಯ ಪುಸ್ತಕಗಳನ್ನು ಹೊರತರುವ ಯೋಜನೆಯನ್ನು ಹಾಕಿಕೊಂಡಿರುವುದು ಸಂತೋಷದ ಬೆಳವಣಿಗೆಯೇ ಆಗಿದೆ. ಈ ಮಾಲೆಯ ಪುಸ್ತಕಗಳು ಕುವೆಂಪು ಭಾಷಾ ಭಾರತಿ ಮತ್ತು ಭಾರತೀಯ ವಿದ್ಯಾಭವನದ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದೂ ಸಂತೋಷದ ಸಂಗತಿಯೇ ಆಗಿದೆ.

(ಬಿ.ಎಸ್.ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ, ಸಣ್ಣ ನೀರಾವರಿ ಹಾಗೂ
ಜವಳಿ ಸಚಿವರು

ವಿಧಾನ ಸೌಧ
ಬೆಂಗಳೂರು – ೦೧

## ಶುಭಾಕಾಂಕ್ಷೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಈಗಾಗಲೇ ಖ್ಯಾತಿಯನ್ನು ಗಳಿಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಹತ್ವದ ಸಾಹಿತ್ಯಿಕ, ಐತಿಹಾಸಿಕ, ವೈಜ್ಞಾನಿಕ ಮತ್ತು ಇತರ ಗ್ರಂಥಗಳನ್ನು ಪ್ರಕಟಿಸುವ ಮೂಲಕ ಮತ್ತು ರಾಷ್ಟ್ರೀಯ ವಿಚಾರಸಂಕಿರಣಗಳನ್ನು ಏರ್ಪಡಿಸುವ ಮೂಲಕ ಅಂತರರಾಷ್ಟ್ರೀಯ ಮಟ್ಟದ ಸಂಸ್ಥೆಯಾಗಿ ಬೆಳೆಯುವ ದಿಕ್ಕಿನಲ್ಲಿ ಮಹತ್ವದ ಹೆಜ್ಜೆಗಳನ್ನು ಇಡುತ್ತಿರುವುದು ನನಗೆ ತುಂಬ ಸಂತೋಷವನ್ನು ತಂದುಕೊಟ್ಟಿದೆ. ಈ ಮೂಲಕ ಕನ್ನಡ ನಾಡಿನ ಜನತೆಗೆ ಈಗಾಗಲೇ ಮಹತ್ವದ ಕೃತಿಗಳು ಕನ್ನಡದಲ್ಲಿ ದೊರೆಯುವಂತಾಗಿಸುವುದು ಮಾತ್ರವಲ್ಲದೆ, ಕನ್ನಡದ ಶ್ರೇಷ್ಠ ಕೃತಿಗಳ ಪರಿಚಯ ಇತರ ಭಾಷಾ ಬಾಂಧವರಿಗೂ ಆಗುವಂತೆ ಮಾಡುವ ದಿಕ್ಕಿನಲ್ಲಿ ಈ ಸಂಸ್ಥೆ ಕಾರ್ಯೋನ್ಮುಖವಾಗಬೇಕಾಗಿದೆ. ಈ ಕಾರ್ಯದಲ್ಲಿ ನಾಡಿನ ಖ್ಯಾತ ಲೇಖಕರು, ವಿದ್ವಾಂಸರು, ವಿಮರ್ಶಕರು ಸಹಕರಿಸುತ್ತಿರುವುದು ವಿಶೇಷ ಸಂಗತಿಯೇ ಆಗಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಆಶ್ರಯದಲ್ಲಿ ಮುಂದಿನ ದಿನಗಳಲ್ಲಿ ಶೈಕ್ಷಣಿಕ ಕಾರ್ಯಕ್ರಮಗಳು ಪ್ರಾರಂಭವಾಗಲಿರುವುದು ಸಂತೋಷದ ಸಂಗತಿ. ನಮ್ಮ ತರುಣ ಜನಾಂಗವನ್ನು ಈ ಸಾಹಿತ್ಯಿಕ–ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧಗೊಳಿಸುವ ಕಾರ್ಯ ಇದರ ಮೂಲಕ ನಡೆಯುತ್ತದೆ ಎಂದು ನಂಬಿದ್ದೇನೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಕ್ರಮಗಳಲ್ಲಿ ನಾಡಿನ ಜನತೆ ಸಕ್ರಿಯವಾಗಿ ಭಾಗವಹಿಸಲಿ ಎಂದು ಹಾರೈಸುತ್ತೇನೆ.

**ಗೋವಿಂದ ಎಂ. ಕಾರಜೋಳ**



ಕರ್ನಾಟಕ ಸರ್ಕಾರ

**ರಮೇಶ್ ಬಿ.ಝುಳಕಿ,** ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ
ವಾರ್ತಾ ಇಲಾಖೆ

ವಿಕಾಸ ಸೌಧ
ಬೆಂಗಳೂರು – ೦೧

## ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಂದ ನಮ್ಮ ನಾಡಿನ ಜನಸಮುದಾಯದ ಗಮನವನ್ನು ಸೆಳೆಯುವ ದಿಕ್ಕಿನಲ್ಲಿ ಮುನ್ನಡೆಯುತ್ತಿರುವುದು ತುಂಬ ಸಂತೋಷದ ಸಂಗತಿಯೇ ಆಗಿದೆ. ಪ್ರಾಧಿಕಾರದ ಒಂದು ಭಾಗವೇ ಆಗಿ ಕಲ್ಪಿಸಿಕೊಳ್ಳಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿಯ ಕಾರ್ಯಚಟುವಟಿಕೆಗಳ ಅಂಗವಾಗಿ ಹೊರತರಲಾಗಿದ್ದ ಸುಮಾರು ೬೦ ಗ್ರಂಥಗಳ ಜೊತೆಗೆ, ಪ್ರಾಧಿಕಾರ ಮತ್ತಷ್ಟು ಮಹತ್ವಪೂರ್ಣ ಗ್ರಂಥಗಳನ್ನು ಹೊರತರುತ್ತಿದ್ದು, ಸದ್ಯದಲ್ಲಿಯೇ ಈ ಸಂಖ್ಯೆ ನೂರರ ಗಡಿಯನ್ನು ದಾಟಲಿದೆ. 'ಭಾರತೀಯ ವಿದ್ಯಾಭವನ'ದಂಥ ರಾಷ್ಟ್ರೀಯ ಸಂಸ್ಥೆಯೊಂದಿಗೆ ಸಂಯುಕ್ತ ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಪ್ರಾಧಿಕಾರ ಮುನ್ನಡೆಯಲಿರುವುದು ಪ್ರಾಧಿಕಾರದ ಚಟುವಟಿಕೆಗಳಿಗೆ ಹೊಸ ಆಯಾಮವನ್ನೇ ನೀಡಲಿದೆ ಎಂದು ನಂಬಿದ್ದೇನೆ. ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ೧೪ ಸಂಪುಟಗಳ ಕನ್ನಡ ಅನುವಾದದ ಪರಿಷ್ಕರಣ, ೧೫ ರಿಂದ ಮುಂದಿನ ಸಂಪುಟಗಳ ಅನುವಾದ ಕಾರ್ಯ, ಪಂಡಿತ್ ದೀನ್‌ದಯಾಳ್ ಉಪಾಧ್ಯಾಯ ಅವರ ಸಮಗ್ರ ಕೃತಿಗಳ ಕನ್ನಡ ಅನುವಾದದ ಪ್ರಕಟಣೆ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕನ್ನಡ ಲೇಖಕರ ಸಂಚಯಗಳ ಹಿಂದೀ ಮತ್ತು ಇಂಗ್ಲಿಷ್ ಆವೃತ್ತಿಗಳ ಪ್ರಕಟಣೆ – ಇವೇ ಮೊದಲಾದ ಮಹತ್ವದ ಕಾರ್ಯಕ್ರಮಗಳನ್ನು ಈ ಪ್ರಾಧಿಕಾರ ಹಮ್ಮಿಕೊಂಡಿರುವುದು ಸ್ತುತ್ಯರ್ಹವಾದ ಸಂಗತಿಯೇ ಆಗಿದೆ. 'ಕಾವೇರಿ ನ್ಯಾಯಾಧಿಕರಣ'ದ ತೀರ್ಪಿನ ಕನ್ನಡ ಆವೃತ್ತಿಯೂ ಸದ್ಯದಲ್ಲಿಯೇ ಹೊರಬರಲಿದೆ. ವೈಜ್ಞಾನಿಕ, ತಾಂತ್ರಿಕ ಮತ್ತು ವೈದ್ಯಕೀಯ ಸಾಹಿತ್ಯ ಪ್ರಕಟಣೆಯತ್ತಲೂ ಪ್ರಾಧಿಕಾರ ಗಮನಹರಿಸಿದೆ. ಪ್ರಾಧಿಕಾರದ ಮುನ್ನಡೆಗೆ ಕರ್ನಾಟಕ ಸರ್ಕಾರದ ಎಲ್ಲ ಬಗೆಯ ನೆರವೂ ಲಭಿಸಲಿದೆ.

ಈ ಎಲ್ಲ ಚಟುವಟಿಕೆಗಳು ಕನ್ನಡಿಗರ ಆದರ, ಮೆಚ್ಚಿಕೆ, ಸಂತೋಷಗಳಿಗೆ ಪಾತ್ರವಾಗುತ್ತದೆಂದು ನಂಬಿದ್ದೇನೆ.

(ರಮೇಶ್ ಬಿ.ಝುಳಕಿ)

ಕರ್ನಾಟಕ ಸರ್ಕಾರ

**ಮನು ಬಳಿಗಾರ್**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨

ದಿನಾಂಕ : ೦೭.೦೮.೨೦೦೯

# ಪ್ರಾಸ್ತಾವಿಕ ನುಡಿ

ಕುವೆಂಪು ಭಾಷಾ ಭಾರತಿ ಅಂಗವಾಗಿ ಕರ್ನಾಟಕ ಸರ್ಕಾರ ೨೦೦೫ರಲ್ಲಿ ಸ್ಥಾಪಿಸಿದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕೇವಲ ಮೂರು ವರ್ಷಗಳಲ್ಲಿ ಮಾಡಿರುವ ವೈವಿಧ್ಯಮಯವಾದ ಕಾರ್ಯವನ್ನು ನಾನು ಗಮನಿಸಿದ್ದೇನೆ. ಕುವೆಂಪು ಭಾಷಾ ಭಾರತಿಯ ಕಟ್ಟಡ ಸಮುಚ್ಚಯದ ನಿರ್ಮಾಣ ಕಾರ್ಯ ಪೂರ್ಣಗೊಂಡಿದ್ದು, ಸನ್ಮಾನ್ಯ ಮುಖ್ಯಮಂತ್ರಿಗಳು ಅದರ ಉದ್ಘಾಟನ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ. ವೈವಿಧ್ಯಮಯವಾದ ಮತ್ತು ವ್ಯಾಪಕವಾದ ಕಾರ್ಯಯೋಜನೆಗಳನ್ನು, ಧ್ಯೇಯೋದ್ದೇಶಗಳನ್ನು ಹೊಂದಿರುವ ಕುವೆಂಪು ಭಾಷಾ ಭಾರತಿ ಕುವೆಂಪು ಅವರ ಹೆಸರಿನಲ್ಲಿಯೇ ಸ್ಥಾಪಿತವಾಗಿದ್ದರೂ ಕುವೆಂಪು ಸಾಹಿತ್ಯದ ಪ್ರಚಾರ ಪ್ರಸಾರಗಳಿಗೆ ಮಾತ್ರವೇ ಸೀಮಿತವಾಗಿರುವುದಿಲ್ಲ. ಕುವೆಂಪು ಮಾಡಿರುವ ಅತ್ಯುಚ್ಚ ಸಾಹಿತ್ಯಿಕ ಸಾಧನೆಯ ಪ್ರತೀಕವಾಗಿ ಈ ಸಂಸ್ಥೆಗೆ ಆ ಹೆಸರನ್ನು ಕೊಡಲಾಗಿದೆ. ಕನ್ನಡ ಭಾಷಾ ಸಾಹಿತ್ಯಗಳ ಹಿರಿಯ ಸಾಧನೆಯನ್ನು ಕನ್ನಡೇತರರಿಗೆ, ದೇಶ–ವಿದೇಶಗಳ ಸಾಹಿತ್ಯಿಕ ಸಾಧನೆಯನ್ನು ಕನ್ನಡಿಗರಿಗೆ ಪರಿಚಯಿಸಿಕೊಡುವುದಲ್ಲದೆ, ಸಾಹಿತ್ಯ, ಜ್ಞಾನ–ವಿಜ್ಞಾನ–ತಂತ್ರಜ್ಞಾನಗಳ ವಿವಿಧ ಕ್ಷೇತ್ರಗಳಲ್ಲಿನ ಸಾಧನೆಗೆ ಕನ್ನಡವನ್ನು ಅಣಿಗೊಳಿಸುವ ಧ್ಯೇಯವನ್ನೂ ಇದು ಇರಿಸಿಕೊಂಡಿದೆ. ಹೀಗೆ ಇದು ಸರ್ವಭಾಷೆಗಳ ಸಾಮರಸ್ಯದ ಪ್ರತೀಕವಾದ ಸಾಹಿತ್ಯಿಕ ಸಂಸ್ಥೆಯಾಗಿ ಕೆಲಸ ಮಾಡಲಿದೆ. ಭಾಷಾಂತರ ಶಿಕ್ಷಣ, ವಿದೇಶ ಭಾಷೆಗಳ ಶಿಕ್ಷಣ, ತೌಲನಿಕ ಸಾಹಿತ್ಯಾಧ್ಯಯನ, ತರಬೇತಿ ಕಾರ್ಯಕ್ರಮಗಳು, ಪ್ರಕಟಣೆಗಳು – ಹೀಗೆ ಬಹುಮುಖವಾದ ಕಾರ್ಯಚಟುವಟಿಕೆಗಳಿಂದ ಕುವೆಂಪು ಭಾಷಾ ಭಾರತಿ ನಾಡಿನ ಹೆಮ್ಮೆಯ ಸಂಸ್ಥೆಯಾಗಿ ಬೆಳೆದು ಬರಬೇಕೆಂಬ ಆಶಯವನ್ನು ಇರಿಸಿಕೊಳ್ಳಲಾಗಿದೆ. ಕುವೆಂಪು ಭಾಷಾ ಭಾರತಿಯ ಅಂಗವಾಗಿ ಈ ಹಿಂದೆ ಸ್ಥಾಪಿತವಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕುವೆಂಪು ಭಾಷಾ ಭಾರತಿಯಲ್ಲಿ ಈಗ ವಿಲೀನಗೊಂಡಿದ್ದು, ಹೆಚ್ಚಿನ ವೈವಿಧ್ಯ ಮತ್ತು ವ್ಯಾಪ್ತಿಯ ಕಾರ್ಯಕ್ರಮಗಳಲ್ಲಿ ಅದು ತನ್ನನ್ನು ತೊಡಗಿಸಿಕೊಳ್ಳಲಿದೆ. ಈ ಅಕಾಡೆಮಿಯ ಮೂರು ವರ್ಷಗಳ ಅಲ್ಪಾವಧಿಯಲ್ಲಿ ಅಭಿನಂದನೀಯವಾದ ಕಾರ್ಯವನ್ನು ಮಾಡಿದ ಹಿರಿಯ ಬಹುಭಾಷಾ ವಿದ್ವಾಂಸರಾದ ಡಾ. ಪ್ರಧಾನ್ ಗುರುದತ್ತ ಅವರನ್ನು ಕುವೆಂಪು ಭಾಷಾ ಭಾರತಿಯ ಪ್ರಥಮಾಧ್ಯಕ್ಷರಾಗಿ ಕರ್ನಾಟಕ ಸರ್ಕಾರ ನೇಮಕ ಮಾಡಿದ್ದು,



ಅವರು ಈ ಸಂಸ್ಥೆಯ ಧ್ಯೇಯೋದ್ದೇಶಗಳನ್ನು ಈಡೇರಿಸಲು ಸಂಕಲ್ಪಬದ್ಧರಾಗಿದ್ದಾರೆ ಎಂದು ನಾನು ಭಾವಿಸಿದ್ದೇನೆ.

ಕುವೆಂಪು ಭಾಷಾ ಭಾರತಿ ತನ್ನ ವಿಶಿಷ್ಟ ಕಾರ್ಯಚಟುವಟಿಕೆಗಳಿಂದ ಕನ್ನಡಿಗರ ಮೆಚ್ಚಿನ ಸಾಹಿತ್ಯಿಕ – ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ. ಸಂಸ್ಥೆಯ ಉದ್ಘಾಟನೆಯ ಹೊತ್ತಿಗೆ ಅದರ ಅನೇಕ ಪ್ರಕಟಣೆಗಳು ಹೊರತರುತ್ತಿರುವುದು ಅದರ ಕಾರ್ಯಚಟುವಟಿಕೆಗಳ ಪ್ರತೀಕವಾಗಿದೆ. ಈ ಸಂಸ್ಥೆ ಇತೋಪ್ಯತಿಶಯವಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

ಭಾರತೀಯ ಸಂಸ್ಕೃತಿ, ಇತಿಹಾಸ ಸಾಹಿತ್ಯ ಕ್ಷೇತ್ರಗಳಿಗೆ ತನ್ನ ಪ್ರಕಟಣೆಗಳ ಮೂಲಕ ಹಾಗೂ ಶೈಕ್ಷಣಿಕ ಕಾರ್ಯಗಳ ಮುಖೇನ ಸ್ಮರಣೀಯ ಸೇವೆಯನ್ನು ಸಲ್ಲಿಸುವ ಮೂಲಕ ಭಾರತೀಯ ವಿದ್ಯಾ ಭವನ ನಾಡಿನ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಒಂದಾಗಿ ಪರಿಣಮಿಸಿದೆ. 'ಹಿಸ್ಟರಿ ಅಂಡ್ ಕಲ್ಚರ್ ಆಫ್ ದಿ ಇಂಡಿಯನ್ ಪೀಪಲ್' ಮಾಲೆಯ ಸಂಪುಟಗಳ ಮೂಲಕ ಭಾರತೀಯ ಇತಿಹಾಸ ಮತ್ತು ಸಂಸ್ಕೃತಿಗಳ ನೈಜ ಚಿತ್ರಣವನ್ನು ಮುಂದಿರಿಸಿದ ಹಿರಿಮೆಯೂ ಅದರದಾಗಿದೆ. ಜನಸಾಮಾನ್ಯರನ್ನು ದೃಷ್ಟಿಯಲ್ಲಿರಿಸಿಕೊಂಡು ರಚಿಸಲಾದ ಅದರ 'ಬುಕ್ ಯೂನಿವರ್ಸಿಟಿ' ಮಾಲೆಯ ಪುಸ್ತಕಗಳ ಕನ್ನಡ ಆವೃತ್ತಿ ಭಾರತೀಯ ವಿದ್ಯಾಭವನ ಮತ್ತು ಕುವೆಂಪು ಭಾಷಾ ಭಾರತಿಯ ಸಂಯುಕ್ತ ಪ್ರಕಟಣೆಗಳಾಗಿ ಹೊರಬರುತ್ತಿರುವುದು ವೈಯಕ್ತಿಕವಾಗಿಯೂ ನನಗೆ ಸಂತೋಷ ಸಮಾಧಾನಗಳನ್ನು ತಂದಿದೆ. ಈ ಪುಸ್ತಕಗಳನ್ನು ಕನ್ನಡ ಜನತೆ ಎಂದಿನಂತೆ ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

(ಮನು ಬಳಿಗಾರ್)

## ಪೀಠಿಕೆ

ಶ್ರೀ ಕುವೆಂಪು ಅವರು ಕನ್ನಡ ನಾಡಿನ ಹೆಮ್ಮೆಯ ರಾಷ್ಟ್ರಕವಿ. ಕನ್ನಡದ ಇನ್ನೊಬ್ಬ ವರಕವಿಗಳಾದ ಬೇಂದ್ರೆಯವರಿಂದಲೇ ಯುಗದ ಕವಿ, ಜಗದ ಕವಿ ಎಂದು ಕೀರ್ತಿತರಾಗಿದ್ದಂಥವರು. ಕನ್ನಡದ ಹಿರಿಮೆಯನ್ನು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಸ್ತರಗಳಲ್ಲಿ ಎತ್ತಿ ಹಿಡಿದ ಮಹಾಚೇತನವೂ ಅವರಾಗಿದ್ದರು. ಸಾಹಿತ್ಯದ ಅನೇಕ ಪ್ರಕಾರಗಳಿಗೆ ಮಹತ್ವಪೂರ್ಣ ಕೊಡುಗೆಗಳನ್ನು ನೀಡಿರುವ ಹಿರಿಮೆಯೂ ಅವರದಾಗಿದೆ. ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯಿಂದ ಹಿಡಿದು ಜ್ಞಾನಪೀಠ ಪ್ರಶಸ್ತಿಯವರೆಗೆ ರಾಷ್ಟ್ರಮಟ್ಟದ ಬಹುತೇಕ ಗೌರವ ಪ್ರಶಸ್ತಿಗಳೆಲ್ಲ ಅವರದಾಗಿವೆ. ರಾಷ್ಟ್ರಮಟ್ಟದ ಈ ಗೌರವ ಪ್ರಶಸ್ತಿಗಳೆಲ್ಲ ಕನ್ನಡದಲ್ಲಿ ಮೊದಲ ಬಾರಿಗೆ ಅವರನ್ನು ಅರಸಿಬಂದವು. ದೇಶ–ವಿದೇಶಗಳ ವಿಶ್ವವಿದ್ಯಾನಿಲಯಗಳ ಹಾಗೂ ಪ್ರತಿಷ್ಠಿತ ಸಾಹಿತ್ಯಿಕ ಸಂಸ್ಥೆಗಳ ಗೌರವಾದರಗಳಿಗೂ ಅವರು ಪಾತ್ರರಾಗಿದ್ದರು. ಶ್ರೀ ಕುವೆಂಪು ಅವರ ಶೈಕ್ಷಣಿಕ–ಸಾಹಿತ್ಯಿಕ ಹಿರಿಮೆ ಸಾಧನೆಗಳನ್ನು ಗುರುತಿಸಿ, ಅವರ ಹೆಸರಿನಲ್ಲಿ ಅಧ್ಯಯನ ಸಂಸ್ಥೆಗಳನ್ನು ಮಾತ್ರವಲ್ಲದೆ, ವಿಶ್ವವಿದ್ಯಾನಿಲಯವೊಂದನ್ನೂ ಸ್ಥಾಪಿಸಲಾಗಿದೆ. ಶ್ರೀ ಕುವೆಂಪು ಅವರ ಮಹಾಕಾವ್ಯವಾದ 'ಶ್ರೀ ರಾಮಾಯಣ ದರ್ಶನಂ' ಸೇರಿದಂತೆ ಅವರ ಸಾಹಿತ್ಯದ ಬಹ್ವಂಶ ಇಂಗ್ಲಿಷ್‌ನಂಥ ವಿದೇಶಿ ಭಾಷೆಗೆ ಮಾತ್ರವಲ್ಲದೆ ಹಿಂದಿಯಂಥ ಇತರ ಭಾರತೀಯ ಭಾಷೆಗಳಿಗೂ ಅನುವಾದಗೊಂಡಿದೆ ಎಂಬುದು ಗಮನಾರ್ಹವಾದ ಸಂಗತಿಯಾಗಿದೆ. ಶ್ರೀ ಕುವೆಂಪು ಅವರ ಈ ಹೈಮಾಚಲೋಪಮ ಸಾಧನೆಗೆ ಯೋಗ್ಯವಾದ ರಾಷ್ಟ್ರೀಯ ಮಹತ್ವದ ಸಾಹಿತ್ಯಿಕ–ಸಾಂಸ್ಕೃತಿಕ ಸಂಸ್ಥೆಯೊಂದನ್ನು ಸ್ಥಾಪಿಸಬೇಕೆಂಬುದು ಮತ್ತು ಅದು ಭಾರತೀಯ ಸಾಹಿತ್ಯಿಕ ಸಾಂಸ್ಕೃತಿಕ ಲೋಕದ ಹೆಮ್ಮೆಯ ಪ್ರತೀಕವಾದ ಸಂಸ್ಥೆಯಾಗಬೇಕೆಂಬುದು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾಗಿದೆ. ಈ ಯೋಜನೆಯ ಮೂಲ ರೂವಾರಿ ಪ್ರೊ. ದೇ. ಜವರೇಗೌಡ ಅವರು, 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಆರಂಭಿಸಲಾಗಿದ್ದ ಅನುವಾದ ಸಾಹಿತ್ಯ ಅಕಾಡೆಮಿಯನ್ನು ಈಗ ವಿಧ್ಯುಕ್ತವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ'ದಲ್ಲಿ ವಿಲೀನಗೊಳಿಸಲಾಗಿದ್ದು, ಅದರ ಎಲ್ಲ ಕಾರ್ಯಚಟುವಟಿಕೆಗಳೂ ಇನ್ನಷ್ಟು ವ್ಯಾಪ್ತಿ–ವೈವಿಧ್ಯಗಳೊಂದಿಗೆ ಮುಂದುವರಿಯಲಿವೆ. 'ಕುವೆಂಪು ಭಾಷಾ ಭಾರತಿ' ಕುವೆಂಪು ಸಾಹಿತ್ಯದ ಪ್ರಚಾರ–ಪ್ರಸಾರಗಳಿಗೆ ಮಾತ್ರವೇ ಮೀಸಲಾದ ಸಂಸ್ಥೆಯಾಗಿರದೆ, ಕನ್ನಡ ಸಾಹಿತ್ಯದ ಹಿರಿಮೆ–ಗರಿಮೆಗಳನ್ನು ರಾಷ್ಟ್ರೀಯ–ಅಂತರರಾಷ್ಟ್ರೀಯ ಮಟ್ಟದಲ್ಲಿ ಮೆರೆಸುವ, ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಉತ್ಕೃಷ್ಟ ಕೃತಿಗಳಿಂದ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸುವ ಮಹದಾಶಯವನ್ನು ಹೊಂದಿದೆ.

ಬೆಂಗಳೂರು ವಿಶ್ವವಿದ್ಯಾನಿಲಯದ ಜ್ಞಾನಭಾರತಿ ಆವರಣದಲ್ಲಿ ಎರಡು ಎಕರೆಗಳಷ್ಟು ವಿಶಾಲವಾದ ಸ್ಥಳದಲ್ಲಿ 'ಕುವೆಂಪು ಭಾಷಾ ಭಾರತಿ'ಯ ಕಟ್ಟಡದ



ಶಿಲಾನ್ಯಾಸ ಕಾರ್ಯಕ್ರಮ ದಿನಾಂಕ: ೦೧–೦೯–೨೦೦೫ರಂದು ಅಂದಿನ ಮಾನ್ಯ ಮುಖ್ಯಮಂತ್ರಿಗಳಾಗಿದ್ದ ಶ್ರೀ ಎನ್. ಧರ್ಮಸಿಂಗ್ ಅವರಿಂದ ನೆರವೇರಿತು. 'ವಿಶ್ವಚೇತನ' ಮತ್ತು 'ಕಾಜಾಣ' ಎಂದು ಹೆಸರಿಸಲಾಗಿರುವ ಎರಡು ಬೃಹತ್ ಕಟ್ಟಡಗಳ ಸಮುಚ್ಚವನ್ನು ಒಳಗೊಂಡಿರುವ ಕುವೆಂಪು ಭಾಷಾ ಭಾರತಿಯ ಕಟ್ಟಡದ ನಿರ್ಮಾಣಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು, ೨೦೦೯ರಲ್ಲಿ ಇದರ ಕಾಮಗಾರಿ ಪೂರ್ಣಗೊಂಡಿದೆ. ಇದೇ ದಿನಾಂಕ: ೧೯–೦೮–೨೦೦೯ರ ಬೆಳಗ್ಗೆ ೧೧–೦೦ ಗಂಟೆಗೆ ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪ ಅವರು ಈ ಕಟ್ಟಡ–ಸಮುಚ್ಚಯದ ಉದ್ಘಾಟನ ಸಮಾರಂಭವನ್ನು ಹಾಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆಗಳ ಮೊದಲ ಕಂತಿನ ಹತ್ತು ಪುಸ್ತಕಗಳ ಬಿಡುಗಡೆ ಕಾರ್ಯಕ್ರಮವನ್ನು ನೆರವೇರಿಸಿದ್ದಾರೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಕಾರ್ಯಚಟುವಟಿಕೆಗಳ ಸ್ವರೂಪ ಮೂರು ಮುಖದ್ದಾಗಿರುತ್ತದೆ :

(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು
(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು
(ಇ) ಪ್ರಕಟಣೆಗಳು

**(ಅ) ಶೈಕ್ಷಣಿಕ ಚಟುವಟಿಕೆಗಳು ಮತ್ತು ತರಬೇತಿ ಕಾರ್ಯಗಳು :**

(i) "ಕನ್ನಡ ಸಾಹಿತ್ಯ ಹಿರಿಮೆ–ಗರಿಮೆಗಳಲ್ಲಿ ಯಾವ ಭಾರತೀಯ ಸಾಹಿತ್ಯಕ್ಕೂ ಕಡಿಮೆಯಾಗಿಲ್ಲ. ಅದರ ಮಹತ್ವವನ್ನು ಎತ್ತಿತೋರಿಸುವ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಅಷ್ಟೇ" ಎಂಬುದಾಗಿ ಕುವೆಂಪು ಅವರು ಉದ್ಘೋಷಿಸಿದ್ದರು. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಚಟುವಟಿಕೆಗಳ ಅಂಗವಾಗಿ ಅನುವಾದ, ತೌಲನಿಕ ಸಾಹಿತ್ಯ, ವಿದೇಶಿ ಭಾಷೆಗಳ ಶಿಕ್ಷಣಕ್ಕೆ ಸಂಬಂಧಿಸಿದಂತೆ, ಈ ಕೆಳಕಂಡ ಶಿಕ್ಷಣ ಕ್ರಮಗಳನ್ನು ಆರಂಭಿಸಬೇಕೆಂದು ಯೋಜಿಸಲಾಗಿದೆ :

(೧) ಭಾಷಾಂತರ ಡಿಪ್ಲೊಮಾ ಶಿಕ್ಷಣ – ಮೊದಲ ಹಂತದಲ್ಲಿ ಇಂಗ್ಲಿಷ್, ಹಿಂದೀ, ಕನ್ನಡ, ತೆಲುಗು, ತಮಿಳು, ಮಲಯಾಳಂ, ಬಂಗಾಳಿ, ಮರಾಠಿ ಭಾಷೆಗಳಲ್ಲಿ ವಿಶೇಷ ತರಬೇತಿಗೆ ಒತ್ತುಕೊಟ್ಟು ಈ ಶಿಕ್ಷಣವನ್ನು ಪ್ರಾರಂಭಿಸಲಾಗುತ್ತದೆ.
(೨) ಭಾಷಾಂತರದಲ್ಲಿ ಎಂ.ಫಿಲ್ ಶಿಕ್ಷಣ : ವಿಶೇಷ ವಿಷಯಕ್ಕೆ ಒತ್ತುಕೊಟ್ಟು
(೩) ಪತ್ರಿಕೋದ್ಯಮ ಮತ್ತು ಭಾಷಾಂತರ
(೪) ಕಾನೂನುಶಾಸ್ತ್ರ, ಆಡಳಿತ ಭಾಷೆ ಮತ್ತು ಭಾಷಾಂತರ
(೫) ವಿಜ್ಞಾನ ಮತ್ತು ಮಾನವಿಕಶಾಸ್ತ್ರ ಕೃತಿಗಳು ಮತ್ತು ಭಾಷಾಂತರ ; ಮತ್ತು
(೬) ತೌಲನಿಕ ಸಾಹಿತ್ಯ
(೭) ವಿದೇಶೀ ಭಾಷೆಗಳ ಶಿಕ್ಷಣ (ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ)

(ii) ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಮಟ್ಟದಲ್ಲಿ ಪ್ರಚುರಪಡಿಸಬೇಕಾದರೆ – ಜಾಗತಿಕ ಪ್ರಾಚುರ್ಯದ ವಿದೇಶಿ ಭಾಷೆಗಳಿಗೆ ಕನ್ನಡದ ಶ್ರೇಷ್ಠ ಕೃತಿಗಳನ್ನು

ಕೊಂಡೊಯ್ಯುವ ಮಹತ್ವದ ಕಾರ್ಯವನ್ನು ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ಮೊದಲ ಹಂತದಲ್ಲಿ ಸ್ಪ್ಯಾನಿಷ್, ಜಪಾನಿ, ಫ್ರೆಂಚ್, ರಷ್ಯನ್, ಜರ್ಮನ್, ಚೀಣೀ, ಆಫ್ರಿಕನ್ ಭಾಷೆಗಳು – ಈ ಎಲ್ಲ ಶಿಕ್ಷಣಗಳಿಗೆ ಸಂಬಂಧಿಸಿದಂತೆ, ತಜ್ಞರೊಂದಿಗೆ ಸಮಾಲೋಚಿಸಿ ಕಾರ್ಯಕ್ರಮಗಳನ್ನು ರೂಪಿಸುವುದು, ಶಿಕ್ಷಣಕ್ಕೆ ಮತ್ತು ತರಬೇತಿಗೆ ವ್ಯವಸ್ಥೆಯನ್ನು ಕಲ್ಪಿಸುವುದು ಮೊದಲಾದ ಕಾರ್ಯಗಳನ್ನು ಸಮರೋಪಾದಿಯಲ್ಲಿ ಕೈಗೊಳ್ಳಲಾಗುತ್ತದೆ. ವಿದೇಶಿ ದೂತಾವಾಸಗಳ ನೆರವಿನೊಂದಿಗೆ ಈ ಶಿಕ್ಷಣ ಕ್ರಮಗಳನ್ನು ಯೋಜಿಸಲಾಗುತ್ತದೆ.

ವಿವಿಧ ಭಾಷೆಗಳಲ್ಲಿ ಪರಿಣತಿಯನ್ನು ಪಡೆದಿರುವಂಥ ತರುಣ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ತರಬೇತಿ ನೀಡಿ ಪ್ರಕಟಣಾವಕಾಶಗಳನ್ನು ಕಲ್ಪಿಸಿಕೊಡಲು ಅನುಕೂಲವಾಗುವಂತೆ ವಿಚಾರಗೋಷ್ಠಿಗಳು, ವಿಚಾರಸಂಕಿರಣಗಳು, ಕಾರ್ಯಶಿಬಿರಗಳು ಮುಂತಾದ ವೈವಿಧ್ಯಮಯ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಕುವೆಂಪು ಅವರು ಸಾಹಿತ್ಯ ಮತ್ತು ವಿಜ್ಞಾನ–ತಂತ್ರಜ್ಞಾನಗಳನ್ನು ಮಾನವ ಸಂಸ್ಕೃತಿಯ ಕಣ್ಣುಗಳೆಂದೇ ಭಾವಿಸಿದ್ದವರು. ಹೀಗಾಗಿ, ಜ್ಞಾನದ ಇತರ ಕ್ಷೇತ್ರಗಳತ್ತಲೂ ಕುವೆಂಪು ಭಾಷಾಭಾರತಿ ಕೈಚಾಚಲಿದೆ. ಈ ದೃಷ್ಟಿಯಲ್ಲಿ ಕನ್ನಡವನ್ನು ಸರ್ವಾಂಗ ಸಮೃದ್ಧವಾಗಿ ಬೆಳೆಸುವ ಅವರ ಆಶಯ ಕಾರ್ಯರೂಪಕ್ಕೆ ಬರಬಹುದಾಗಿದೆ.

ಕೇಂದ್ರ ಸರ್ಕಾರದ ರಾಷ್ಟ್ರೀಯ ಅನುವಾದ ಮಿಶನ್ ಯೋಜನೆ ಕಾರ್ಯರೂಪಕ್ಕೆ ಬರಲಿರುವ ಹಿನ್ನೆಲೆಯಲ್ಲಿ, ಇಂಥ ಶಿಕ್ಷಣಗಳನ್ನು ಪ್ರಾರಂಭಿಸುವುದಕ್ಕೆ ಹೆಚ್ಚಿನ ಅರ್ಥ ಮತ್ತು ಔಚಿತ್ಯ ದೊರೆಯುವಂತಾಗುತ್ತದೆ.

**(ಆ) ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು :**

ಕೇಂದ್ರ ಸಾಹಿತ್ಯ ಅಕಾಡೆಮಿ ರವೀಂದ್ರನಾಥ ಠಾಗೂರ್ ಅವರ ಪ್ರಾತಿನಿಧಿಕ ಸಂಕಲನಗಳನ್ನೊಳಗೊಂಡ 'ರವೀಂದ್ರ ಸಂಚಯ'ವನ್ನು ಹೊರತಂದಿರುವ ರೀತಿಯಲ್ಲಿಯೇ 'ಕುವೆಂಪು ಸಂಚಯ' ಮತ್ತು 'ಪು.ತಿ.ನ ಸಂಚಯ'ಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ಹೊರತರಲಾಗುತ್ತದೆ. ಮುಂಬರುವ ದಿನಗಳಲ್ಲಿ ಜಿ. ಎಸ್. ಶಿವರುದ್ರಪ್ಪ ಮೊದಲಾದ ಕನ್ನಡದ ಮಹತ್ವದ ಕವಿಗಳ ಸಂಕಲನಗಳನ್ನು ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳಲ್ಲಿ ತರುವ ಯೋಜನೆಗಳನ್ನು ಹಾಕಿಕೊಳ್ಳಲಾಗುತ್ತದೆ. ಇದೇ ರೀತಿಯಲ್ಲಿ ಭಾರತೀಯ ಜ್ಞಾನಪೀಠ ಮತ್ತು ಇತರ ರಾಷ್ಟ್ರಮಟ್ಟದ ಪ್ರಶಸ್ತಿಗಳನ್ನು ಗಳಿಸಿರುವ ಶ್ರೇಷ್ಠ ಸಾಹಿತಿಗಳ ಪ್ರಾತಿನಿಧಿಕ ರಚನೆಗಳನ್ನು ಒಳಗೊಂಡ ಸಂಚಯ ಕೃತಿಗಳನ್ನು ಹೊರತರಲೂ ಕ್ರಮಕೈಗೊಳ್ಳಲಾಗುತ್ತದೆ. ಉದಾ: ಮೈಥಿಲಿ ಶರಣಗುಪ್ತ ಸಂಚಯ, ಜಯಶಂಕರ ಪ್ರಸಾದ್ ಸಂಚಯ (ಹಿಂದೀ), ವಿಶ್ವನಾಥ ಸಂಚಯ (ತೆಲುಗು), ಆಶಾಪೂರ್ಣಾದೇವಿ ಸಂಚಯ (ಬಂಗಾಳಿ), ಶಿವಶಂಕರ ಪಿಳ್ಳೈ ಮತ್ತು ಎಂ. ಟಿ. ವಾಸುದೇವ ನಾಯರ್ ಸಂಚಯ (ಮಲಯಾಳಂ) ಇತ್ಯಾದಿ.

ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮತ್ತು ಜಾಗತಿಕ ಸ್ತರಗಳಲ್ಲಿ ಪ್ರಚುರಪಡಿಸಲು ವಿಚಾರಗೋಷ್ಠಿಗಳನ್ನು ಸಮಾರಂಭಗಳನ್ನು ಏರ್ಪಡಿಸುವಂತೆಯೇ, ಇತರ ಭಾರತೀಯ ಭಾಷಾಸಾಹಿತ್ಯ ಮತ್ತು ವಿಶ್ವಸಾಹಿತ್ಯಕ್ಕೆ ಸಂಬಂಧಪಟ್ಟಂತಹ ಇದೇ ಬಗೆಯ ಅರ್ಥಪೂರ್ಣ ಕಾರ್ಯಕ್ರಮಗಳನ್ನೂ ರೂಪಿಸಲಾಗುತ್ತದೆ.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ರಾಷ್ಟ್ರೀಯ ಧ್ಯೇಯೋದ್ದೇಶಗಳಿಗೆ



ಪೂರಕವೂ–ಪ್ರೇರಕವೂ ಆಗುವಂತೆ, ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸುತ್ತದೆ. ಅಂತೆಯೇ, ರಾಷ್ಟ್ರಮಟ್ಟದ ಸಾಹಿತ್ಯಿಕ ಸಂಘ–ಸಂಸ್ಥೆಗಳಾಗಿರುವ ಕೇಂದ್ರ ಸಾಹಿತ್ಯ ಅಕಾಡೆಮಿ, ನ್ಯಾಷನಲ್ ಬುಕ್ ಟ್ರಸ್ಟ್, ಬಿರ್ಲಾ ಪ್ರತಿಷ್ಠಾನ ಮೊದಲಾದವುಗಳಲ್ಲಿನ ಕಾರ್ಯಕ್ರಮಗಳ ಪುನರಾವರ್ತನೆಯಾಗದಂತೆ ವಿಶಿಷ್ಟ ರೀತಿಯಲ್ಲಿ ಕುವೆಂಪು ಭಾಷಾಭಾರತಿ ಕಾರ್ಯಯೋಜನೆಗಳನ್ನು ರೂಪಿಸಲಾಗುತ್ತದೆ.

ರಾಷ್ಟ್ರೀಯ ಪ್ರಶಸ್ತಿ : ರಾಷ್ಟ್ರಮಟ್ಟದಲ್ಲಿ ಕುವೆಂಪು ಅವರ ಹೆಸರಿನಲ್ಲಿ ರಾಷ್ಟ್ರಮಟ್ಟದ ಪ್ರಶಸ್ತಿಯೊಂದನ್ನು ಸ್ಥಾಪಿಸಿ, ನಾಡಿನ ಶ್ರೇಷ್ಠ ಸಾಹಿತಿಗಳನ್ನು ಗುರುತಿಸಿ ಸನ್ಮಾನಿಸಲು ಹಾಗೂ ಅಂತಹವರ ಪ್ರಮುಖ ಕೃತಿಗಳನ್ನು ಕನ್ನಡದಲ್ಲಿ ಹೊರತರಲು ಯೋಜನೆಗಳನ್ನು ರೂಪಿಸಲಾಗುತ್ತದೆ.

ತರುಣ ಪ್ರತಿಭೆಗಳಿಗೆ ಪ್ರೋತ್ಸಾಹ : ತರುಣ ಪ್ರತಿಭೆಗಳನ್ನು ಗುರುತಿಸಿ, ವಿವಿಧ ಭಾರತೀಯ ಭಾಷೆಗಳಲ್ಲಿ ವಿಶೇಷ ತರಬೇತಿ ಲಭ್ಯವಾಗುವಂತೆ ಮಾಡಿ, ಮುಂದೆ ಸಾಹಿತ್ಯಿಕ ಕೊಳು–ಕೊಡೆ ಕಾರ್ಯದಲ್ಲಿ ಅವರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ವಿವಿಧ ರಾಜ್ಯಸರ್ಕಾರಗಳ ನೆರವಿನೊಂದಿಗೆ ಶಿಷ್ಯವೇತನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಬೇಕೆಂದು ಯೋಜಿಸಲಾಗಿದೆ.

**(ಇ) ಪ್ರಕಟಣೆಗಳು :**

'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಸ್ಥಾಪಿಸಲಾಗಿದ್ದ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಕಳೆದ ವರ್ಷವಷ್ಟೇ ೫೬ ಪುಸ್ತಕಗಳನ್ನು ಹೊರತಂದಿದ್ದು, ಕಳೆದ ೮ ತಿಂಗಳ ಅವಧಿಯಲ್ಲಿ ಸುಮಾರು ೧೦.೦೦ ಲಕ್ಷ ರೂಗಳನ್ನು ಮಾರಾಟದ ಮೂಲಕವೇ ಗಳಿಸಿಕೊಂಡಿದೆ. ಮುಂದೆ ಹಮ್ಮಿಕೊಳ್ಳಲಿರುವ ಹಾಗೂ ಮುನ್ನಡೆಯುತ್ತಿರುವ ಮಹತ್ವದ ಯೋಜನೆಗಳಲ್ಲಿ ಜೆ. ಡಿ. ಬರ್ನಾಲ್ ಅವರ 'ಸೈನ್ಸ್ ಇನ್ ಹಿಸ್ಟರಿ' ಗ್ರಂಥದ ನಾಲ್ಕು ಸಂಪುಟಗಳು, ವಿಲ್ ಡ್ಯೂರಾಂಟ್ ಅವರ 'ಸ್ಟೋರಿ ಆಫ್ ಸಿವಿಲಿಜೇಷನ್'ನ ಎಂಟು ಸಂಪುಟಗಳು (೪ರಿಂದ ೧೧), ವಿಜ್ಞಾನ–ತಂತ್ರಜ್ಞಾನಗಳಿಗೆ ಸಂಬಂಧಿಸಿದ ಸುಮಾರು ೧೦೦ ಗ್ರಂಥಗಳು, ಸೋಮದೇವನ 'ಕಥಾಸರಿತ್ಸಾಗರ'ದ ಐದು ಸಂಪುಟಗಳು (೬ರಿಂದ ೧೦) – ಇವನ್ನು ಮುಖ್ಯವಾಗಿ ಹೆಸರಿಸಬಹುದಾಗಿದೆ. 'ಭಾರತೀಯ ವಿಜ್ಞಾನ ಸಂಸ್ಥೆ'ಯಂಥ ಅಂತರರಾಷ್ಟ್ರೀಯ ಖ್ಯಾತಿಯ ಸಂಶೋಧನ ಸಂಸ್ಥೆಯ ಸಹಕಾರದೊಂದಿಗೆ ಇಂಗ್ಲಿಷ್ ಮತ್ತು ಜಾಪನೀಸ್ ಭಾಷೆಗಳಲ್ಲಿ ಮಾತ್ರ ಲಭ್ಯವಿರುವ 'ಶಾಕ್ ವೇವ್ಸ್'ನಂಥ ಗ್ರಂಥವೂ ಕನ್ನಡದಲ್ಲಿ ಹೊರಬರಲಿದೆ. ಭಾರತೀಯ ವಿದ್ಯಾಭವನದ ಗ್ರಂಥ ವಿಶ್ವವಿದ್ಯಾನಿಲಯ ಮಾಲಿಕೆಯ ಮೊದಲಕಂತಿನಲ್ಲಿ ಈ ಮಾಲಿಕೆಯ ೨೫ ಪುಸ್ತಕಗಳು ಸಂಯುಕ್ತ ಪ್ರಕಟಣೆಗಳಾಗಿ ಬರಲಿವೆ. 'ಅಂತರರಾಷ್ಟ್ರೀಯ ಕನಕದಾಸ ಮಿಷನ್' ಸಂಸ್ಥೆಯ ನೆರವಿನೊಂದಿಗೆ ಕನಕದಾಸರ ಸಾಹಿತ್ಯದ ಅನುವಾದ ಕಾರ್ಯವೂ ಆರಂಭಗೊಳ್ಳಲಿದೆ. ಹೀಗಾಗಿ, ಕನ್ನಡ ಪ್ರಕಾಶನದ ಕ್ಷೇತ್ರದಲ್ಲಿಯೂ, ಮಹತ್ವದ ಹೆಜ್ಜೆ ಗುರುತುಗಳನ್ನು ಕುವೆಂಪು ಭಾಷಾ ಭಾರತಿ ಮೂಡಿಸುತ್ತ ಮುನ್ನಡೆಯಲಿದೆ.

ಖಾಸಗಿ ಪ್ರಕಾಶಕರ ಸಹಭಾಗಿತ್ವ : ಖಾಸಗಿ ಪ್ರಕಾಶಕರ ಸಹಾಯ–ಸಹಕಾರಗಳೊಂದಿಗೆ ಕನ್ನಡ ಸಾಹಿತ್ಯವನ್ನು ರಾಷ್ಟ್ರೀಯ ಮಟ್ಟದಲ್ಲಿ ಪ್ರಚುರಗೊಳಿಸುವ

ಸಲುವಾಗಿ ರಾಜ್ಯ ಸರ್ಕಾರ ವಿಶೇಷ ಯೋಜನೆಯೊಂದಕ್ಕೆ ಅನುಮತಿ ನೀಡಿದೆ. ಅದರ ಮೇರೆಗೆ ಕನ್ನಡ ಸಾಹಿತ್ಯ ಕೃತಿಗಳನ್ನು ಇತರ ಭಾರತೀಯ ಮತ್ತು ವಿದೇಶೀ ಭಾಷೆಗಳಲ್ಲಿ ಹೊರತರುವ ಪ್ರತಿಷ್ಠಿತ ಪ್ರಕಾಶನ ಸಂಸ್ಥೆಗಳಿಗೆ ಪ್ರಕಟಣೆಯ ಮೂಲಧನವನ್ನು ಮುಂಗಡವಾಗಿ ನೀಡಿ, ಮೂರು ವರ್ಷಗಳಲ್ಲಿ ಅವರು ಈ ಮುಂಗಡ ಹಣವನ್ನು ಹಿಂದಿರುಗಿಸುವಂತೆ ಈ ಕಾರ್ಯಕ್ರಮ ರೂಪಿಸಲಾಗಿದೆ. ಇತರ ಕ್ಷೇತ್ರಗಳಿಗೆ ಸರ್ಕಾರಗಳು ಅನೇಕ ರೀತಿಯಲ್ಲಿ ನೆರವಾಗುತ್ತಿದ್ದರೂ, ಪ್ರಕಟಣ ಕ್ಷೇತ್ರಕ್ಕೆ ಈ ಬಗೆಯ ನೆರವು ಇಲ್ಲದಿದ್ದರಿಂದ ಇದೊಂದು ಬಗೆಯ ವಿನೂತನ ಯೋಜನೆ ಆಗಿದೆ ಎಂದೂ, ಇಂಥ ಯೋಜನೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದಾಗಿಯೂ ಅನೇಕ ಪ್ರಕಾಶನ ಸಂಸ್ಥೆಗಳು ಈಗಾಗಲೇ ಮುಂದೆ ಬಂದಿವೆ. ಈ ದಿಕ್ಕಿನಲ್ಲಿ ವ್ಯವಸ್ಥಿತ ಕಾರ್ಯಕ್ರಮಗಳನ್ನು ರೂಪಿಸಲಾಗುತ್ತಿದೆ. ಹೀಗೆ ಪ್ರಕಟಣೆಯ ಕಾರ್ಯ ಕೈಗೊಳ್ಳುವ ಮೂಲಕ ಕನ್ನಡೇತರ ಭಾಷಾ–ಸಾಹಿತ್ಯ ವಲಯಗಳಲ್ಲಿ ಕನ್ನಡದ ಮೇರು ಕೃತಿಗಳು ಪರಿಚಯಗೊಳ್ಳಲೂ, ಜನಪ್ರಿಯವಾಗಲೂ ಸಹಾಯವಾಗುತ್ತದೆಂದು ನಂಬಲಾಗಿದೆ.

ಕರ್ನಾಟಕ ಸರ್ಕಾರದ ಉದಾರ ನೆರವಿನಿಂದ ಇಂಥ ಮಹತ್ವದ ಮತ್ತು ಬಹು ಆಯಾಮದ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳುವ ಮೂಲಕ ಭಾರತೀಯ ಮತ್ತು ವಿದೇಶಿ ಭಾಷೆಗಳ ನಡುವೆ ಒಂದು ಸಾಂಸ್ಕೃತಿಕ ಸೇತುವೆಯಾಗಿ, ಮಿನಿ ವಿಶ್ವವಿದ್ಯಾನಿಲಯವಾಗಿ 'ಕುವೆಂಪು ಭಾಷಾ ಭಾರತಿ ಪ್ರಾಧಿಕಾರ' ಕಾರ್ಯ ನಿರ್ವಹಿಸಲಿದೆ. ನಾಡಿನ ಗಣ್ಯ ವಿದ್ವಾಂಸರ ಸಹಾಯ–ಸಹಕಾರಗಳನ್ನು ಪಡೆದುಕೊಂಡು ಈ ಕಾರ್ಯ ನಿರ್ವಹಿಸಲಾಗುತ್ತದೆ. ಹೀಗಾಗಿ, ಕುವೆಂಪು ಭಾಷಾ ಭಾರತಿ ಕನ್ನಡ ನಾಡಿನ ಇತಿಹಾಸದಲ್ಲಿ ಮಾತ್ರವಲ್ಲದೆ, ಭಾರತೀಯ ಸಾಹಿತ್ಯಿಕ–ಸಾಂಸ್ಕೃತಿಕ ಕ್ಷೇತ್ರದಲ್ಲಿ ಒಂದು ಮಹತ್ವದ ಸಂಸ್ಥೆಯಾಗಿ ರೂಪುಗೊಳ್ಳಲಿದೆಯೆಂದೂ, ಕನ್ನಡ ನಾಡಿನ ವಿದ್ವತ್‌ವಲಯಕ್ಕೆ, ಸಾಹಿತ್ಯ ಪ್ರೇಮಿಗಳಿಗೆ, ಕುವೆಂಪು ಅವರ ಅಭಿಮಾನಿಗಳಿಗೆ ಇದು ಸಂತಸದ ಸಂಗತಿ ಆಗಲಿದೆ ಎಂದೂ ನಂಬಿದ್ದೇವೆ.

ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರ ಡಾ. ಎ. ವಿ. ನರಸಿಂಹ ಮೂರ್ತಿ ಅವರ ದಕ್ಷ ಮಾರ್ಗದರ್ಶನದಲ್ಲಿ ಮಹತ್ವದ ಯೋಜನೆಗಳನ್ನು ಕಾರ್ಯರೂಪಕ್ಕೆ ತರುವ ಮೂಲಕ ಕನ್ನಡ ನಾಡಿನ ವಿದ್ವತ್ ಸಮುದಾಯದ ಹಾಗೂ ಸಾಹಿತ್ಯ ಸಂಸ್ಕೃತಿ ಇತಿಹಾಸ ಪ್ರಿಯರ ಮೆಚ್ಚುಗೆಯನ್ನು ಸೂರೆಗೊಂಡಿದೆ. ಕನ್ನಡ ಸಾಹಿತ್ಯ ಲೋಕದ ಹಿರಿಯ ಚೇತನಗಳನ್ನು ಪರಿಚಯಿಸಿಕೊಡುವ ಅದರ ಮಾಲಿಕೆ ಪ್ರಾದೇಶಿಕ ಭಾಷಾ ಸಂಸ್ಕೃತಿ–ಸಾಹಿತ್ಯಗಳ ಬಗೆಗಿನ ಅದರ ಬದ್ಧತೆಗೂ ಸಾಕ್ಷಿಯಾಗಿದೆ. 'ಭವನ್ಸ್ ಬುಕ್ ಯೂನಿವರ್ಸಿಟಿ' ಮಾಲೆಯಲ್ಲಿ ಶ್ರೀಸಾಮಾನ್ಯರಿಗೆ ಮಾತ್ರವಲ್ಲದೆ, ಸಾಹಿತ್ಯ ಸಂಸ್ಕೃತಿ ಇತಿಹಾಸಗಳ ಬಗ್ಗೆ ಆಸಕ್ತರಾಗಿರುವ ಎಲ್ಲರಿಗೂ ಬೋಧಪ್ರದವಾಗಿರುವಂಥ ಕಿರುಹೊತ್ತಿಗೆಗಳನ್ನು ಹೊರತರಲಾಗಿದೆ. ಆಕಾರದಲ್ಲಿ ಕಿರಿದಾದರೂ ಮಹತ್ವದಲ್ಲಿ ಏನೂ ಕಡಿಮೆ ಇಲ್ಲದ ಈ ಪುಸ್ತಕಗಳನ್ನು ಕನ್ನಡದಲ್ಲೂ ಹೊರತರುವ ಯೋಜನೆಯಲ್ಲಿ ಭಾಗಿಯಾಗುವುದು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಹೆಮ್ಮೆಯ ವಿಷಯವಾಗಿದೆ. ಭಾಗೀದಾರಿಕೆಯ ಈ ಸಲಹೆಗೆ ವ್ಯಾವಹಾರಿಕವೂ ಕಾರ್ಯಾತ್ಮಕವೂ ಆದ ರೂಪವನ್ನು ನೀಡುವಲ್ಲಿ ಪ್ರಧಾನ ಪಾತ್ರವಹಿಸಿರುವ ಭಾರತೀಯ ವಿದ್ಯಾ ಭವನದ ಮೈಸೂರು ಕೇಂದ್ರದ ಅಧ್ಯಕ್ಷರಾಗಿರುವ



ಡಾ. ಎ.ವಿ. ನರಸಿಂಹಮೂರ್ತಿ ಅವರಿಗೂ, ಕನ್ನಡ ಪ್ರಕಾಶನ ಕಾರ್ಯಕಾರಿ ಮಂಡಳಿಯ ಅಧ್ಯಕ್ಷರಾಗಿರುವ ಶ್ರೀ ಎನ್. ರಾಮಾನುಜ ಅವರಿಗೂ ವಿದ್ಯಾ ಭವನದ ಬೆಂಗಳೂರು ಶಾಖೆಯ ಕಾರ್ಯಕಾರಿ ನಿರ್ದೇಶಕರಾಗಿರುವ ಪದ್ಮಶ್ರೀ ಡಾ. ಮತ್ತೂರು ಕೃಷ್ಣಮೂರ್ತಿ ಅವರಿಗೂ, ಕಾರ್ಯಕ್ರಮ ಮತ್ತು ಯೋಜನೆಗಳ ನಿರ್ದೇಶಕರಾಗಿರುವ ಶ್ರೀ ಎಚ್.ಎನ್. ಸುರೇಶ್ ಅವರಿಗೂ ಭಾರತೀಯ ವಿದ್ಯಾ ಭವನದ ಕೇಂದ್ರ ಕಛೇರಿಯ ಪದಾಧಿಕಾರಿಗಳಿಗೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತದೆ.

ಅರುವತ್ತರ ದಶಕದಲ್ಲಿ ಈ ಮಾಲೆಯನ್ನು ಆರಂಭಿಸಿದಾಗ ಇದನ್ನು 'ಒಂದು ರೂಪಾಯಿ ಮಾಲೆ' ಎಂದೇ ಕರೆಯಲಾಗಿತ್ತು. ಈಗಲೂ ಜನಸಾಮಾನ್ಯರಿಗೆ ಸುಲಭ ದರದಲ್ಲಿ ಈ ಪುಸ್ತಕಗಳನ್ನು ತಲುಪಿಸುವ ಉದ್ದೇಶದಿಂದ ಈ ಮಾಲೆಯ ಎಲ್ಲ ಪುಸ್ತಕಗಳಿಗೂ ಹತ್ತು ರೂ.ಗಳ ಸಾಂಕೇತಿಕ ದರವನ್ನೇ ಗೊತ್ತು ಪಡಿಸಲಾಗಿದೆ. ಪ್ರಕಟಣೆಯ ವೆಚ್ಚದ ಒಂದು ಭಾಗವನ್ನು ವಿದ್ಯಾಭವನ ಭರಿಸಿರುವುದು ಇದಕ್ಕೆ ಕಾರಣವಾಗಿದೆ. ಈ ಸೌಹಾರ್ದತೆಗಾಗಿಯೂ ನಾವು ವಿದ್ಯಾಭವನದ ಎಲ್ಲ ಪದಾಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಬಯಸುತ್ತೇವೆ.

ಈ ಮಾಲೆಯ ೨೫ ಪುಸ್ತಕಗಳು ಒಮ್ಮೆಗೇ ಹೊರ ಬರುತ್ತಿರುವುದಕ್ಕೆ ಬೆಂಗಳೂರು ಕೇಂದ್ರದ ತ್ರಿಮೂರ್ತಿಗಳ ಸಹಾಯ ಸಹಕಾರ ಮತ್ತು ಮಾರ್ಗದರ್ಶನಗಳು ಮಾತ್ರವಲ್ಲದೆ ಡಾ. ಎ. ವಿ. ನರಸಿಂಹಮೂರ್ತಿಯವರ ದಕ್ಷ ಸಂಪಾದಕತ್ವ ಮತ್ತು ಕಾರ್ಯಪಟುತ್ವಗಳು ಕಾರಣವಾಗಿವೆ. ಇದು ನಮಗೆ ಸಂತೋಷವನ್ನೂ ಹೆಮ್ಮೆಯನ್ನೂ ತಂದುಕೊಟ್ಟಿದೆ. ಇವನ್ನು ಸುಂದರವಾಗಿ ಹೊರತರುವಲಿಯೂ ಅವರಿಂದ ನಮಗೆ ಸಲಹೆ ಸೂಚನೆಗಳು ದೊರೆತಿವೆ. ಈ ಎಲ್ಲ ಕೃಪೆಗಾಗಿ ನಾನು ಆ ಎಲ್ಲ ಮಹನೀಯರಿಗೂ ಕೃತಜ್ಞತಾಪೂರಕವಾದ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಈ ಪುಸ್ತಿಕೆಯ ಕನ್ನಡ ಆವೃತ್ತಿಯನ್ನು ಸಿದ್ಧಪಡಿಸಿ ಕೊಟ್ಟಿರುವ ಶ್ರೀ ಎಚ್.ಆರ್. ಚಂದ್ರವದನ ರಾವ್ ಅವರಿಗೂ, ಕರಡುಗಳ ಪರಿಶೀಲನೆಯಲ್ಲಿ ಸಹಕರಿಸಿರುವ ಶ್ರೀ ಎಚ್.ಎಸ್. ಹರಿಶಂಕರ್ ಅವರಿಗೂ ನಮ್ಮ ವಂದನೆಗಳು.

ಪ್ರಾಧಿಕಾರದ ಕೆಲಸ–ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ, ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ. ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಬೆಂಗಳೂರು – ೫೬

**ಪ್ರಧಾನ್ ಗುರುದತ್ತ**
ಅಧ್ಯಕ್ಷ

## ಅರಿಕೆ

ಭಾರತೀಯ ವಿದ್ಯಾಭವನದ ಸ್ಥಾಪಕರಾದ ಕುಲಪತಿ ಡಾ. ಕೆ. ಎಂ. ಮುನ್ಷಿಯವರು ಜನಸಾಮಾನ್ಯರಲ್ಲಿ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳನ್ನು ಪರಿಚಯಿಸುವ ದೃಷ್ಟಿಯಿಂದ ಭವನ್ಸ್ ಬುಕ್ ಯೂನಿವರ್ಸಿಟಿ ಹಾಗೂ ಅದರಲ್ಲೇ ಸೇರಿಕೊಂಡಿರುವಂತೆ ಒಂದು ರೂಪಾಯಿ ಪುಸ್ತಕ ಮಾಲಿಕೆಯನ್ನು ಆರಂಭಿಸಿದರು. ಇವು ಜನಪ್ರಿಯವಾಗಿ ಅನೇಕ ಶ್ರೇಷ್ಠ ಲೇಖಕರ ಕೃತಿಗಳು ಈ ಮಾಲಿಕೆಯಲ್ಲಿ ಪ್ರಕಟಗೊಂಡಿವೆ. ಅನೇಕ ಈ ಪುಸ್ತಕಗಳು ನಾಲ್ಕಾರು ಮುದ್ರಣಗಳನ್ನು ಕಂಡಿವೆ.

ಇಂತಹ ಶ್ರೇಷ್ಠ ಪುಸ್ತಕಗಳು ಕನ್ನಡ ಭಾಷೆಯಲ್ಲಿ ಲಭ್ಯವಿಲ್ಲದುದನ್ನು ಗಮನಿಸಿದ ಭಾರತೀಯ ವಿದ್ಯಾಭವನ ಇದಕ್ಕಾಗಿ ಒಂದು ಯೋಜನೆಯನ್ನು ಹಾಕಿಕೊಂಡಿದೆ. ಇದರಲ್ಲಿ ಡಾ. ಮತ್ತೂರು ಕೃಷ್ಣಮೂರ್ತಿಗಳ ಪಾತ್ರ ಹಿರಿದಾದುದು; ಅವರು ಅನೇಕ ಸೂಚನೆ, ಸಲಹೆಗಳನ್ನು ನೀಡಿದ್ದಾರೆ. ಇದರಿಂದಾಗಿ ಶ್ರೇಷ್ಠ ಲೇಖಕರ ಚಿಂತನೆಗಳು ಕನ್ನಡ ಜನಗಳಿಗೆ ದೊರಕುವ ಹಾಗೂ ಭಾರತೀಯ ಸಂಸ್ಕೃತಿಯ ವಿವಿಧ ಮುಖಗಳ ಪರಿಚಯ ಕರ್ನಾಟಕದ ಓದುಗರಿಗೆ ಆಗುವಂತೆಯೂ ಆಯಿತು. ಭಾರತೀಯ ವಿದ್ಯಾಭವನದ ಮುಂಬಯಿ ಪ್ರಧಾನ ಕೇಂದ್ರದ ಎಕ್ಸಿಕ್ಯುಟಿವ್ ಸೆಕ್ರೆಟರಿ ಹಾಗೂ ಡೈರೆಕ್ಟರ್ ಜನರಲ್ ಆಗಿರುವ ಶ್ರೀ ಎಚ್. ಎನ್. ದಸ್ತೂರ್ ಅವರು ಈ ಯೋಜನೆಗೆ ಅನುಮತಿ ನೀಡಿ ಸಹಕರಿಸಿದ್ದಾರೆ. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಬೆಂಗಳೂರು ಮತ್ತು ಮೈಸೂರಿನ ಭಾರತೀಯ ವಿದ್ಯಾಭವನಗಳ ಎಲ್ಲ ಪದಾಧಿಕಾರಿಗಳೂ ಈ ಯೋಜನೆಯಲ್ಲಿ ಆಸಕ್ತಿ ವಹಿಸಿದ್ದಾರೆ. ಕರ್ನಾಟಕದ ಖ್ಯಾತ ಲೇಖಕರು ಈ ಕನ್ನಡ ಕೈಂಕರ್ಯದಲ್ಲಿ ಸಕ್ರಿಯವಾಗಿ ಭಾಗವಹಿಸಿ, ಭಾಷಾಂತರಗಳನ್ನು ಮಾಡಿಕೊಟ್ಟಿದ್ದಾರೆ.

ಖ್ಯಾತ ಕನ್ನಡ ವಿದ್ವಾಂಸರೂ, ಕುವೆಂಪು ಕನ್ನಡ ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಆಗಿರುವ ಡಾ. ಪ್ರಧಾನ್ ಗುರುದತ್ತ ಅವರು ಈ ಪುಸ್ತಕಗಳ ಪ್ರಕಟಣೆಯ ಭಾರವನ್ನು ವಹಿಸಿಕೊಂಡು ನಮಗೆ ಉಪಕರಿಸಿದ್ದಾರೆ. ಇಷ್ಟು ಶೀಘ್ರದಲ್ಲಿ ಈ ಪುಸ್ತಕಗಳು ಪ್ರಕಟವಾಗುತ್ತಿರುವುದಕ್ಕೆ ಅವರ ಆಸಕ್ತಿ ಮತ್ತು ಕಾರ್ಯಶೀಲತೆಯೇ ಮುಖ್ಯ ಕಾರಣ. ಅವರಿಗೆ ಭಾರತೀಯ ವಿದ್ಯಾಭವನದ ಪರವಾಗಿ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ.

ಪ್ರಸ್ತುತ, 'ಭಾರತ ಮತ್ತು ಶೀತಲ ಸಮರ' ಎಂಬ ಪುಸ್ತಕ ಖ್ಯಾತ ಲೇಖಕರಾದ ಶ್ರೀ ಎಚ್.ಆರ್. ಚಂದ್ರವದನ ರಾವ್ ಅವರ ಸಮರ್ಥ ಅನುವಾದ. ಅವರಿಗೆ ನಮ್ಮ ಕೃತಜ್ಞತೆಗಳು. ಈ ಪುಸ್ತಕವನ್ನು ಕನ್ನಡಿಗರು ಆದರದಿಂದ ಬರಮಾಡಿಕೊಳ್ಳುತ್ತಾರೆಂದು ನಾವು ಆಶಿಸುತ್ತೇವೆ.

| | |
|---|---|
| **ಎನ್. ರಾಮಾನುಜ** | **ಎ. ವಿ. ನರಸಿಂಹಮೂರ್ತಿ** |
| ಅಧ್ಯಕ್ಷರು | ಅಧ್ಯಕ್ಷರು, ವಿದ್ಯಾಭವನ, ಮೈಸೂರು |
| ಭಾರತೀಯ ವಿದ್ಯಾಭವನ, ಕರ್ನಾಟಕ | ಪ್ರಧಾನ ಸಂಪಾದಕ |



## ಮೂಲ ಸಂಪಾದಕರ ಪ್ರಸ್ತಾವನೆ

ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳು ವಿಶೇಷ ಸಾಫಲ್ಯವನ್ನು ಕಂಡಿವೆ. ಈ ಹನ್ನೊಂದು ವರ್ಷಗಳಲ್ಲಿ ಸುಮಾರು ಒಂದೂಕಾಲು ಮಿಲಿಯನ್ ಪುಸ್ತಕಗಳು ಮಾರಾಟಗೊಂಡಿವೆ. ಆದರೂ ಭವನವು ಆಗಾಗ್ಗೆ ಪ್ರಕಾಶನಗೊಳಿಸುತ್ತಿರುವ ಕಡಿಮೆ ಬೆಲೆಯ ಕೆಲವು ಬಿಡಿ ಪುಸ್ತಕಗಳಿಗೆ ವಿಶೇಷ ಬೇಡಿಕೆ ಇದೆ. ಇದನ್ನು ಪೂರೈಸುವ ದೃಷ್ಟಿಯಿಂದ ಹೊಸ ಒಂದು ರೂಪಾಯಿ ಪುಸ್ತಕಗಳನ್ನು ಹಾಗೂ ಭವನ್ಸ್ ಬುಕ್ ಯೂನಿವರ್ಸಿಟಿ ಮಾಲಿಕೆಯ ಪುಸ್ತಕಗಳನ್ನೂ ಒಟ್ಟೊಟ್ಟಿಗೆ ಪ್ರಕಟಿಸಲು ತೀರ್ಮಾನಿಸಿದೆ.

ಈ ಹೊಸ ಒಂದು ರೂಪಾಯಿ ಮಾಲಿಕೆಯ ಪುಸ್ತಕಗಳು, ಇತರ ಮಾಲಿಕೆಯ ಪುಸ್ತಕಗಳಂತೆ ಸಾಫಲ್ಯವನ್ನು ಪಡೆದು ಭಾರತೀಯ ಸಂಸ್ಕೃತಿಯ ಮೌಲ್ಯದಲ್ಲಿ ಆಸಕ್ತಿ ಇರುವವರಿಗೆ ಇಷ್ಟವಾಗಿ, ಹೆಚ್ಚಿನ ಓದುಗರನ್ನು ತಲಪುತ್ತದೆ ಎಂದು ನಾನು ಭಾವಿಸಿದ್ದೇನೆ.

**ಭಾರತೀಯ ವಿದ್ಯಾಭವನ**
ಚೌಪಾಟಿ ರೋಡ್, ಬೊಂಬಾಯಿ–೭ **ಕೆ. ಎಂ. ಮುನ್ಷಿ**
ವಿಜಯದಶಮಿ, ಸೆಪ್ಟೆಂಬರ್ ೨೮, ೧೯೬೩

## ಪ್ರಕಾಶಕರ ನುಡಿ

ವಿದ್ಯಾ ಭವನ ತನ್ನ ಇಪ್ಪತ್ತೆಂಟನೆಯ ಸಂಸ್ಥಾಪನಾ ದಿನೋತ್ಸವವನ್ನು ಆಚರಿಸುವ ಸಂದರ್ಭದಲ್ಲಿ, ಇತಿಹಾಸದ ಮೇಲೆ ಏರ್ಪಡಿಸುವ 'ವಾರ್ಷಿಕ ಬಿರ್ಲಾ ಎಂಡೋಮೆಂಟ್ ಉಪನ್ಯಾಸ'ಗಳನ್ನು ಚೀನಾ ಮತ್ತು ರಷ್ಯಾಕ್ಕೆ ಹಿಂದಿನ ರಾಯಭಾರಿಯಾಗಿದ್ದ ಶ್ರೀ ಕೆ.ಪಿ.ಎಸ್. ಮೆನನ್‌ರವರು ಭಾರತ ಮತ್ತು ಶೀತಲ ಸಮರ ಎಂಬ ವಿಷಯವನ್ನು ಕುರಿತು ೨೪, ೨೫ ಮತ್ತು ೨೬ ಡಿಸೆಂಬರ್ ೧೯೬೫ರಂದು ಉಪನ್ಯಾಸ ನೀಡಿದರು.

ಈ ಉಪನ್ಯಾಸಗಳನ್ನು ಸಾಮಾನ್ಯ ಓದುಗರ ಅನುಕೂಲಕ್ಕೆ ಪುಸ್ತಕ ರೂಪದಲ್ಲಿ ಭವನ ಪ್ರಕಟಿಸಿದೆ.



## ಪರಿವಿಡಿ


| | | |
|---|---|---|
| | ಮೊದಲ ಮಾತು | v |
| | ಶುಭಾಕಾಂಕ್ಷೆ | vi |
| | ಪ್ರಾಸ್ತಾವಿಕ ನುಡಿ | viii |
| | ಪೀಠಿಕೆ | x |
| | ಅರಿಕೆ | xvi |
| | ಮೂಲ ಸಂಪಾದಕರ ಪ್ರಸ್ತಾವನೆ | xvii |
| | ಪ್ರಕಾಶಕರ ನುಡಿ | xviii |
| ೧. | ಹಿನ್ನೆಲೆ ಮತ್ತು ಆರಂಭ | ೧ |
| ೨. | ಏಳಿಗೆ ಮತ್ತು ಹರವು | ೧೭ |
| ೩. | ಅವನತಿ ಮತ್ತು ಮಾರ್ಪಾಡು | ೩೫ |

**Blank Page**



# ಭಾರತ ಮತ್ತು ಶೀತಲ ಸಮರ

# ೧. ಹಿನ್ನೆಲೆ ಮತ್ತು ಆರಂಭ

ಭಾರತೀಯ ವಿದ್ಯಾಭವನ ತನ್ನ ಇಪ್ಪತ್ತೆಂಟನೆಯ ಸಂಸ್ಥಾಪನಾ ದಿನೋತ್ಸವದ ಸಂದರ್ಭದಲ್ಲಿ ಮೂರು ಉಪನ್ಯಾಸಗಳನ್ನು ನೀಡುವಂತೆ ಡಾ. ಕೆ. ಎಂ. ಮುನ್ಶಿಯವರು ನನ್ನನ್ನು ಕೋರಿ ನನಗೆ ಗೌರವವನ್ನು ತೋರಿಸಿರುವುದಕ್ಕೆ ನಾನು ಅವರಿಗೆ ಆಭಾರಿ. ನನ್ನ ನಿಕಟ ಅನುಭವಕ್ಕೆ ಬಂದ ಯಾವ ವಿಷಯವನ್ನಾದರೂ ನಾನು ಆರಿಸಿಕೊಂಡು ಮಾತಾಡಬಹುದೆಂದು ಅವರು ಸೂಚಿಸಿದರು. ಸ್ವಾತಂತ್ರ್ಯ ದೊರೆತ ನಂತರದ ನನ್ನ ಅನುಭವ ಪೂರ್ಣವಾಗಿ ಅಂತರರಾಷ್ಟ್ರೀಯ ಕ್ಷೇತ್ರಕ್ಕೆ ಸಂಬಂಧಪಟ್ಟದ್ದು. ಆಗ 'ಶೀತಲ ಸಮರ' ಅಂತರರಾಷ್ಟ್ರೀಯ ಜೀವನದಲ್ಲಿ ಬೇರೆ ಬೇರೆ ಮಟ್ಟದಲ್ಲಿ ಪ್ರಾಬಲ್ಯದಲ್ಲಿತ್ತು ಹಾಗೂ ಭಾರತ ಅದರಿಂದ ದೂರವಿರಬೇಕೆಂದು ಪ್ರಯತ್ನಿಸುತ್ತಿತ್ತು. ಹಾಗಾಗಿ ನಾನು ನನ್ನ ಉಪನ್ಯಾಸಕ್ಕೆ 'ಭಾರತ ಮತ್ತು ಶೀಲತ ಸಮರ' ಎನ್ನುವ ವಿಷಯವನ್ನು ಆರಿಸಿಕೊಂಡೆ. ಹೀಗೆ ಆರಿಸಿಕೊಂಡದ್ದು ಕೆಲವು ತಿಂಗಳ ಹಿಂದೆ. ಆದರೆ ಈಗ ನನಗೆ ಆರಿಸಿಕೊಂಡ ವಿಷಯ ಯಥೋಚಿತವಾಗಿದೆಯೇ ಎನ್ನುವ ಅನುಮಾನ ಬರುತ್ತಿದೆ. ಶ್ರದ್ಧಾಪೂರ್ವಕವಾಗಿ ಶೀತಲ ಸಮರದಿಂದ ದೂರವಿರಲು ಇಚ್ಛಿಸುತ್ತಿದ್ದ ಭಾರತ ನೆರೆನಾಡು ಪಾಕಿಸ್ತಾನದೊಡನೆ ಯುದ್ಧದಲ್ಲಿ ತೊಡಗಿಸಿಕೊಳ್ಳಬೇಕಾಯಿತು. ಅದಕ್ಕೆ ದಯಾದಾಕ್ಷಿಣ್ಯವಿಲ್ಲದ ಚೀನಾದ ಬೆಂಬಲವಿತ್ತು. ನೇರಯುದ್ಧದಲ್ಲಿ ತೊಡಗಿಸಿಕೊಂಡಿದ್ದ ಭಾರತಕ್ಕೆ ಈಗ ಶೀತಲ ಸಮರದ ಬಗ್ಗೆಯಾಗಲೀ ಅಥವಾ ಸುಡು ಯುದ್ಧದ ಬಗ್ಗೆಯಾಗಲೀ ಹಿಂದಿನಂತೆ ಹೀನಾಯಿಸಿ ಮಾತಾಡುವುದು ಸಾಧ್ಯವಿಲ್ಲ.

ಜೊತೆಗೆ ಈಗ ಶೀತಲ ಸಮರ ಕೊನೆಗೊಂಡಿದೆ ಅಥವಾ ಅಂತ್ಯಕ್ಕೆ ಬರುತ್ತಿದೆ ಎನ್ನುವ ಅಭಿಪ್ರಾಯ ಕೆಲವು ಕಡೆ ಬಂದಿದೆ. ಜೋಸೆಫ್ ಸ್ಟ್ಯಾಲಿನ್ ಹಾಗೂ ಜಾನ್ ಫಾಸ್ಟರ್ ಡಲ್ಲೆಸ್ ಈ ಬಗ್ಗೆ ಅನುಸರಿಸುತ್ತಿದ್ದ ನೀತಿ, ಅಂದರೆ ಸಮತಾವಾದ ಪ್ರತಿಪಾದಿಸುವುದರಲ್ಲಿ ಮುಂಚೂಣಿಯಲ್ಲಿರುವ ಯು.ಎಸ್.ಎಸ್.ಆರ್. ಹಾಗೂ ಬಂಡವಾಳಶಾಹಿಯನ್ನು ಬೆಂಬಲಿಸುವ ಅಗ್ರ ರಾಷ್ಟ್ರ ಯು.ಎಸ್.ಎ. ನಡುವೆ ಘರ್ಷಣೆ ಈಗ ಇಲ್ಲ. ಹಾಗಾಗಿ ಶೀತಲ ಸಮರದ ಬಗ್ಗೆ ಮಾತೆಂದರೆ ಅದು ಸತ್ತ ಕುದುರೆಯನ್ನು ಚಾಟಿಯಿಂದ ಥಳಿಸುವುದೆಂದಾಗುತ್ತದೆ.

ಈ ನುಡಿಗಟ್ಟು ೧೯೬೫ರಲ್ಲಿ ಶಂಕರ್ಸ್ ವೀಕ್ಲಿಯಲ್ಲಿ ಪ್ರಕಟವಾದ ಒಂದು

ವ್ಯಂಗ್ಯಚಿತ್ರವನ್ನು ನೆನಸಿಕೊಳ್ಳುವಂತೆ ಮಾಡುತ್ತದೆ. ತಾನು ಪ್ರೀತಿಸಿದ ಹೆಂಗಸಿನೊಡನೆ ಮದುವೆಯಾಗುವ ವಿಷಯದಲ್ಲಿ ಸಾಮಾಜಿಕ ಕಟ್ಟುಪಾಡಿನ 'ಶೀತಲ ಸಮರ'ದಿಂದಾಗಿ ರಾಜ ಎಂಟನೆಯ ಎಡ್ವರ್ಡ್ ಸಿಂಹಾಸನ ತ್ಯಜಿಸಿ ಪ್ರೀತಿಸಿದ ಯುವತಿಯನ್ನು ಮದುವೆಯಾಗಿ ಇಂಗ್ಲೆಂಡ್ ಬಿಟ್ಟು ಹೋದ. ದೇಶವನ್ನು ಬಿಡುವ ಮೊದಲು ಒಂದು ಗಂಭೀರವಾದ ಮನಕಲಕುವ ಸ್ವಸ್ತಿ ಭಾಷಣ ಮಾಡಿದ. ಕೆಲವು ದಿನಗಳ ನಂತರ ಕ್ಯಾಂಟರ್‌ಬರಿಯ ಆರ್ಚ್ ಬಿಷಪ್ ತನ್ನ ಧರ್ಮಪ್ರವಚನದಲ್ಲಿ ಆ ವಿಚಾರದಲ್ಲಿದ್ದ ನೈತಿಕ ದೋಷವನ್ನು ಒತ್ತಿ ಹೇಳುತ್ತಾ ಅದರಿಂದ ಕಲಿಯಬೇಕಾದ ನೀತಿಯನ್ನು ತಿಳಿಸಿದ. ಶಂಕರ್ ತನ್ನ ವ್ಯಂಗ್ಯ ಚಿತ್ರದಲ್ಲಿ ಆರ್ಚ್ ಬಿಷಪ್‌ನಲ್ಲಿ ಗತ್ತು ಗಂಭೀರವಿರುವ ವ್ಯಕ್ತಿಯಂತೆ ಮತ್ತು ಆತ ಸತ್ತುಹೋದ ಕುದುರೆಯನ್ನು ಚಾಟಿಯಿಂದ ಥಳಿಸುತ್ತಿರುವಂತೆ ತೋರಿಸಿದ್ದರು. ಭಾರತ ಶೀತಲ ಸಮರವನ್ನು ಅದು ಜೀವಂತವಾಗಿರುವಾಗ ಆಗಾಗ ಥಳಿಸಿತ್ತು ನಿಜ, ಆದರೆ ಕುದುರೆ ಸತ್ತ ಮೇಲೆ ಅದು ಚಾಟಿಯಿಂದ ಹೊಡೆಯುವುದರಲ್ಲಿ ಅರ್ಥವಿಲ್ಲ.

ಆದರೆ ಶೀತಲ ಸಮರ ನಿಜವಾಗಿ ಅಂತ್ಯಗೊಂಡಿದೆಯೇ? ಅಥವಾ, ಸಾವಿನ ಸೋಗನ್ನು ಅದು ಹಾಕಿಕೊಂಡಿದೆಯೇ? ಅಪಾಯವೆನಿಸುವ ಜೀವಂತ ಸ್ಥಿತಿಗೆ ಅದು ಬರಬಹುದೇ? ಅಥವಾ ಮತ್ತಷ್ಟು ಭಯಂಕರವಾಗಿರುವ ಚೀನೀ ಆಕೃತಿಯಲ್ಲಿ ಅದು ಆಗಲೇ ಅಸ್ತಿತ್ವಗೊಂಡಿದೆಯೇ?

ಈ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ನಾವು ಶೀತಲ ಸಮರದ ಆರಂಭದ ಬಗ್ಗೆ ನಮ್ಮ ಗಮನ ಹರಿಸಬೇಕು. ಜಗತ್ತಿಗೆ ಗೊತ್ತಿರುವಂತೆ ಶೀತಲಸಮರ ಎನ್ನುವುದು ಎರಡು ರಾಜಕೀಯ ತತ್ವಗಳ, ಎರಡು ವ್ಯವಸ್ಥೆಗಳ, ಎರಡು ಕೂಟಗಳ, ಎರಡು ರಾಷ್ಟ್ರಗಳ, ಉಚ್ಛ್ರಾಯ ಸ್ಥಿತಿಯಲ್ಲಿದ್ದ ಇಬ್ಬರ ನಡುವೆ ಇದ್ದ ಸಂಘರ್ಷ. ರಾಜಕೀಯ ತತ್ವಗಳೆಂದರೆ – ಬಂಡವಾಳಶಾಹಿ ಮತ್ತು ಸಮತಾವಾದ ; ವ್ಯವಸ್ಥೆಗಳೆಂದರೆ – ಪಾರ್ಲಿಮೆಂಟರಿ ಪ್ರಜಾಪ್ರಭುತ್ವ ಮತ್ತು ಜನತಾ ಪ್ರಜಾಪ್ರಭುತ್ವ, ಅಥವಾ ಮಧ್ಯಮ ವರ್ಗದವರ ಪ್ರಜಾಪ್ರಭುತ್ವ ಮತ್ತು ಕಾರ್ಮಿಕ ವರ್ಗದ ನಿರಂಕುಶ ಪ್ರಭುತ್ವ ; ಎರಡು ಕೂಟಗಳೆಂದರೆ ನ್ಯಾಟೋ (NATO) ಮತ್ತು ವಾರ್ಸಾ ಒಡಂಬಡಿಕೆ (Warsaw Pact) ಎರಡು ರಾಷ್ಟ್ರಗಳೆಂದರೆ – ಯು.ಎಸ್.ಎ. ಮತ್ತು ಯು.ಎಸ್.ಎಸ್.ಆರ್ ; ಉಚ್ಛ್ರಾಯ ಸ್ಥಿತಿಯಲ್ಲಿರುವ ಇಬ್ಬರೆಂದರೆ ಜೋಸೆಫ್ ಸ್ಟ್ಯಾಲಿನ್ ಮತ್ತು ಜಾನ್ ಫಾಸ್ಟರ್ ಡಲ್ಲೆಸ್. ಜಗತ್ತಿನ ಬೇರೆ ಬೇರೆ ಜಾಗದಲ್ಲಿ ಅಂದರೆ ಚೀನಾ, ಕೊರಿಯಾ, ಜರ್ಮನಿ, ರಷ್ಯಾ, ಯುನೈಟೆಡ್ ನೇಷನ್ಸ್ – ಇವುಗಳಲ್ಲಿ ಶೀತಲ ಸಮರ ಬದಲಾವಣೆ ಹೊಂದಿದ್ದನ್ನು ನಾನು ಕಣ್ಣಾರೆ ಕಂಡಿದ್ದೆ. ನಾನು ನನ್ನ ಮೊದಲನೆಯ ಉಪನ್ಯಾಸದಲ್ಲಿ ಶೀತಲ ಸಮರದ ಹಿನ್ನೆಲೆ ಮತ್ತು ಅದರ ಅವನತಿಯನ್ನು, ಎರಡನೆಯದರಲ್ಲಿ ಅದರ ಬೆಳವಣಿಗೆ ಮತ್ತು ಅದು



ಯೂರೋಪ್ ಮತ್ತು ಏಷ್ಯಾದಲ್ಲಿ ಹೇಗೆ ಹರಡಿತು ಎನ್ನುವುದನ್ನೂ, ಮೂರನೆಯದರಲ್ಲಿ ಅದರ ಅವನತಿ ಹಾಗೂ ಮಾರ್ಪಾಡನ್ನು ತಿಳಿಸಲು ಇಚ್ಛಿಸುತ್ತೇನೆ.

ರಾಷ್ಟ್ರೀಯ ತತ್ವಗಳ ಬಗ್ಗೆ ಸಂಘರ್ಷ ಹಾಗೂ ಶೀತಲ ಸಮರ ೧೯೧೭ರಲ್ಲಿ ಜನಿಸಿ ರಷ್ಯಾ ಜಗತ್ತಿನ ಪ್ರಥಮ ಕಮ್ಯುನಿಸ್ಟ್ ರಾಷ್ಟ್ರ ಎನಿಸಿತು. ಹೀಗಾಗಲು ಮುಖ್ಯ ಕಾರಣ ೧೯೧೭ರಲ್ಲಿ ನಡೆದ ಕ್ರಾಂತಿ. ಕ್ರಾಂತಿಗೆ ಮೂಲಕಾರಣ ಮೊದಲ ಜಾಗತಿಕ ಯುದ್ಧ. ನಿಜ, ಸಮತಾವಾದ ತಾತ್ತ್ವಿಕ ರೂಪದಲ್ಲಿ ಮಾರ್ಕ್ಸ್ ಕಾಲದಿಂದ, ಏಕೆ, ಅದಕ್ಕೂ ಮುಂಚಿನಿಂದಲೂ ಇತ್ತು. ಆದರೆ ೧೯೧೭ರವರೆಗೆ ಅದೇನೂ ಬಂಡವಾಳಶಾಹಿಗೆ ವಿಪತ್ತು ಎನಿಸಿರಲಿಲ್ಲ. ಕಮ್ಯುನಿಸಂ ವ್ಯವಸ್ಥೆ ಬೆಳೆಯುವುದಕ್ಕೆ ಮೊದಲ ಜಾಗತಿಕ ಯುದ್ಧ ಕಾರಣ ಎನ್ನುವುದರಲ್ಲಿ ಸಂಶಯವಿಲ್ಲ.

ಅಂತೆಯೇ ಚೀನಾದಲ್ಲಿ ಕಮ್ಯುನಿಸಂ ದಟ್ಟೈಸುವುದಕ್ಕೆ ಕಾರಣ ಎರಡನೆಯ ಜಾಗತಿಕ ಯುದ್ಧ. ಆದರೆ ಇಲ್ಲಿ ನಾವು ಒಂದು ವ್ಯತ್ಯಾಸ ನೋಡುತ್ತೇವೆ. ಮೊದಲನೆಯ ಜಾಗತಿಕ ಯುದ್ಧದ ಸಮಯದಲ್ಲಿ ರಷ್ಯಾ ಆಗಾಗ ಸೋಲು ಅನುಭವಿಸಿತ್ತು, ಜನ ನಿರಾಶೆಗೊಂಡಿದ್ದರು. ಹಾಗಾಗಿ ಅಲ್ಲಿ ಕಮ್ಯುನಿಸಂ ಬೆಳೆಯಲು ಸರಾಗವಾಯಿತು. ಆದರೆ ಎರಡನೆಯ ಜಾಗತಿಕ ಯುದ್ಧದಲ್ಲಿ ಕ್ಯೊಮಿಂಟ್ಯಾಂಗ್ ಗೆದ್ದಿತ್ತು ಮತ್ತು ಯುದ್ಧಾನಂತರದಲ್ಲಿ ಚೀನಾ ಒಂದು ಬಲಿಷ್ಠ ರಾಷ್ಟ್ರವೆಂದು ವಿಶ್ವಸಂಸ್ಥೆ (United Nations) ಅಂಗೀಕರಿಸಿತ್ತು. ಆದರೆ ಯುದ್ಧದಲ್ಲಾದ ಜಯದಿಂದ ಪ್ರಯೋಜನ ಪಡೆದದ್ದು ಕ್ಯೊಮಿಂಟ್ಯಾಂಗ್ ಅಲ್ಲ, ಬದಲು ಕಮ್ಯುನಿಸ್ಟರು ; ಚಿಯಾಂಗ್ ಕೈ – ಶೇಕ್ ಅಲ್ಲ, ಮವೋ ತ್ಸೆ – ತುಂಗ್. ಇದರಿಂದ ಕಲಿಯಬೇಕಾದ ನೀತಿ ಏನೆಂದರೆ ದೇಶ ಯುದ್ಧದಲ್ಲಿ ಗೆಲ್ಲಲಿ ಅಥವಾ ಸೋಲಲಿ ಯುದ್ಧ ಕಮ್ಯುನಿಸಂ ಬೆಳೆಯಲು, ಹರಡಲು ಸಹಾಯ ಮಾಡಿತು ಎನ್ನುವುದು. ಆದರೆ ಯುದ್ಧದ ನಡವಳಿ ಈಗ ಬದಲಾಗಿದೆ. ಪರಮಾಣು ಯುದ್ಧ ಕಮ್ಯುನಿಸಂಗೇ ಆಗಲೀ ಕ್ಯಾಪಿಟಲಿಸಂಗೇ ಆಗಲಿ ಅನುಕೂಲ ತರಲಾರದು, ಎರಡೂ ಧ್ವಂಸಗೊಳ್ಳುವುವು. ಈ ಸತ್ಯ ರಷ್ಯಾಕ್ಕೆ ಅರಿವಾಗಿದೆ, ಆದರೆ ಚೀನಾಕ್ಕೆ ಇಲ್ಲ.

ಕಾರ್ಲ್ ಮಾರ್ಕ್ಸ್ ಪ್ರಕಾರ ಇತಿಹಾಸವೆಂದರೆ ನಿರಂತರವಾಗಿ ನಡೆಯುವ ವರ್ಗದ ಕಲಹ. ಒಂದು ವರ್ಗ ಬಿಡುವಿಲ್ಲದೆ ಇನ್ನೊಂದರೊಡನೆ ಹೋರಾಡಿ ಅದರ ಜಾಗವನ್ನು ಆಕ್ರಮಿಸುತ್ತದೆ. ಅನಂತರ ಮತ್ತೊಂದು ವರ್ಗದ ಹೋರಾಟ. ಈ ಪ್ರಕ್ರಿಯೆ ಪುನರಾವೃತ್ತಿಯಾಗುತ್ತದೆ. ಹಾಗಾಗಿ ಜಗತ್ತು ಹಲವು ಮಜಲುಗಳನ್ನು ದಾಟಿ ಹೋಗಿದೆ – ಊಳಿಗಮಾನ್ಯ ಪದ್ಧತಿ, ರಾಜ ಸರ್ಕಾರ, ಶ್ರೀಮಂತ ಪ್ರಭುತ್ವ, ಕಡೆಗಣಿಸಬಹುದಾದ ಮಧ್ಯಮವರ್ಗ ; ಮುಕ್ತಗೊಳಿಸಬೇಕಾಗಿರುವುದು ಒಂದೇ ವರ್ಗ, ಅದೇ ಶ್ರಮಜೀವಿಗಳ ವರ್ಗ. ಶ್ರಮಜೀವಿಗಳು ಬಹುಸಂಖ್ಯೆಯಲ್ಲಿದ್ದಾರೆ, ಆದರೆ ಕೆಳಮಟ್ಟದಲ್ಲಿದ್ದಾರೆ. ಅವರು 'ಮುಕ್ತ'ಗೊಂಡರೆ ಆಗ ವರ್ಗರಹಿತ ಸಮಾಜ

ಅಸ್ತಿತ್ವಕ್ಕೆ ಬರುತ್ತದೆ. ಹಾಗಾದ ಮೇಲೆ ಯುದ್ಧವಿಲ್ಲ, ಕ್ರಾಂತಿಯಿಲ್ಲ, ನ್ಯಾಯಾಧೀಶರಿಲ್ಲ, ಪೊಲೀಸರಿಲ್ಲ. ಆಗ ರಾಜ್ಯ, ಕಾರ್ಲ್ ಮಾರ್ಕ್ಸ್‌ನ ಮಾತಿನಲ್ಲಿ ಹೇಳಬೇಕಾದರೆ, ಸೊರಗಿಹೋಗುತ್ತದೆ. ಆಮೇಲೆ ಭೂಮಿಯ ಮೇಲೆ ಶಾಂತಿ, ಜನರ ಮಧ್ಯೆ ವಿಶ್ವಾಸ, ಪ್ರೀತಿ.

ಇಂತಹ ಅಸಾಧ್ಯಾದರ್ಶ ವ್ಯವಸ್ಥೆ (utopia) ಬರುವವರೆಗೂ ಜಗತ್ತಿನಲ್ಲಿ ಶಾಂತಿ ಇರಲಾರದು. ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಅಧಿಕಾರದ ವರ್ಗಾವಣೆ ಶಾಂತಿಯುತವಾಗಿ ನಡೆಯುವುದೆಂಬ ಭ್ರಮೆ ಮಾರ್ಕ್ಸ್‌ಗೇನೂ ಇರಲಿಲ್ಲ. ಶ್ರಮಜೀವಿಗಳು ಮಧ್ಯಮ ತರಗತಿಯ ಪ್ರಜಾವರ್ಗದಿಂದ (ಬೂರ್ಷ್ವಾ) ಅಧಿಕಾರವನ್ನು ಪ್ರತಿಭಟಿಸಿ, ದಂಗೆ ಎದ್ದು, ಆಯುಧಗಳನ್ನುಪಯೋಗಿಸಿ ಕಿತ್ತುಕೊಳ್ಳಬೇಕಾಗುವದು. ವಾಗಾಡಂಬರದ ಧ್ಯೇಯಮಂತ್ರದಿಂದ ಯಾವ ಪ್ರಯೋಜನವೂ ಆಗಲಾರದು. ಲೂಯಿ ಬೋನೊಪಾರ್ಟ್‌ನ ಕ್ರಾಂತಿ ಕಾಲದಲ್ಲಿ ಹೇಳಿದ ಗುರಿನುಡಿ – ಸ್ವಾತಂತ್ರ್ಯ ಸಮಾನತೆ, ಭ್ರಾತೃಭಾವ. ಮಾರ್ಕ್ಸ್ ಹೇಳಿದ – ಫ್ರಾನ್ಸ್‌ಗೆ ಬೇಕಾದದ್ದು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃಭಾವವಲ್ಲ, ಬದಲು ಪದಾತಿಸೈನ್ಯ, ಅಶ್ವಸೈನ್ಯ, ಫಿರಂಗಿಗಳು.

ಮತ, ಭಾವನೆ, ಮಧ್ಯಮವರ್ಗದವರ ನೀತಿ – ಇವು ಯಾವುದೂ ಮಾರ್ಕ್ಸ್‌ಗೆ ಬೇಕಿರಲಿಲ್ಲ. ೧೯೬೪ರಲ್ಲಿ ನಡೆದ ಅಂತರರಾಷ್ಟ್ರೀಯ ಕೆಲಸಗಾರರ ಸಮ್ಮೇಳನದಲ್ಲಿ ಕೆಲವು ಪ್ರತಿನಿಧಿಗಳು 'ಕರ್ತವ್ಯ, ಸತ್ಯ, ನ್ಯಾಯ, ಸ್ವಾತಂತ್ರ್ಯ' – ಈ ಪದಗಳನ್ನು ನಿಬಂಧನೆಯಲ್ಲಿ ಸೇರಿಸಬೇಕೆಂದಾಗ ಮಾರ್ಕ್ಸ್ ಅದಕ್ಕೆ ಕಟುವಿರೋಧವನ್ನು ವ್ಯಕ್ತಪಡಿಸಿದರೂ, ಕೊನೆಯಲ್ಲಿ ಅವುಗಳಿಂದ ಯಾವ ತೊಂದರೆಯೂ ಉದ್ಭವಿಸಲಾರದೆಂದರೆ ಅವನ್ನು ಸೇರಿಸಬಹುದೆಂದು ಹೇಳಿದ.

ಇತಿಹಾಸದ ಮುಂದಿನ ಮಜಲು ಮಧ್ಯಮವರ್ಗದವರಿಗೂ ಮತ್ತು ಶ್ರಮಜೀವಿಗಳಿಗೂ ನಡೆಯುವ ಸಮರ ಎನ್ನುವುದು ಮಾರ್ಕ್ಸ್‌ನ ಚಿಂತನೆ. ಅದೊಂದು ಎರಡು ರಾಷ್ಟ್ರಗಳ ಮಧ್ಯೆ ನಡೆಯುವ ಕದನವಲ್ಲ. ಅದು ಜಗತ್ತಿನಲ್ಲಿ ಶೋಷಣೆಗೆ ಒಳಗಾದವರು ಶೋಷಣೆ ಮಾಡುವವರ ವಿರುದ್ಧ ಮಾಡುವ ಕದನ. ಈ ತತ್ವಕ್ಕೆ ಅನುಗುಣವಾಗಿ ಲೆನಿನ್ ಮೊದಲ ಜಾಗತಿಕ ಯುದ್ಧವನ್ನು ಸಾಮ್ರಾಜ್ಯಶಾಹಿ ಯುದ್ಧವೆಂದು ದೂಷಿಸಿ ರಷ್ಯಾವನ್ನು ಯುದ್ಧದಿಂದ ಹೊರಕ್ಕೆ ಎಳೆದ. ದೂರದೃಷ್ಟಿಯಿಲ್ಲದ ಜರ್ಮನ್ ಹೈಕಮಾಂಡ್ ಲೆನಿನ್‌ನನ್ನು ಮುಚ್ಚಿದ ವ್ಯಾಗನ್ ಒಂದರಲ್ಲಿ ಸ್ವಿಟ್ಜರ್‌ಲ್ಯಾಂಡ್‌ನಿಂದ ಸೇಂಟ್ ಪೀಟರ್ಸ್‌ಬರ್ಗ್‌ಗೆ ಕಳುಹಿಸಿತು. ಜರ್ಮನರು ಎಣಿಸಿದಂತೆ ರಷ್ಯಾ ಯುದ್ಧದಿಂದ ದೂರವಾಯಿತು. ಆದರೆ ಕಾಲು ಶತಮಾನದ ಬಳಿಕ ಲೆನಿನ್‌ನ ಉತ್ತರಾಧಿಕಾರಿಗಳು ತಮ್ಮ ವಿರುದ್ಧ ಭೀಕರ ಯುದ್ಧದಲ್ಲಿ ತೊಡಗಿಸಿಕೊಳ್ಳುತ್ತಾರೆಂದು ಅವರು ಕಿಂಚಿತ್ತೂ ಅನುಮಾನಪಟ್ಟುಕೊಂಡಿರಲಿಲ್ಲ.

ಎರಡನೆಯ ಜಾಗತಿಕ ಯುದ್ಧ ಕೂಡ ಎರಡು ರಾಷ್ಟ್ರ / ದೇಶಗಳ ಮಧ್ಯೆ



ನಡೆದ ಯುದ್ಧ – ಅದು ವರ್ಗ ಕಲಹವಲ್ಲ. 'ರಾಷ್ಟ್ರೀಯತೆ' ಎನ್ನುವುದರಲ್ಲಿ ಇನ್ನೂ ಬಲವಿದೆ ಎಂದು ಸ್ಟ್ಯಾಲಿನ್‌ಗೆ ಗೊತ್ತಿತ್ತು. ಜಾಗತಿಕ ಕ್ರಾಂತಿಯ ಬಗ್ಗೆ ಉತ್ಪ್ರೇಕ್ಷೆ ಮಾಡಿ ದೊಡ್ಡ ಕ್ರಾಂತಿಗೆ ಇನ್ನೂ ಬಹುದೂರ ಇದೆ ಎಂದು ಅವನು ಹೇಳಿದ. ಮತ್ತು ಅಗ್ರೇಸರ ಕಮ್ಯುನಿಸ್ಟ್ ಅದನ್ನು ಟ್ರಾಟ್‌ಸ್ಕಿಯನ್ನು ಗಡಿಪಾರು ಮಾಡಿ ರಷ್ಯಾದಲ್ಲಿ ಸಮಾಜಸ್ವಾಮ್ಯವಾದಾಧಾರಿತ ಸರ್ಕಾರ ರಚಿಸಿ ಅದನ್ನು ಬಲಿಷ್ಠ ರಾಷ್ಟ್ರ ಮಾಡಲು ತನ್ನೆಲ್ಲಾ ಗಮನವನ್ನು ಆ ದಿಸೆಯಲ್ಲಿ ಕೇಂದ್ರೀಕರಿಸಿದ. ಪಾಶ್ಚಿಮಾತ್ಯ ಪ್ರಭುತ್ವದ ಅರಿವಿಗೆ ಬರಲು ಮುಂಚೆಯೇ ಅವನಿಗೆ ಹಿಟ್ಲರ್‌ನ ಜರ್ಮನಿಯಿಂದ ವಿಪತ್ತು ಒದಗಲಿದೆ ಎಂದು ಗೊತ್ತಾಗಿತ್ತು. ೧೯೨೯ರಲ್ಲೇ ಅವನು ಒಂದು ಭವಿಷ್ಯವನ್ನು ನುಡಿದಿದ್ದ. "ಇನ್ನು ಹತ್ತು ವರ್ಷದೊಳಗೆ ನಾವು ಅವರನ್ನು (ಜರ್ಮನರನ್ನು) ಹಿಡಿದು ನಿಲ್ಲಿಸಬೇಕು, ಇಲ್ಲದಿದ್ದರೆ ಅವರಿಂದ ನಮ್ಮ ನಾಶ". ಸ್ಟ್ಯಾಲಿನ್ ಮುಷ್ಟಿಯನ್ನು ಬಿಗಿಮಾಡಿ ದೇಶದಲ್ಲಿ ಕೈಗಾರಿಕೀಕರಣ ಪ್ರಾರಂಭಿಸಿದ. ತತ್‌ಫಲವಾಗಿ ಕೈಗಾರಿಕೆಯಲ್ಲಿ ಆರನೆಯ ಸ್ಥಾನದಲ್ಲಿದ್ದ ರಷ್ಯಾ, ಎರಡನೆಯ ಜಾಗತಿಕ ಯುದ್ಧದ ಅಂತ್ಯದೊಳಗೆ ಇಡೀ ಯೂರೋಪ್‌ಗೆ ಮೊದಲ ಸ್ಥಾನ ಗಳಿಸುವಂತಾಯಿತು. ಇದೇ ಸ್ಟ್ಯಾಲಿನ್ ಮಾಡಿದ ಮಹತ್ತಾದ, ಎಂದೆಂದಿಗೂ ನಿಲ್ಲುವ ಕಾರ್ಯವಾಯಿತು.

'ರಷ್ಯಾವತಾರದ' ಮಾರ್ಕ್ಸಿಸಂ ಅಥವಾ 'ಸ್ಟ್ಯಾಲಿನ್‌ಕೃತ' ಮಾರ್ಕ್ಸಿಸಂನಲ್ಲಿ (Russianised or Stalinised Marxism) ಎರಡು ಪದರಗಳ ಪರಿಣಾಮವನ್ನು ಕಾಣಬಹುದು – ಒಂದು: ಜಾಗತಿಕ ಕ್ರಾಂತಿ ಸದ್ಯದಲ್ಲಿ ಸಂಭವಿಸಬಹುದೆಂಬ ಭೀತಿ ಕುಗ್ಗಿದ್ದು, ಎರಡು: ರಷ್ಯಾ ಜಾಗತಿಕವಾಗಿ ಬಲಿಷ್ಠ ರಾಷ್ಟ್ರವಾಗಿದೆ ಎನ್ನುವ ಭೀತಿ ಹುಟ್ಟಿಸಿದ್ದು, ಪ್ರಪಂಚದ ಬಲಶಾಲಿ ರಾಷ್ಟ್ರ ಅದಾಗಿಲ್ಲದಿದ್ದರೂ ಯೂರೋಪಿಯನ್ನರ ಮನದಲ್ಲಿ ಅದು ಒಂದು ಬಗೆಯ ಭೀತಿಯನ್ನು ಒಡ್ಡಿತ್ತು. ಅದರ ಬೃಹತ್ ವಿಸ್ತೀರ್ಣ, ಅಮೂಲ್ಯ ಮೂಲಸಂಪತ್ತು, ಝಾರ್‌ನ ಆಸ್ಥಾನದಲ್ಲಿದ್ದ 'ಅಸಂಸ್ಕೃತ' ವೈಭವ ಮತ್ತು ರಾಯಭಾರ ವರ್ಗದವರ ರಹಸ್ಯಕರ ನಡವಳಿಕೆಗಳು – ಇವೆಲ್ಲಾ ಅದರ ಬಗ್ಗೆ ಭೀತಿ ಹುಟ್ಟಲು ಕಾರಣವಾದವು. ರಷ್ಯಾದ ಸೇನೆ ತಡೆಯಿಲ್ಲದೆ ಮುನ್ನುಗ್ಗುತ್ತಾ ಸೈಬೀರಿಯಾ ದಾಟಿ ವ್ಲಾಡಿವೋಸ್ಟಾಕ್‌ಗೆ ಅನಂತರ ಮಧ್ಯ ಏಷ್ಯಾದಲ್ಲಿ ಒಂದಾದ ಮೇಲೆ ಒಂದು ಖಾಸ್ ರಾಜ್ಯಗಳನ್ನು ಗೆಲ್ಲುತ್ತಾ, ಬ್ರಿಟಿಷ್ ಸಾಮ್ರಾಜ್ಯದ ಭಾರತದ ಗಡಿವರೆಗೆ ಬಂದಾಗ ಸ್ವಾಭಾವಿಕವಾಗಿ ಗ್ರೇಟ್ ಬ್ರಿಟನ್ ರಷ್ಯಾ ಎದುರಾಳಿ ಮಾತ್ರವಲ್ಲ ಅದೊಂದು ಶತ್ರು ಎಂದು ಪರಿಗಣಿಸಿತು. ೧೯ನೇ ಶತಮಾನದಲ್ಲಿ ರಷ್ಯಾ ಬಗ್ಗೆ ಬ್ರಿಟನ್ ಅನುಸರಿಸಿದ ವಿದೇಶಾಂಗ ನೀತಿಗೆ ಇದೇ ಕಾರಣ. ೧೯೧೭ರಲ್ಲಿ ದೈತ್ಯ ರಷ್ಯಾ ಕೆಂಪು ನಿಲುವಂಗಿ ತೊಟ್ಟಾಗ ಅದರ ಬಗ್ಗೆ ಮತ್ತಷ್ಟು ಭೀತಿ ಹೆಚ್ಚಾಯಿತು.

ಹೀಗಾಗಲು ಭಾಗಶಃ ರಷ್ಯಾವೇ ಕಾರಣ. ಬಲದ ಅಭಾವವಿದ್ದರೂ ಭಾರಿ

ಭವಿಷ್ಯತ್ ಬಗ್ಗೆ ಅದು ಉಜ್ವಲ ಉದ್ದೇಶಗಳನ್ನಿಟ್ಟುಕೊಂಡಿತ್ತು. ಒಂದು ಶತಮಾನದ ಹಿಂದೆ 'ಮೃತ ಆತ್ಮಗಳು' ಪುಸ್ತಕದ ಕರ್ತೃ ಹೀಗೆ ಬರೆದಿದ್ದ –

"ರಷ್ಯಾ, ಟ್ರಾಯ್ಕಾವನ್ನು ಹಿಂದೆ ಸರಿಸಿ ಮುಂದೆ ಯಾವುದೂ ಹೋಗದಂತೆ, ನೀನೂ ಕೂಡ ವೇಗವಾಗಿ ಹೋಗುವುದಿಲ್ಲವೇ? ನಿನ್ನ ಚಕ್ರಗಳ ಕೆಳಗಿರುವ ರಸ್ತೆಯಲ್ಲಿ ಹೊಗೆ ಹೊರಡುತ್ತಿಲ್ಲವೇ? ದಾಟುವಾಗ ಸೇತುವೆಗಳು ಅದರುತ್ತಿಲ್ಲವೇ? ಪ್ರೇಕ್ಷಕರು ನಿಂತು ನೀನೊಂದು ಆಕಾಶದಿಂದ ಬಂದ ಸಿಡಿಲೆಂದು ಆಶ್ಚರ್ಯದಿಂದ ನೋಡುತ್ತಿಲ್ಲವೇ? ಭಯಭಕ್ತಿ ಹುಟ್ಟಿಸುವ ನಿನ್ನ ಪ್ರಗತಿ ಸೂಚಿಸುವುದಾದರೂ ಏನನ್ನು? ಗೂಢತೆ ತುಂಬಿರುವ ನಿನ್ನ ಅಶ್ವಗಳಲ್ಲಿ ಅಡಗಿರುವ ಅದೃಶ್ಯ ಶಕ್ತಿಯಾದರೂ ಏನು? ನೀನು ಎಲ್ಲಿಗೆ ಹೊರಟಿರುವೆ, ರಷ್ಯಾ, ನನ್ನ ರಷ್ಯಾ? ಉತ್ತರ ಕೊಡು. ಆದರೆ ಯಾವ ಉತ್ತರವೂ ಬರಲಿಲ್ಲ. ಬರೀ ಕತ್ತುಪಟ್ಟಿಗೆ ಕಟ್ಟಿರುವ ಗಂಟೆಗಳಿಂದ ಬರುವ ವಿಲಕ್ಷಣ ಶಬ್ದ...... ಒಂದಲ್ಲ ಒಂದು ದಿನ ನೀನು ಪ್ರಪಂಚದ ಎಲ್ಲಾ ರಾಷ್ಟ್ರಗಳೂ, ಸಾಮ್ರಾಜ್ಯಗಳೂ ನಿನಗೆ ದಾರಿ ಮಾಡಿಕೊಡುವ ಹಾಗೆ ಬಲ ಪ್ರಯೋಗದಿಂದ ಮಾಡುತ್ತೀಯಾ."

ಈ ಪರಿಚ್ಛೇದ ಓದಿದ ಮೇಲೆ ನಾನು ರಷ್ಯಾದಲ್ಲಿ ಆ ದಶಕದಲ್ಲಾದ ಪ್ರಗತಿ ಕುರಿತು ಬರೆದ ಪುಸ್ತಕಕ್ಕೆ 'ದ ಫ್ಲೈಯಿಂಗ್ ಟ್ರಾಯ್ಕಾ' ಎನ್ನುವ ಹೆಸರು ಕೊಟ್ಟೆ.

ವಿಶ್ವವ್ಯಾಪಿ ಪ್ಯಾನ್–ಸ್ಲಾವಿಕ್ ಸಾಮ್ರಾಜ್ಯ ಸೃಷ್ಟಿಯಾಗುವುದರ ಬಗ್ಗೆ ಕೆಲವು ರಷ್ಯನರು ಕನಸು ಕಂಡರು. ಕವಿ ಟಿಯುಟ್‌ಚೆವ್ ತನ್ನ ಹೆಸರಾಂತ ಕವಿತೆ 'ರಷ್ಯನ್ ಜಿಯಾಗ್ರಫಿ'ಯಲ್ಲಿ ಇದನ್ನೇ ಸೂಚಿಸಿದ್ದಾನೆ. 'ಮಾಸ್ಕೋ, ಪೀಟರ್ಸ್‌ಬರ್ಗ್, ಕಾನ್‌ಸ್ಟಾಂಟೈನ್ ನಗರ – ಈ ಮೂರು ಸಾಮ್ರಾಜ್ಯದ ರಾಜಧಾನಿಗಳು. ಆದರೆ ಸಾಮ್ರಾಜ್ಯದ ಉತ್ತರ, ಪೂರ್ವ, ದಕ್ಷಿಣ ಮತ್ತು ಪಶ್ಚಿಮದ ಗಡಿಗಳೆಲ್ಲಿ? ಭವಿಷ್ಯತ್‌ನಲ್ಲಿ ವಿಧಿ ಅವನ್ನು ನಮಗೆ ತಿಳಿಸುತ್ತದೆ. ನಡುನಾಡಿನಲ್ಲಿರುವ ಸಪ್ತ ಸಾಗರಗಳು, ಸಪ್ತ ಮಹಾನದಿಗಳು, ನೈಲ್‌ನಿಂದ ನೇವಾವರೆಗೆ, ಎಲ್ಬ್‌ದಿಂದ ಹಳದಿ ಸಮುದ್ರದವರೆಗೆ, ವೋಲ್ಗಾದಿಂದ ಯೂಫ್ರಟೆಸ್‌ವರೆಗೆ, ಗಂಗಾದಿಂದ ಡ್ಯಾನ್ಯೂಬ್‌ವರೆಗೆ ರಷ್ಯಾ ಸಾಮ್ರಾಜ್ಯವಿರುತ್ತದೆ, ಅದು ಶತಮಾನಗಳ ತನಕ ಸ್ಥಿರವಾಗಿರುತ್ತದೆ. ಅಮೂರ್ತ ವ್ಯಕ್ತಿ (Spirit) ಹೀಗೆಂದು ಭವಿಷ್ಯ ಹೇಳಿಕೆ. ಡೇನಿಯಲ್‌ನ ಭವಿಷ್ಯವಾಣಿಯೂ ಅದೇ. ಮಾರ್ಕ್ಸ್‌ನ ಶಿಷ್ಯಂದರಿಂದ ಅಮೂರ್ತವ್ಯಕ್ತಿಯ ಹಾಗೂ ಡೇನಿಯಲ್‌ನ ಭವಿಷ್ಯ ಸಫಲವಾಗುವಂತೆ ಕಾಣುತ್ತಿತ್ತು. ಆದರೆ ಹಾಗಾಗಬಾರದೆಂಬ ದೃಢನಿರ್ಧಾರ ಗ್ರೇಟ್ ಬ್ರಿಟನ್ ತೆಗೆದುಕೊಂಡಿತು.

ಎರಡು ಜಾಗತಿಕ ಯುದ್ಧಗಳ ನಡುವೆ ಎರಡು ಬಲಿಷ್ಠ ರಾಷ್ಟ್ರಗಳು ಬ್ರಿಟನ್ ಮತ್ತು ರಷ್ಯಾ ಒಂದರ ವಿರುದ್ಧ ಇನ್ನೊಂದು ನಿಂತವು. ಜನರ, ಮುಖ್ಯವಾಗಿ ಭಾರತೀಯರ ಕಣ್ಣಿಗೆ ರಷ್ಯಾ ಒಂದು ದುಷ್ಟ, ಕ್ರೂರ, ಕುಟಿಲ, ದೈವವಿರೋಧಿ, ಕ್ರಿಸ್ತ



ವಿರೋಧಿ ರಾಷ್ಟ್ರ ಎಂದು ಬ್ರಿಟನ್ ಬಿಂಬಿಸಿತು. ಆದರೆ ಭಾರತೀಯರ ಮೇಲೆ ಇದು ಯಾವ ಪರಿಣಾಮವನ್ನು ಬೀರಲಿಲ್ಲ. ರಷ್ಯಾ ಮತ್ತು ಬ್ರಿಟನ್ ಮಧ್ಯೆ ಉದ್ಭವಿಸಿದ್ದ ಕಲಹದಲ್ಲಿ ಅವರಿಗೆ ವಿಶೇಷವಾದ ಆಸಕ್ತಿ ಇರಲಿಲ್ಲ. ಭಾರತೀಯರು ತಮ್ಮ ದೇಶದ ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವುದರಲ್ಲಿ ತೊಡಗಿಸಿಕೊಂಡಿದ್ದರು, ನಿಜ. ಅವರ ಹೋರಾಟಕ್ಕೆ ರಷ್ಯಾದ ಕ್ರಾಂತಿ ಚಾಲನೆ ನೀಡಿತ್ತು. ಜನರು ಮುಖ್ಯವಾಗಿ ಏಷ್ಯನ್ನರು ಝಾರ್‌ನನ್ನೊಳಗೊಂಡಂತೆ ಪಾಶ್ಚಿಮಾತ್ಯ ಸಾಮ್ರಾಜ್ಯಶಾಹಿ ದಬ್ಬಾಳಿಕೆಯ ವಿರುದ್ಧ ಹೋರಾಡಲು, ಕ್ರಾಂತಿ ಹುರಿದುಂಬಿಸಿತು.

ಭಾರತೀಯರೂ ಸೇರಿ ಅನೇಕ ಏಷ್ಯಾದ ಜನರು ಕ್ರಾಂತಿಯ ಕಹಳೆಯ ಕೂಗಿನಿಂದ ಪುಳಕಿತರಾಗಿದ್ದರು. ಆದರೆ ಭಾರತ ಸ್ವಾತಂತ್ರ್ಯ ಹೋರಾಟವನ್ನು ತನ್ನದೇ ಆದ ರೀತಿಯಲ್ಲಿ ಅಂದರೆ ಮಹಾತ್ಮ ಗಾಂಧಿಯ ನೇತೃತ್ವದಲ್ಲಿ, ಅಹಿಂಸಾಮಾರ್ಗದಲ್ಲಿ ನಡೆಸಲು ನಿರ್ಧರಿಸಿತ್ತು. ಹಾಗಾಗಿ ಅದು ರಷ್ಯಾದಲ್ಲಾಗುತ್ತಿದ್ದ ಘಟನೆಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಲಿಲ್ಲ. ಆಸಕ್ತಿ ವಹಿಸಬೇಕೆಂಬ ಇಷ್ಟ ಅದಕ್ಕಿದ್ದರೂ ಅದು ಸಾಧ್ಯವಾಗುತ್ತಿರಲಿಲ್ಲ. ಏಕೆಂದರೆ ಬ್ರಿಟನ್ ರಷ್ಯಾದಿಂದ ಬರುವ ಎಲ್ಲಾ ಸುದ್ದಿಗಳನ್ನೂ ಶೋಧಿಸಿ ಇಲ್ಲಿಗೆ ಕಳುಹಿಸುತ್ತಿತ್ತು. ಅಷ್ಟೇ ಅಲ್ಲ, ಮಾರ್ಕ್ಸ್ ಮತ್ತು ಲೆನಿನ್ ಅವರ ಕೃತಿಗಳನ್ನು ಆಮದು ಮಾಡಿಕೊಳ್ಳುವುದೂ ಶಿಕ್ಷಾರ್ಹವಾಗಿತ್ತು. ಭಾರತೀಯರು ಮತ್ತು ರಷ್ಯನರ ಬಗ್ಗೆ ಎಲ್ಲಾ ರೀತಿಯ ಸಂಪರ್ಕಕ್ಕೂ ಸರ್ಕಾರ ನೀರೆರಚುತ್ತಿತ್ತು.

ಆದರೆ ಭಾರತೀಯರೊಬ್ಬರು ೧೯೨೭ರಲ್ಲಿ ಕ್ರಾಂತಿಯ ಹತ್ತನೆಯ ವರ್ಷದ ವಾರ್ಷಿಕೋತ್ಸವಕ್ಕೆ ರಷ್ಯಾಕ್ಕೆ ಹೋದರು. ಜವಾಹರ್‌ಲಾಲ್ ಅವರ ಮಾಸ್ಕೋ ಭೇಟಿ ಒಂದು ರೀತಿಯಲ್ಲಿ ಅಸಾಮಾನ್ಯವಾಗಿತ್ತು. ಇಂಡಿಯಾ ಸರ್ಕಾರ ಅವರು ಅಲ್ಲಿಗೆ ಹೋಗಲು ಅವರ ಪಾಸ್‌ಪೋರ್ಟ್ ಮೇಲೆ ತನ್ನ ಅನುಮತಿಯ ಮುದ್ರೆ ಹಾಕುವುದಿಲ್ಲ. ಅವರೊಬ್ಬ ಬ್ರಿಟಿಷ್ ಆಡಳಿತದ ವಿರುದ್ಧ ಹೋರಾಡುವ ಅಪಾಯಕಾರಿ ಮನುಷ್ಯ. ತಾವು ರಷ್ಯಾಕ್ಕೆ ಹೋಗಲು ಸರ್ಕಾರ ಅನುಮತಿ ನೀಡುವುದಿಲ್ಲ ಎಂದು ಅವರಿಗೆ ಗೊತ್ತು. ಅದಕ್ಕೆ ಅವರು ಮೊದಲು ಫ್ರಾನ್ಸ್‌ಗೆ ಹೋಗಿ ಪ್ಯಾರಿಸ್‌ನಲ್ಲಿದ್ದ ಬ್ರಿಟಿಷ್ ರಾಯಭಾರಿಯನ್ನು ಕಂಡರು. ರಾಯಭಾರಿ ಹ್ಯಾರೋನಲ್ಲಿ ಅವರ ಸಹಪಾಠಿ. ಅವರು ಶಾಲೆಯಲ್ಲಿ ಓದುತ್ತಿದ್ದ ದಿನಗಳನ್ನು ಮೆಲಕು ಹಾಕಿದರು. ನೆಹರೂ ಆಕಸ್ಮಿಕ ಎನ್ನುವಂತೆ ತಮಗೆ ಮಾಸ್ಕೋಕ್ಕಾದರೂ ಹೋಗುವ ಇಚ್ಛೆಯಿದೆ ಎಂದಾಗ, "ಅದಕ್ಕೇನು ಅಡ್ಡಿ, ಹಳೆಯ ಗೆಳೆಯಾ?" ಎನ್ನುತ್ತಾ ಪಾಸ್‌ಪೋರ್ಟ್ ಮೇಲೆ ರಷ್ಯಾಕ್ಕೆ ಹೋಗುವ ಅನುಮತಿಯ ಮುದ್ರೆಯನ್ನು ರಾಯಭಾರಿ ಹಾಕಿದ. ನೆಹರೂ ರಷ್ಯಾದಿಂದ ಬರೆದ ಪತ್ರಗಳಿಂದ ಭಾರತೀಯರಿಗೆ ರಷ್ಯಾದಲ್ಲಿ ಆಗುತ್ತಿದ್ದ ಮಹತ್ತರ ಘಟನೆಗಳು ಗೊತ್ತಾದವು.

ರಷ್ಯಾ ಮಾನವಕುಲದ ಶತ್ರು, ಭಾರತದ ವೈರಿ ಎಂದು ನೆಹರೂ ಎಣಿಸಿರಲಿಲ್ಲ. ಅವರು ಬರೆದರು – 'ಇಂಡಿಯಾ ಏಷ್ಯಾದ ಭಾಗ ; ರಷ್ಯಾ ಯೂರೋಪ್ ಮತ್ತು ಏಷ್ಯಾದಲ್ಲಿ ಹರಡಿರುವ ರಾಷ್ಟ್ರ. ಈ ಅಕ್ಕಪಕ್ಕ ದೇಶಗಳ ಬಗ್ಗೆ ಸ್ನೇಹವಿರಬೇಕು ಇಲ್ಲವೇ ಶತ್ರುತ್ವವಿರಬೇಕು, ಆದರೆ ಉದಾಸೀನ, ಉಪೇಕ್ಷೆ ಸಾಧ್ಯವಿಲ್ಲ' ಎಂದು ನೆಹರೂ ರಷ್ಯಾದೊಡನೆ ಸ್ನೇಹದ ಮಾರ್ಗ ಹಿಡಿದರು. ಅವರು ಇಪ್ಪತ್ತು ವರ್ಷಗಳ ನಂತರ ವಿದೇಶಾಂಗ ಮಂತ್ರಿಯಾದಾಗ ಕೈಗೊಂಡ ಮೊದಲ ಕಾರ್ಯವೇನೆಂದರೆ ರಷ್ಯಾದೊಡನೆ ರಾಯಭಾರ ಸಂಬಂಧವನ್ನು ಏರ್ಪಡಿಸಿದ್ದು.

ರಷ್ಯಾ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಮಧ್ಯೆ ಇದ್ದ ಬಿಕ್ಕಟ್ಟಿನ ಸ್ವರೂಪ ನೆಹರೂರವರಿಗೆ ಸ್ಪಷ್ಟವಾಗಿ ಗೊತ್ತಾಗಿತ್ತು. ರಷ್ಯಾ ವಿರುದ್ಧದ 'ಧಾರ್ಮಿಕ ಯುದ್ಧ'ದಲ್ಲಿ ಮುಂಚೂಣಿಯಲ್ಲಿದ್ದ ದೇಶ ಗ್ರೇಟ್ ಬ್ರಿಟನ್. ಒಡಂಬಡಿಕೆ ಮತ್ತು ಮೈತ್ರಿ ಕೂಟಗಳಿಂದ ರಷ್ಯಾವನ್ನು ಸುತ್ತುವರಿದು ಕೊನೆಯಲ್ಲಿ ಅದನ್ನು ಹಿಸುಕಿ ಹಾಕುವುದು ಬ್ರಿಟಿಷರ ತಂತ್ರ ಎಂದು ಅವರು ಬರೆದರು. 'ಲೀಗ್ ಆಫ್ ನೇಷನ್ಸ್ ಮತ್ತು ಲಕರ್ನೊ ಒಡಂಬಡಿಕೆಯ ಉದ್ದೇಶವಾದರೂ ಬಾಲ್‌ಷೆವಿಸಂನೊಡನೆ ಹೋರಾಡುವುದು' ಎಂದು ಬ್ರಿಟಿಷ್ ವಿದೇಶಾಂಗ ಮಂತ್ರಾಲಯದ ಹೆಸರಾಂತ ವಕ್ತಾರ ಆಗರ್ ತನ್ನ ಪುಸ್ತಕದಲ್ಲಿ ಹೇಳಿರುವುದನ್ನು ನೆಹರೂ ಉದ್ಧರಿಸಿರುವುದು ಗಮನಾರ್ಹ. ಬ್ರಿಟಿಷ್ ಸರ್ಕಾರದ ಗಡಸು ನೀತಿಯಿಂದ ಯೂರೋಪಿನ ಒಕ್ಕೂಟ, ಸೋವಿಯಟ್ ಯೂನಿಯನ್‌ನ ವಿರುದ್ಧ ಒಂದು ಗೋಡೆ ನಿರ್ಮಿಸಿದೆ ಎಂದು ಆಗರ್ ಬರೆದ. ಈಗ 'ಬ್ರಿಟಿಷ್' ಅನ್ನುವ ಪದಕ್ಕೆ ಬದಲು 'ಅಮೆರಿಕನ್' ಎಂದರಾಯಿತು, ಕಳೆದ ದಶಕದಲ್ಲಿದ್ದ ಸ್ವಲ್ಪಮಟ್ಟಿಗೆ ಈಗಲೂ ಇರುವ ಸರ್ವಸಾಮಾನ್ಯ ಮನೋಭಾವ ಆಗರ್‌ನ ವಿವರಣೆಯಲ್ಲಿದೆ.

ಆದಿಯಲ್ಲಿ ಅಮೆರಿಕಾ ಶೀತಲ ಸಮರದಿಂದ ದೂರವಿರಲು ಇಚ್ಛಿಸಿತ್ತು. ಕ್ರಾಂತಿಯನ್ನು ಮಾನವನ ಬಿಡುಗಡೆಗೆ ರಷ್ಯಾ ಇಟ್ಟ ದಿಟ್ಟ ದೊಡ್ಡ ಹೆಜ್ಜೆ ಎಂದು ರಾಜಕೀಯದಲ್ಲಿ ಉದಾರಾಭಿಪ್ರಾಯವಿದ್ದ ಅಮೆರಿಕನ್ನರು ಸ್ವಾಗತಿಸಿದ್ದರು. ಅವರಿಗೆ ಕ್ರಾಂತಿ ಬಗ್ಗೆ ದ್ವೇಷವಾಗಲೀ, ತಿರಸ್ಕಾರ ಭಾವನೆಯಾಗಲೀ ಇರಲಿಲ್ಲ. ಚರ್ಚಿಲ್ ಕ್ರಾಂತಿಯನ್ನು ಕೊಳಕು ಕೋತಿ ಆಟ ಎಂದಿದ್ದ, ಆದರೆ ಹಲವು ಅಮೆರಿಕನ್ನರಿಗೆ ಹಾಗೆ ಅನಿಸಿರಲಿಲ್ಲ.

ಆದರೆ ವರ್ಷಗಳು ಉರುಳಿದಂತೆ ಅಮೆರಿಕಾದ ನಿಲುವು ವ್ಯತ್ಯಾಸಗೊಂಡಿತು. ರಷ್ಯಾದಲ್ಲಾದ ಬೆಳವಣಿಗೆಗಳು ಅದಕ್ಕೆ ಜುಗುಪ್ಸೆಯಾಯಿತು, ಪಶ್ಚಿಮ ಯೂರೋಪ್‌ನ ಬೆಳವಣಿಗೆಗಳಿಂದ ಅದಕ್ಕೆ ಭ್ರಮನಿರಸನವಾಯಿತು. ಒಳಸಂಚು ಮಾಡುತ್ತಿದ್ದ ಕ್ಲಿಮೆನೆಸ್ಯು ಮತ್ತು ಲಾಯ್ಡ್ ಜಾರ್ಜ್ ಮತ್ತು ಆದರ್ಶ ಇಟ್ಟುಕೊಂಡಿದ್ದ, ಉದಾತ್ತಭಾವವಿದ್ದ ಅಮೆರಿಕಾ ಅಧ್ಯಕ್ಷ ವುಡ್ರೋ ವಿಲ್‌ಸನ್ ನಡುವೆ ಏಕಾಭಿಪ್ರಾಯ ಮೂಡಲಿಲ್ಲ.



ಆದುದರಿಂದ ಸುಮಾರು ಕಾಲು ಶತಮಾನ ಚಿಪ್ಪಿನಲ್ಲಿ ಅಡಗಿಕೊಂಡಿತು, ಲೀಗ್ ಆಫ್ ನೇಷನ್ಸ್‌ಗೂ ಅದು ಸೇರಲಿಲ್ಲ.

ಮಾಸ್ಕೋದ ಬಾಲ್‌ಷಾಯ್ ಥೇಟರ್‌ನಲ್ಲಿ ನಾವು ಒಂದು ಬ್ಯಾಲೆ (ನರ್ತನ) ನೋಡಿದೆವು. ಕಮ್ಯುನಿಸ್ಟ್ ಜಗತ್ತಿನ ಪ್ರಧಾನ ವೈರಿ ಅಮೇರಿಕಾವನ್ನು ನಗು ಬರುವಂತೆ ಅದರಲ್ಲಿ ಪ್ರತಿಬಿಂಬಿಸಿದ್ದರು. ಮಾಸ್ಕೋದಲ್ಲಿ ನಡೆಯುತ್ತಿದ್ದ ಜನಪ್ರಿಯ ಬ್ಯಾಲೆ ಎಂದರೆ 'ದ ರೆಡ್ ಪಾಪಿ'. ಸಾಮ್ರಾಜ್ಯಶಾಹಿ ರಾಷ್ಟ್ರಗಳಿಂದ ಚೀನಾದ ಶೋಷಣೆ, ಅದರ ವಿರುದ್ಧ ನಡೆಯುವ ದಂಗೆ ಬ್ಯಾಲೆಗೆ ಆಧಾರ. ಇದರಲ್ಲಿ ನಾಯಕಿ ಪಾತ್ರ ವಹಿಸಿದ್ದು ಹೆಸರಾಂತ ಸುಂದರಿ ನರ್ತಕಿ ಲೆಪಿಷಿಸ್‌ಕಾಯ. ಮೂಲದ ಬ್ಯಾಲೆಯಲ್ಲಿ ಪಾತಕಿ (ವಿಲನ್) ಗ್ರೇಟ್ ಬ್ರಿಟನ್. ಮೊದಲನೆಯ ದೃಶ್ಯದಲ್ಲಿ ಬ್ರಿಟಿಷ್ ಹಡಗೊಂದು ಕ್ಯಾಂಟನ್‌ಗೆ ಬರುತ್ತದೆ. ಅಲ್ಲಿ ಅದರಿಂದ ಮೂಟೆ ಮೂಟೆ ಅಫೀಮನ್ನು ಇಳಿಸುವುದನ್ನು ನೋಡುತ್ತೇವೆ. ಅಮೆರಿಕಾ ಬ್ರಿಟನ್‌ನ ಜಾಗಕ್ಕೆ ಬಂದು ನಂಬರ್ ಒನ್ ಶತ್ರುವಾದಾಗ ದೃಶ್ಯ ಬದಲಾವಣೆಗೊಂಡಿತು. ಬ್ರಿಟಿಷ್ ನಾವಿಕರು ಹಡಗಿನಿಂದ ಅಫೀಮು ಮೂಟೆಯನ್ನು ಇಳಿಸುವುದರ ಬದಲು ಅಮೆರಿಕಾದ ನಾವಿಕರು ಬಂದೂಕಗಳನ್ನು ಇಳಿಸುವ ದೃಶ್ಯ ನಾವು ನೋಡುತ್ತೇವೆ. ಈ ಬದಲಾವಣೆ ಗ್ರೇಟ್ ಬ್ರಿಟನ್ ಮತ್ತು ಅಮೆರಿಕಾದ ಸ್ಥಾನಮಾನಗಳಲ್ಲಾದ ಬದಲಾವಣೆಯನ್ನು ಸೂಚಿಸುತ್ತದೆ.

ಹತ್ತೊಂಬತ್ತನೆಯ ಶತಮಾನ ಮತ್ತು ಇಪ್ಪತ್ತನೆಯ ಶತಮಾನದ ಕಾಲುಭಾಗ – ಈ ಅವಧಿಯಲ್ಲಿ ಬ್ರಿಟನ್ ಸಾಗರಗಳ ಮೇಲೆ ತನ್ನ ಸಾರ್ವಭೌಮತ್ವವನ್ನು ಸಾಧಿಸಿಕೊಂಡಿತ್ತು, ಜಗತ್ತಿನಲ್ಲಿ ಶಾಂತಿ ಇತ್ತು. ಅಮೆರಿಕಾ (ಯು.ಎಸ್.ಎ.) ಆಗಲೀ, ರಷ್ಯಾ ಆಗಲೀ (ಯು.ಎಸ್.ಎಸ್.ಆರ್.) ಗ್ರೇಟ್ ಬ್ರಿಟನ್ ಮಾಡಿದಷ್ಟು ದೀರ್ಘಕಾಲ ಯುದ್ಧ ಮಾಡಲಿಲ್ಲ. ರಷ್ಯಾ ಯುದ್ಧದಲ್ಲಿ ಭಾಗವಹಿಸಿದ್ದು ೧೯೪೧ರಲ್ಲಿ ಕುಖ್ಯಾತ ಮಾಲ್ಟೋವ್ – ರಿಬೆನ್‌ಟ್ರಾಪ್ ಒಡಂಬಡಿಕೆಯಂತೆ ರಷ್ಯಾ ೧೯೪೧ರವರೆಗೆ ಜರ್ಮನಿಯ ಮಿತ್ರ ರಾಷ್ಟ್ರ. ಆದರೆ ಬ್ರಿಟನ್ ಯುದ್ಧದ ಆರಂಭದಿಂದ ಅದು ಮುಗಿಯುವವರೆಗು ಹೋರಾಡುತ್ತಲೇ ಇತ್ತು. ನಾಜ಼ಿಸಂ ಮತ್ತು ಫ್ಯಾಸಿಸಂ ವಿರುದ್ಧ ಹೋರಾಡುತ್ತಾ ಅದು ಬಸವಳಿಯಿತು. ಚರ್ಚಿಲ್ ಜಂಭ ಕೊಚ್ಚುತ್ತಾ ಹೇಳಿದ – 'ನಮ್ಮಲ್ಲಿರುವುದನ್ನೆಲ್ಲಾ ನಾವು ಉಟ್ಟುಕೊಳ್ಳುತ್ತೇವೆ.' ಆದರೆ ಬ್ರಿಟಿಷ್ ಸಾಮ್ರಾಜ್ಯ ಕರಗಿಹೋಗುವುದನ್ನು ತಡೆಯಲು ದೇಶಕ್ಕೆ ಶಕ್ತಿ ಇರಲಿಲ್ಲ. ಬ್ರಿಟಿಷ್ ಸಾಮ್ರಾಜ್ಯ ದಿವಾಳಿಯಾಗುವುದರ ಅಧ್ಯಕ್ಷತೆ ವಹಿಸಲು ತಾನು ಪ್ರಧಾನ ಮಂತ್ರಿಯಾಗಿಲ್ಲ ಎಂದು ಚರ್ಚಿಲ್ ಬಡಾಯಿ ಕೊಚ್ಚಿದ್ದ.

ಆದರೆ ೧೯೪೫ರಲ್ಲಿ ನಡೆದ ಚುನಾವಣೆಯಲ್ಲಿ ಚರ್ಚಿಲ್ ರಾಜಕೀಯವಾಗಿ, ಹೀನಾಯ ಸೋಲು ಅನುಭವಿಸಿದ ; ಲೇಬರ್ ಪಕ್ಷ ಅಧಿಕಾರಕ್ಕೆ ಬಂತು. ಆ ಪಕ್ಷ ಭಿತ್ತಿ ಬರಹಗಳನ್ನೋದಿ ಅರ್ಥಮಾಡಿಕೊಂಡಿತ್ತು, ಭಾರತಕ್ಕೆ ಸ್ವಾತಂತ್ರ್ಯ ಕೊಡುವುದೆಂದು

ಅದು ನಿರ್ಧರಿಸಿತು. ವಿಶ್ವದ ಅತ್ಯಂತ ಬಲಿಷ್ಠ ರಾಷ್ಟ್ರ ಎನ್ನುವ ಹೆಗ್ಗಳಿಕೆ ಬ್ರಿಟನ್ ಕಳೆದುಕೊಂಡಿತು.

ಜಗತ್ತಿನಲ್ಲಿ ಬ್ರಿಟನ್‌ಗೆ ಇದ್ದ ಸ್ಥಾನವನ್ನು ಆಕ್ರಮಿಸಲು ಎರಡು ಬಲಿಷ್ಠ ರಾಷ್ಟ್ರಗಳ – ಅಮೆರಿಕಾ ಮತ್ತು ಸೋವಿಯಟ್ ರಷ್ಯಾ – ಮಧ್ಯೆ ಸೆಣಸಾಟ ಶುರುವಾಯಿತು. ಜೊತೆಗೆ ಇನ್ನೂ ಕೆಲವು ಬಲಿಷ್ಠ ರಾಷ್ಟ್ರಗಳು ಪೈಪೋಟಿಗೆ ಇಳಿದವು. ಅತಿ ಬಲಿಷ್ಠ ರಾಷ್ಟ್ರಗಳಾದ ಅಮೆರಿಕಾ ಮತ್ತು ಸೋವಿಯಟ್ ರಷ್ಯಾ ಮಧ್ಯೆ ಪರಮಾಧಿಕಾರಕ್ಕೆ ವಿವಾದ ಹುಟ್ಟುವುದು ಸ್ವಾಭಾವಿಕ. ವಿವಾದ ರಾಜಕೀಯ ತತ್ವಕ್ಕೆ ಸಂಬಂಧಪಟ್ಟದ್ದಾದ್ದರಿಂದ ವಿವಾದ ತೀರಾ ಕಟುವಾಯಿತು. ಮೊದಲನೆಯ ಜಾಗತಿಕ ಯುದ್ಧದ ಸಮಯದಲ್ಲಿ ಬಲಿಷ್ಠ ರಾಷ್ಟ್ರಗಳ ನಡುವೆ ಭಿನ್ನಾಭಿಪ್ರಾಯಗಳಿರಲಿಲ್ಲ. ಒಂದೇ ತರಹದ ಗುರಿಗಳುಳ್ಳ ಹಕ್ಕಿಗಳಂತೆ ಅವು ಇದ್ದವು. ಅದಕ್ಕಾಗಿಯೇ ಸರ್ದಾರ್ ಪಣಿಕ್ಕರ್ ಮೊದಲನೆಯ ಜಾಗತಿಕ ಯುದ್ಧವನ್ನು 'ಯೂರೋಪಿನ ಅಂತರ್ಯುದ್ಧ' ಎಂದು ಕರೆದದ್ದು. ಆದರೆ ಎರಡು ಜಾಗತಿಕ ಯುದ್ಧಗಳ ನಡುವೆ ಅಮೆರಿಕಾ ಮತ್ತು ರಷ್ಯಾ ಮಧ್ಯೆ ಎದ್ದ ವಿವಾದ ವಿನಯಶೀಲವಾಗಿರಲಿಲ್ಲ. ಎರಡನೆಯ ಯುದ್ಧಾನಂತರ ಅದು ಮತ್ತಷ್ಟು ಕೆಟ್ಟಿತು. ಇಲ್ಲಿ ಕೂಡ ನಡೆದದ್ದು ಅಧಿಕಾರಕ್ಕೆ ಹೋರಾಟ, ಆದರೆ ಹೊಸ ಆಯಾಮ – ರಾಜಕೀಯ ಸಿದ್ಧಾಂತ – ಅಲ್ಲಿ ಸೇರಿತ್ತು.

೧೯೪೫ರಲ್ಲಿ ವಿಶ್ವ ಸಂಸ್ಥೆ (United Nations) ಸ್ಯಾನ್‌ಫ್ರಾನ್ಸಿಸ್ಕೋನಲ್ಲಿ ಸ್ಥಾಪನೆಯಾಯಿತು. ಅಲ್ಲಿ ಅಧಿಕಾರಕ್ಕೆ ಕಲಹ ಪ್ರಾರಂಭವಾಯಿತು. ನಾನು ಅಲ್ಲಿದ್ದೆ. ಅಲ್ಲಿ ನಡೆದುದನ್ನು ವಿಶದವಾಗಿ ಹೇಳಲು ನಾನು ಇಚ್ಛಿಸುತ್ತೇನೆ. ಕಾರಣ ಇತಿಹಾಸದ ಹೊಸದೊಂದು ಅಧ್ಯಾಯ ಅಲ್ಲಿ ತೆರೆಯಿತು. ಅಮೆರಿಕಾ (ಯು.ಎಸ್.ಎ.) ಮತ್ತು ಸೋವಿಯಟ್ ರಷ್ಯಾ (ಯು.ಎಸ್.ಎಸ್.ಆರ್.) ಮಧ್ಯೆ ಶೀತಲ ಸಮರ ಪ್ರಧಾನ ಲಕ್ಷಣಗಳು ಕಾಣಿಸಿಕೊಂಡಿದ್ದೇ ಅಲ್ಲಿ. ನಾವು ಸ್ಯಾನ್‌ಫ್ರಾನ್ಸಿಸ್ಕೋ ತಲುಪಿದಾಗ ಸೋವಿಯಟ್ ರಷ್ಯಾ ಮತ್ತು ಪಾಶ್ಚಿಮಾತ್ಯ ದೇಶಗಳ ಮಧ್ಯೆ, ಯುದ್ಧ ಸಮಯದಲ್ಲಿದ್ದ ಮೈತ್ರಿಭಾವ ಒಡೆದುಹೋಗುವ ಚಿಹ್ನೆಗಳು ಕಂಡವು. ನಿಜ, ಯುದ್ಧದ ಸಮಯದಲ್ಲಿ ರಾಷ್ಟ್ರವೂ ಸ್ವಹಿತ ಕಾಪಾಡಿಕೊಳ್ಳುವುದರಲ್ಲಿ ಆಸಕ್ತಿ ಹೊಂದಿತ್ತು, ಸರ್ವರ ಶತ್ರುವನ್ನು ಹೇಗೆ ಸೋಲಿಸಬೇಕು ಎನ್ನುವ ಮನೋಭಾವ ಅಲ್ಲಿ ಕಾಣಲಿಲ್ಲ. ಎರಡನೆಯ ರಣರಂಗವನ್ನು ಪ್ರಾರಂಭಿಸಲು ಮಿತ್ರರಾಷ್ಟ್ರಗಳು ವಿಳಂಬ ಮಾಡುತ್ತಿವೆ ಎಂದು ರಷ್ಯಾ ಆಪಾದಿಸಿತು. ೧೯೪೪ರ ಅಡಿಯಲ್ಲಿ, ಚುಂಗ್‌ಕಿಂಗ್‌ನಲ್ಲಿ ಸೋವಿಯಟ್ ರಷ್ಯಾದ ರಾಯಭಾರಿಯಾಗಿದ್ದ ಮಿ. ಪನುಷ್‌ಕಿನ್, ಮಾಸ್ಕೋದಲ್ಲಿ ಪ್ರಚಲಿತವಾಗಿದ್ದ ಕಥೆಯೊಂದನ್ನು ನನಗೆ ಹೇಳಿದ. ಒಬ್ಬ ಯುವಕ ಚರ್ಚಿನ ಬಾಗಿಲಿನಲ್ಲಿ ಕುಳಿತು ಎರಡನೆಯ ರಣರಂಗ ಶುರುವಾಗಲಿ ಎಂದು ನಿತ್ಯ ಪ್ರಾರ್ಥಿಸುತ್ತಿದ್ದು, ಅದಕ್ಕೆ



ಅವನಿಗೆ ದಿನಕ್ಕೆ ಒಂದು ರೂಬಲ್ ಸಿಕ್ಕುತ್ತಿತ್ತು. ಗಟ್ಟಿಮುಟ್ಟಾಗಿದ್ದ ಅವನನ್ನು ಹೆಚ್ಚಿಗೆ ಸಂಬಳ ಸಿಗುವ ಬೇರೆ ಕೆಲಸ ಏಕೆ ಮಾಡಬಾರದು ಎಂದು ಯಾರೋ ಕೇಳಿದರು. ಅದಕ್ಕೆ ಅವನು ಹೇಳಿದ: ಇದು ಕಡಿಮೆ ಸಂಬಳದ ಕೆಲಸ ನಿಜ, ಆದರೆ ಇದು ಶಾಶ್ವತ ಕೆಲಸ!

ಎರಡನೆಯ ರಣರಂಗವನ್ನು ಎಲ್ಲಿಂದ ಪ್ರಾರಂಭಿಸಬೇಕು ಎನ್ನುವುದರ ಬಗ್ಗೆ ನಾಯಕರ ಬಗ್ಗೆ ತೀಕ್ಷ್ಣ ಚರ್ಚೆಯಾಯಿತು. 'ಯೂರೋಪ್‌ನ ಮೃದತಳದ ಬಾಲ್ಕನ್ ರಾಜ್ಯಗಳ ಮೂಲಕ' ಎಂದು ಚರ್ಚಿಲ್ ಒತ್ತಿ ಹೇಳಿದ. ಸೋವಿಯಟ್ ಸೇನೆ ಪೂರ್ವ ಯೂರೋಪಿನ ರಾಜಧಾನಿಗಳಿಗೆ ಕಾಲಿಟ್ಟರೆ ಆ ರಾಜ್ಯಗಳೆಲ್ಲವೂ ಕಮ್ಯುನಿಸ್ಟ್ ರಾಜ್ಯಗಳಾಗುತ್ತವೆ ಎನ್ನುವ ಭಯ ಅವನಿಗೆ. ಸ್ಟ್ಯಾಲಿನ್ ಚರ್ಚಿಲ್‌ನ ಪ್ರಸ್ತಾಪವನ್ನು ವಿರೋಧಿಸಿದ, ರೂಸ್‌ವೆಲ್ಟ್ ಸ್ಟ್ಯಾಲಿನ್‌ನನ್ನು ಬೆಂಬಲಿಸಿದ, ಎರಡನೆಯ ರಣರಂಗ ಫ್ರಾನ್ಸ್ ಮೂಲಕ ಎಂದು ತೀರ್ಮಾನವಾಯಿತು. ಇದರ ಪರಿಣಾಮ ಪೂರ್ವ ಜರ್ಮನಿಯೊಳಗೊಂಡಂತೆ ಪೂರ್ವ ಯೂರೋಪ್ ಕಮ್ಯುನಿಸ್ಟ್ ಆಯಿತು.

ಎರಡನೆಯ ಜಾಗತಿಕ ಯುದ್ಧದ ನಂತರ ಜಗತ್ತನ್ನು ಹೇಗೆ ವ್ಯವಸ್ಥೆಗೊಳಿಸಬೇಕು ಎನ್ನುವ ವಿಷಯದಲ್ಲಿ ತೀಕ್ಷ್ಣ ಭಿನ್ನಾಭಿಪ್ರಾಯಗಳು ತಲೆ ಎತ್ತಿದವು. ಸ್ಟ್ಯಾಲಿನ್‌ಗೆ ವಿಶ್ವಸಂಸ್ಥೆ (ಲೀಗ್ ಆಫ್ ನೇಷನ್ಸ್)ಯನ್ನು ಪುನಶ್ಚೇತನಗೊಳಿಸುವುದು ಇಷ್ಟವಿರಲಿಲ್ಲ. ಲೀಗ್‌ನ ಕಹಿನೆನಪು ಅವನು ಮರೆತಿರಲಿಲ್ಲ, ಲೀಗ್ ರಷ್ಯಾವನ್ನು ಹಿಂದೆ ಒಕ್ಕೂಟದಿಂದ ಹೊರಹಾಕಿತ್ತು. ಪುನರುತ್ಥಾನ ಪಡೆದ ಲೀಗ್‌ನಲ್ಲಿ ಅಮೆರಿಕಾ ಇಪ್ಪತ್ತು ಲ್ಯಾಟಿನ್ ಅಮೆರಿಕಾ ರಾಜ್ಯಗಳ ಬೆಂಬಲದಿಂದ ಪ್ರಮುಖವಾಗುತ್ತದೆ ಎನ್ನುವ ಭೀತಿ ಅವನಿಗೆ. ತನ್ನ ಆಸಕ್ತಿಗಳನ್ನು ರಕ್ಷಿಸಿಕೊಳ್ಳಲು ಲೀಗ್‌ನ ಸಂವಿಧಾನದಲ್ಲೇ (Charter) ಅಳವಡಿಸಿರುವ ಕೆಲವು ಅಂಶಗಳಿರಬೇಕೆಂದು ಬಲಾತ್ಕರಿಸಿದ. ಪಾಶ್ಚಿಮಾತ್ಯ ಜಗತ್ತಿನೊಡನೆ ಭಿನ್ನಾಭಿಪ್ರಾಯಗಳು ಹೆಚ್ಚು ಹೆಚ್ಚು ಕಾಣಿಸಿಕೊಂಡಾಗ ಸ್ಟ್ಯಾಲಿನ್‌ಗೆ 'ವಿಶ್ವಸಂಸ್ಥೆ' ಬಗ್ಗೆ ಆಸಕ್ತಿ ಕುಸಿಯುತ್ತಾ ಬಂತು. ಅದರ ಬಗ್ಗೆ ತನ್ನ ವಿಶ್ವಾಸ ಕಡಿಮೆ ಎಂದು ತೋರಿಸಲು ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನಕ್ಕೆ ರಷ್ಯಾದ ಪ್ರತಿನಿಧಿಯಾಗಿ ವಿದೇಶಾಂಗ ಮಂತ್ರಿ ಮಾಲಟೋವ್‌ನನ್ನು ಕಳುಹಿಸುವ ಬದಲು ಕಿರಿಯ ಸ್ಥಾನದಲ್ಲಿದ್ದ ರಾಯಭಾರಿ ಗ್ರೊಮಿಕೋನನ್ನು ಕಳುಹಿಸಲು ಯೋಚಿಸಿದ.

ನಾವು ಲಂಡನ್ ಮೂಲಕ ಸ್ಯಾನ್‌ಫ್ರಾನ್ಸಿಸ್ಕೋಗೆ ಹೋಗಬೇಕು. ಲಂಡನ್‌ನಲ್ಲಿ ನಾವು ಇದ್ದಾಗ ಅಧ್ಯಕ್ಷ ರೂಸ್‌ವೆಲ್ಟ್ ನಿಧನರಾದರು ಎನ್ನುವ ಸುದ್ದಿ ಬಂತು. ಇಡೀ ಪ್ರಪಂಚ ಅವನ ಸಾವಿನಿಂದ ತಳಮಳಗೊಂಡಿತು, ಸ್ಟ್ಯಾಲಿನ್ ಕೂಡ ಚಂಚಲಿತನಾದ, ಮಾಸ್ಕೋದಲ್ಲಿದ್ದ ಅಮೆರಿಕಾದ ರಾಯಭಾರಿ ಸ್ಟ್ಯಾಲಿನ್‌ಗೆ ಅಧ್ಯಕ್ಷರ ನಿಧನದ ಬಗ್ಗೆ ಹೇಳಿದಾಗ ಸ್ಟ್ಯಾಲಿನ್ "ಇನ್ನು ಸೋವಿಯಟ್–ಅಮೆರಿಕನ್ ಸಂಬಂಧದ ಪಾಡೇನು?"

ಎಂದು ಉದ್ಗಾರ ಎತ್ತಿದ. ಅದಕ್ಕೆ ರಾಯಭಾರಿ ಸಲಹೆ "ಮಾಲಟೋವ್‌ನನ್ನು ಸ್ಯಾನ್‌ಫ್ರಾನ್ಸಿಸ್‌ಕೋಗೆ ಕಳುಹಿಸಿ, ಎಲ್ಲವೂ ಸರಿಹೋಗುವುದು." ಸ್ಟ್ಯಾಲಿನ್ ಸಲಹೆಯನ್ನು ಅಂಗೀಕರಿಸಿದ.

ಮಿ. ಮಾಲಟೋವ್ ರಷ್ಯಾದ ಆದರ್ಶ ಪ್ರತಿನಿಧಿ. ಅವನೊಬ್ಬ ನಿಷ್ಠುರ. ಅತಿನಿಷ್ಠೆ, ಅಸಾಮಾನ್ಯ ದೂರದೃಷ್ಟಿ, ಭಾವನೆಗಳಿಲ್ಲದ, ಒಂದೇ ಆಯಾಮವುಳ್ಳ ವ್ಯಕ್ತಿ.

೧೯೨೪ರಲ್ಲಿ ಸ್ಟ್ಯಾಲಿನ್ ಕಮ್ಯುನಿಸ್ಟ್ ಪಾರ್ಟಿಯ ಕೇಂದ್ರ ಸಮಿತಿಗೆ ಅವನ ಹೆಸರನ್ನು ಸೂಚಿಸಿದಾಗ ಲೆನಿನ್, 'ಏನು? ಅವನನ್ನೆ!' ಎಂದ. ಆಗ ಸ್ಟ್ಯಾಲಿನ್ ಮಾಲಟೋವ್‌ಗಿರುವ ಕಾರ್ಯತತ್ಪರತೆ, ಕಷ್ಟಪಟ್ಟು ದುಡಿಯುವ ಗುಣ ತಿಳಿಸಿದಾಗ ಲೆನಿನ್ ಹೇಳಿದ – 'ನಿನಗೆ ಬೇಕೆಂದರೆ ಅವನನ್ನು ಇಟ್ಟುಕೋ. ರಷ್ಯಾದಲ್ಲಿ ಅವನೇ ಅತ್ಯುತ್ತಮ ದಫ್ತರು ಗುಮಾಸ್ತ'. ಆದರೆ ಮಿ. ಮಾಲಟೋವ್‌ಗೆ ಗೂಳಿನಾಯಿಯ ಪಟ್ಟು ಹಿಡಿಯುವ ಗುಣವಿತ್ತು. ಆತನ ಈ ಗುಣ ಸ್ಯಾನ್‌ಫ್ರಾನ್ಸಿಸ್‌ಕೋಗೆ ಬಂದೊಡನೆ ಗೊತ್ತಾಯಿತು. ಅರ್ಜೆಂಟೈನಾ ರಿಪಬ್ಲಿಕ್ ಅನ್ನು ವಿಶ್ವಸಂಸ್ಥೆಗೆ (United Nations) ಸೇರಿಸಬಾರದೆಂದು ಅವನು ಪಟ್ಟುಹಿಡಿದ. ಅರ್ಜೆಂಟೈನಾ ಬಗ್ಗೆ ಹೇಳಿದ್ದನ್ನು ಜ್ಞಾಪಿಸಿದ – 'ಈ ಅರ್ಧಗೋಳದಲ್ಲಿ ಫ್ಯಾಸಿಸಂ ಸಾಂಕ್ರಾಮಿಕದ ಮೂಲ ಮತ್ತು ಕೇಂದ್ರ ಅರ್ಜೆಂಟೈನಾ'. ಮಾಲಟೋವ್, ಕಾರ್ಯಕಾರಿ ಸಮಿತಿಯಲ್ಲಿ, ಸ್ಟೀರಿಂಗ್ ಕಮಿಟಿಯಲ್ಲಿ ಸಕಲ ಸದಸ್ಯರ ಸಭೆಯಲ್ಲಿ ಅದರ ಪ್ರವೇಶವನ್ನು ಬಲವಾಗಿ ವಿರೋಧಿಸಿದ. ಆದರೆ ಸಕಲ ಸದಸ್ಯರು ಸಭೆಯಲ್ಲಿ ಅರ್ಜೆಂಟೈನಾಕ್ಕೆ ವಿಶ್ವಸಂಸ್ಥೆಯಲ್ಲಿ ಪ್ರವೇಶ ಸಿಕ್ಕಿತು. ನಲವತ್ತೆಂಟರಲ್ಲಿ ಇಪ್ಪತ್ತೆಂಟು ಮತಗಳು ಅದರ ಪರವಾಗಿ ಬಂತು. ಇಪ್ಪತೆಂಟರಲ್ಲಿ ಇಪ್ಪತ್ತು ಲ್ಯಾಟಿನ್ ಅಮೆರಿಕಾ ರಾಜ್ಯಗಳು, ವಿಶ್ವಸಂಸ್ಥೆಯಲ್ಲಿ ಅಮೆರಿಕಾದ ಪ್ರಭಾವವಿರುತ್ತದೆ ಎನ್ನುವುದು ಖಚಿತವಾಯಿತು. ಮಾಲಟೋವ್ ಹೇಳಿದ – 'ಲ್ಯಾಟಿನ್ ಅಮೆರಿಕಾ ಜೊತೆ ಎಂಟು ರಾಜ್ಯಗಳು ಮಾತ್ರ ಒಪ್ಪಿಗೆ ಸೂಚಿಸಿದ್ದರೂ ಸಭೆ ಗೊತ್ತುವಳಿಯನ್ನು ಅನುಮೋದಿಸಿತು.'

ಮಾಲಟೋವ್ ಅರ್ಜೆಂಟೈನಾ ಘಟನೆಯನ್ನು ಪರಿಣಾಮಕಾರಿಯಾಗಿ ಉಪಯೋಗಿಸಿಕೊಂಡು ವಿಶ್ವಸಂಸ್ಥೆಯಲ್ಲಿ ಮಹಾನ್ ರಾಷ್ಟ್ರಗಳಿಗೆ ವೀಟೋ ಅಧಿಕಾರವಿರಬೇಕಾದ ಅವಶ್ಯಕತೆಯನ್ನು ಹೇಳಿದ. ಸ್ಯಾನ್‌ಫ್ರಾನ್ಸಿಸ್‌ಕೋ ಸಮ್ಮೇಳನದಲ್ಲಿ ವೀಟೋ ಬಗ್ಗೆ ಎದ್ದಷ್ಟು ಕಾವು ಇನ್ನು ಯಾವ ವಿಷಯದಲ್ಲೂ ಏಳಲಿಲ್ಲ. ವೀಟೋ ವಿಷಯದಲ್ಲಿ ಐದು ಮಹಾನ್ ರಾಷ್ಟ್ರಗಳು ಒಂದು ಕಡೆ ಇದ್ದರೆ ಮಿಕ್ಕ ನಲವತ್ತೈದು ಕಿರಿಯ ರಾಷ್ಟ್ರಗಳು ಅದನ್ನು ವಿರೋಧಿಸಿದವು ಅಥವಾ ಕೆಲವು ಬದಲಾವಣೆಗಳನ್ನು ಸೂಚಿಸಿದವು. 'ಅದೊಂದು ಬಲಶಾಲಿಗಳಿಗೆ ಇರುವ ರಕ್ಷಾ ಕವಚ, ಬಲಹೀನರಿಗೆ ಹಾಸ್ಯಾಸ್ಪದ' ಎಂದು ಚರ್ಚಿಲ್ ಹೇಳಿದ್ದನ್ನು ಅವು ಜ್ಞಾಪಿಸಿದವು. ಲ್ಯಾಟಿನ್ ಅಮೆರಿಕಾದ



ಸದಸ್ಯನೊಬ್ಬ ಹೇಳಿದ್ದು: ಹೀಗೆ 'ಸಣ್ಣ ರಾಜ್ಯಗಳು ಹೋರಾಟಕ್ಕಿಳಿದರೆ ಬಲಿಷ್ಠ ರಾಜ್ಯಗಳು ಅದನ್ನು ನಿಲ್ಲಿಸುತ್ತವೆ, ಆದರೆ ಬಲಿಷ್ಠ ರಾಜ್ಯಗಳು ಒಂದಕ್ಕೊಂದು ಎದುರಾದರೆ ದೇವರು ನಮ್ಮ ಸಹಾಯಕ್ಕೆ ಬರುತ್ತಾನೆ.'

ಸರ್ವಸದಸ್ಯರ ಸಭೆಯಲ್ಲಿ ವೀಟೊ ಸೃಷ್ಟಿಸಿದ ಕಾವಿನ ಬಗ್ಗೆ ಅಮೆರಿಕಾದ ಪ್ರತಿನಿಧಿ ಸೆನೇಟರ್ ಕನೋಲಿ ಹೀಗೆ ಹೇಳಿದ – 'ಅದು ಭಯ ಹುಟ್ಟಿಸುವ ಪದ, ಆ ಸ್ವಪ್ನ ಪಿಶಾಚಿ, ಆ ಹುಳು, ಆ ತುಂಟ ಪ್ರಾಣಿ ಹಾಸಿಗೆಯೊಳಗೆ ಬರುತ್ತದೆ.' ಐದು ಬಲಿಷ್ಠ ರಾಷ್ಟ್ರಗಳಿಗಿರುವ ವಿಶೇಷ ಸವಲತ್ತನ್ನು ಅವನು ಭದ್ರತಾ ಮಂಡಲಿಯಲ್ಲಿ (ಸೆಕ್ಯುರಿಟಿ ಕೌನ್ಸಿಲ್) ಹೀಗೆ ಹೇಳಿದ – 'ಈ ಐದು ರಾಷ್ಟ್ರಗಳು ಜಗತ್ತನ್ನು ತುಳಿಯಲು ಹೊರಟಿದ್ದವರ ಹಿಮ್ಮಡಿಯಿಂದ ಕಾಪಾಡಿದಷ್ಟು ಮಾತ್ರ ಆಕ್ರಮಣಕಾರಿಗಳ ಖಡ್ಗದಿಂದ ರಕ್ಷಿಸಿದವು. ನಿಮಗೆ ಸಂವಿಧಾನ ಬೇಕೇ? ಬೇಡವೇ? ಪ್ರಪಂಚ ಪುನಃ ರಕ್ತದಿಂದ ತೊಯ್ಯಬೇಕೇ?' ಬ್ರಿಟಿಷ್ ಪ್ರತಿನಿಧಿ ಹಿಂದೆ ಹೇಳಿದ – 'ನಾವು ರಕ್ತ, ಬೆವರು ಮತ್ತು ಕಣ್ಣೀರು ಹರಿಸಿದ್ದೇವೆ'. ಅವನು ಹೀಗೆ ಮೂರೇ ಪದಗಳಲ್ಲಿ ವೀಟೋ ಬಗ್ಗೆ ತನ್ನ ಅಭಿಪ್ರಾಯ ಸೂಚಿಸಿದ್ದ. ಕಿರಿಯ ನಲವತ್ತೈದು ರಾಷ್ಟ್ರಗಳ ಪರವಾಗಿ ಸ್ವಯಂ ಘೋಷಿತ ನಾಯಕ, ಆಸ್ಟ್ರೇಲಿಯಾದ ಪ್ರತಿನಿಧಿ ಇವ್ಯಾಟ ಮಾರ್ನುಡಿದ – 'ಕಿರಿರಾಷ್ಟ್ರಗಳೇನು ರಕ್ತ, ಬೆವರು ಮತ್ತು ಕಣ್ಣೀರನ್ನು ಸುರಿಸಲಿಲ್ಲವೇ? ನೀವು ಈ ಬಗ್ಗೆ ಕಡಿಮೆ ಮಾತನಾಡಿದಷ್ಟೂ ಹೆಚ್ಚು ಉತ್ತಮ. ಹಿಂದೆ ಇಂಡಿಯಾದ ವೈಸ್‌ರಾಯ್, ಈಗ ವಾಷಿಂಗ್‌ಟನ್‌ನಲ್ಲಿ ಬ್ರಿಟನ್‌ನಿನ ರಾಯಭಾರಿಯಾಗಿದ್ದ ಲಾರ್ಡ್ ಹ್ಯಾಲಿಫಾಕ್ಸ್ ಮನತಟ್ಟುವ ಹಾಗೆ ಹೇಳಿದ್ದೇನೆಂದರೆ 'ಜಗತ್ತಿನ ಶಾಂತಿಗೆ ಬಲಿಷ್ಠರಾಷ್ಟ್ರಗಳ ಮಧ್ಯೆ ಸಾಮರಸ್ಯವಿರುವುದು ಅವಶ್ಯಕ, ಇಲ್ಲದಿದ್ದರೆ ಜಗತ್ತು ದೈತ್ಯ ಅಂಗಗಳ ಹೋಳಾಗಿ ಮಹಾಯುದ್ಧವಾಗುತ್ತದೆ. ಆಗ ಮೊದಲು ಕಿರಿಯ ರಾಜ್ಯಗಳು ನೋವನ್ನು ಅನುಭವಿಸಬೇಕಾಗುತ್ತದೆ. ಐದು ಬಲಿಷ್ಠ ರಾಷ್ಟ್ರಗಳ ಮತ್ತು ನಲವತ್ತೈದು ಕಿರಿಯ ರಾಷ್ಟ್ರಗಳ ಮಧ್ಯೆ ಎದ್ದ ವಿವಾದದಲ್ಲಿ ಭಾರತದ ನಿಯೋಗ ಮಧ್ಯಸ್ಥ ನೀತಿ ಅನುಸರಿಸಿತು. ನಿಯೋಗದ ನಾಯಕ ಸರ್ ರಾಮಸ್ವಾಮಿ ಮೊದಲಿಯಾರ್ ಹೀಗೆ ಹೇಳಿದರು – 'ನಾವು ವೀಟೊವನ್ನು ಒಪ್ಪುತ್ತೇವೆ. ಅದನ್ನು ಜಗತ್ತಿನಲ್ಲಿ ಶಾಂತಿ ಕಾಪಾಡುವುದಕ್ಕೆ ಈ ಐದು ಬಲಿಷ್ಠ ರಾಷ್ಟ್ರಗಳು ಉಪಯೋಗಿಸುತ್ತವೆ ಎಂಬ ನಂಬಿಕೆಯಿಂದ ನಾವು ವೀಟೊ ಚಲಾವಣೆಯನ್ನು ಒಪ್ಪುತ್ತೇವೆ.'

ಆದರೆ ಬಲಿಷ್ಠ ರಾಷ್ಟ್ರಗಳ ಮಧ್ಯೆ ವೀಟೊ ವ್ಯಾಪ್ತಿಯ ಬಗ್ಗೆ ಭಿನ್ನಾಭಿಪ್ರಾಯಗಳಿದ್ದವು. ಚರ್ಚಿಲ್ ಅದನ್ನು ಬಲಿಷ್ಠರಿಗೆ ರಕ್ಷಾಕವಚ, ಬಲಹೀನರಿಗೆ ಹಾಸ್ಯಾಸ್ಪದ ಎಂದು ಹೇಳಿದ್ದ. ಬ್ರಿಟನ್ ಒಂದು ಬಲಿಷ್ಠ ರಾಷ್ಟ್ರವಾದುದರಿಂದ ರಕ್ಷಾಕವಚವನ್ನಾಗಿ ಅದನ್ನು ಇಟ್ಟುಕೊಳ್ಳುವುದಕ್ಕೆ ಅವನಿಗೆ ಮುಜುಗರವೇನೂ ಇಲ್ಲ. ಸ್ಯಾನ್‌ಫ್ರಾನ್ಸಿಸ್‌ಕೊ ಸಮ್ಮೇಳನದಲ್ಲಿ ಹೋಗುವ ಸಂದರ್ಭದಲ್ಲಿ ನಾವು

ಲಂಡನ್‌ನಲ್ಲಿ ನಡೆದ ಕಾಮನ್‌ವೆಲ್ತ್ ಸಮಾವೇಶದಲ್ಲಿ ಭಾಗವಹಿಸಿದ್ದೆವು. ಚರ್ಚಿಲ್ ಅಧ್ಯಕ್ಷತೆ ವಹಿಸಿದ್ದ. ಆಗ ಅವನು ವೀಟೊ ಬಗ್ಗೆ ಹೇಳಿದ್ದು ಹೀಗೆ – 'ಇದರಿಂದ ಗ್ರೇಟ್ ಬ್ರಿಟನ್‌ಗೆ ಉಪಯೋಗವಾಗಬಹುದು. ಚೀನಾ ಏನಾದರೂ ಹಾಂಕಾಂಗ್ ಅನ್ನು ತನ್ನದೆಂದು ವಾದಿಸಿ ಪುನಃ ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸಿದರೆ ನಾನು ವೀಟೊ ಚಲಾಯಿಸುತ್ತೇನೆ. ಹಾಂಕಾಂಗ್ ಅನ್ನು ನನ್ನ ಶವದ ಮೇಲೆ ಪಡೆಯುತ್ತೀರಿ.'

ವೀಟೊ ಅಧಿಕಾರಕ್ಕೆ ರಷ್ಯಾ ಮಾಡಿದಷ್ಟು ಒತ್ತಾಯ ಇನ್ನು ಯಾವ ರಾಷ್ಟ್ರವೂ ಮಾಡಲಿಲ್ಲ. ಇದಕ್ಕೆ ಕಾರಣ ವಿಶ್ವಸಂಸ್ಥೆಯಲ್ಲಿ ಅದಕ್ಕಿದ್ದ ಅನಾನುಕೂಲ ಪರಿಸ್ಥಿತಿ, ಅದರ ವೈರಿ ಅಮೆರಿಕಾ ಮತ್ತು ಅಮೆರಿಕಾದ ಖಾಸಾ ಮಿತ್ರದೇಶಗಳ ಸಂಖ್ಯೆ ಜಾಸ್ತಿ. ಇದು ಸ್ಟ್ಯಾಲಿನ್‌ಗೆ ಚೆನ್ನಾಗಿ ಗೊತ್ತು. ಅವನು ಹೇಳಿದ – 'ಸೋವಿಯಟ್ ಯೂನಿಯನ್‌ನಲ್ಲಿ ಹದಿನಾರು ರಾಜ್ಯಗಳಿವೆ. ಎಲ್ಲವೂ ಸ್ವತಂತ್ರ ಸಾರ್ವಭೌಮತ್ವದ ಹಕ್ಕುಳ್ಳ ರಾಜ್ಯಗಳು. ಅವಕ್ಕೆ ಸೋವಿಯಟ್ ಒಕ್ಕೂಟದಿಂದ ಯಾವಾಗ ಬೇಕಾದರೂ ಬೇರೆಯಾಗಿ ಹೋಗುವ ಹಕ್ಕಿದೆ. ಹಾಗಾಗಿ ಅವುಗಳನ್ನು ಬೇರೆ ಬೇರೆ ರಾಷ್ಟ್ರಗಳೆಂದು ಅಂಗೀಕರಿಸಬೇಕು.' ಇದೊಂದು ಗಮನಾರ್ಹ ಅದ್ಭುತ ಕಲ್ಪನೆ. ಹೀಗಾದರೆ ಸಂಖ್ಯಾ ಬಲದಲ್ಲಿ ಯು.ಎಸ್.ಎಸ್.ಆರ್. (ಸೋವಿಯಟ್ ರಷ್ಯಾ) ಯು.ಎಸ್.ಎ. ಅಷ್ಟೇ ಹೆಚ್ಚು ಕಡಿಮೆ ಆಗುತ್ತದೆ. ಯು.ಎಸ್.ಎ. (ಅಮೆರಿಕಾಕ್ಕೆ)ಗೆ ಸೋವಿಯಟ್ ರಷ್ಯಾವನ್ನು ಹೇಗಾದರೂ ವಿಶ್ವ ಸಂಸ್ಥೆಯಲ್ಲಿ ಸೇರಿಸಿಕೊಳ್ಳಬೇಕೆಂಬ ತವಕವಿತ್ತು. ಹಾಗಾಗಿ ಸೋವಿಯಟ್ ಯೂನಿಯನ್‌ನ ಯೂಕ್ರೇನ್ ಮತ್ತು ಬೈಲೋ ರಷ್ಯಾವನ್ನು ಪ್ರತ್ಯೇಕ ಸದಸ್ಯ ರಾಷ್ಟ್ರಗಳೆಂದು ಸೇರಿಸಿಕೊಳ್ಳಲು ಅಮೆರಿಕಾ ಮತ್ತು ಇತರ ರಾಷ್ಟ್ರಗಳು ಒಪ್ಪಿದವು.

'ವೀಟೊ'ವನ್ನು ಹೇಗೆ ಕರಾರುವಾಕ್ಕಾಗಿ ಅರ್ಥೈಸಬೇಕೆಂದು ಸೋವಿಯಟ್ ಯೂನಿಯನ್ ಒತ್ತಿ ಹೇಳಿತು – ಭದ್ರತಾ ಸಮಿತಿ (ಸೆಕ್ಯುರಿಟಿ ಕೌನ್ಸಿಲ್) ಪ್ರತಿಪಾದಿಸುವ ಯಾವ ವಿಷಯದ ಬಗ್ಗೆಯೂ ಸಾಮಾನ್ಯ ಸಭೆಗೆ (ಜನರಲ್ ಅಸೆಂಬ್ಲಿ) ಪ್ರಶ್ನಿಸುವ ಹಕ್ಕು ಇರಬಾರದು. ಆದರೆ ಸಾಮಾನ್ಯ ಸಭೆ ತೆಗೆದುಕೊಳ್ಳುವ ತೀರ್ಮಾನ ಮತ್ತು ಕಾರ್ಯಗಳನ್ನು ಭದ್ರತಾ ಸಮಿತಿ ನಿಷೇಧಿಸಬಹುದು.

ಬಲಿಷ್ಠ ರಾಷ್ಟ್ರಗಳನ್ನೊಳಗೊಂಡು ಹೆಚ್ಚು–ಕಡಿಮೆ ಸಮ್ಮೇಳನಕ್ಕೆ ಬಂದಿದ್ದ ಎಲ್ಲಾ ರಾಷ್ಟ್ರಗಳು ಇದಕ್ಕೆ ಅಸಮ್ಮತಿ ಸೂಚಿಸಿದವು. ಆದರೂ ಸೋವಿಯಟ್ ರಷ್ಯಾ ತನ್ನ ನಿಲುವನ್ನು ಬದಲಾಯಿಸಿಕೊಳ್ಳಲಿಲ್ಲ. ಕ್ರೆಮ್‌ಲಿನ್ ತೆಗೆದುಕೊಳ್ಳುವ ತೀರ್ಮಾನಕ್ಕೆ ಕಾಯುತ್ತಾ ಇಪ್ಪತ್ತುಮೂರು ದಿನ ಸಮ್ಮೇಳನ ಅನಿಶ್ಚಯತೆಯಿಂದ ಕಾಲಹಾಕಿತು. ವಿಶ್ವಸಂಸ್ಥೆ, ಸತ್ತಮಗುವಿನ ಜನನದಂತೆ ಆಗಿತ್ತು. ಸದ್ಯ ಸೋವಿಯಟ್ ರಷ್ಯಾ ಮತ್ತು ಇತರ ರಾಷ್ಟ್ರಗಳು ರಾಜಿಗೆ ಬಂದವು. ಅದರ ಪ್ರಕಾರ ಸಾಮಾನ್ಯ ಸಭೆಗೆ (ಜನರಲ್ ಅಸೆಂಬ್ಲಿಗೆ) ಭದ್ರತಾ ಸಮಿತಿ (ಸೆಕ್ಯುರಿಟಿ ಕೌನ್ಸಿಲ್) ತೆಗೆದುಕೊಳ್ಳುವ



ತನಿಖೆಗಳನ್ನು ತೀರ್ಮಾನಗಳನ್ನು ಪ್ರಶ್ನಿಸುವ ಹಕ್ಕಿಲ್ಲ, ಆದರೆ ಅವುಗಳನ್ನು ಕುರಿತು ಚರ್ಚಿಸಬಹುದು, ಪರ್ಯಾಲೋಚಿಸಬಹುದು. ತನ್ನ ಅಭಿಪ್ರಾಯ ಹೇಳಬಹುದು. ಅಷ್ಟೆ. ಇದೊಂದು ಸೂಕ್ಷ್ಮವಾಗಿರುವ ಕಾಜಿನ್ಯಾಯ ಎಂದು ಸೋವಿಯಟ್ ರಷ್ಯಾ ಅಭಿಪ್ರಾಯಪಟ್ಟಿತು. ಇಪ್ಪತ್ತು ವರ್ಷಗಳಲ್ಲಿ ಸಾಮಾನ್ಯ ಸಭೆಯ ಅಧಿಕಾರ ಹೆಚ್ಚುತ್ತಾ ಬಂತು. ಸೂಯೆಜ್ ಸಮಸ್ಯೆ ಎದುರಾದಾಗ ಶಾಂತಿ ಕಾಪಾಡಲು ಅದು ಕಾರ್ಯನಿರತವಾಯಿತು, ವೀಟೊ ಅಡ್ಡಬರಲಿಲ್ಲ. ಅಂತೆಯೇ ಕಾಂಗೋದಲ್ಲೂ ಕೂಡ. ಆದರೆ ಇಲ್ಲಿ ಸೋವಿಯಟ್ ಸರ್ಕಾರದ ವಿರೋಧವಿತ್ತು. ಇದು ನ್ಯಾಯಬದ್ಧವಲ್ಲವೆಂದು ಖರ್ಚಿನಲ್ಲಿ ತನ್ನ ಭಾಗವನ್ನು ಕೊಡಲು ಅದು ಒಪ್ಪಲಿಲ್ಲ. ಹಣ ಕೊಡುವವರೆಗೂ ಅದನ್ನು ವಿಶ್ವಸಂಸ್ಥೆ ಬಹಿಷ್ಕರಿಸಬೇಕೆಂದು ಅಮೆರಿಕಾ ಹೇಳಿತು. ಸದ್ಯ ವಿಷಯ ಅಲ್ಲಿಗೇ ನಿಂತಿತು.

ನಾನು ನನ್ನ ಭಾಷಣದಲ್ಲಿ ಸಂವಿಧಾನದಲ್ಲಿ (Charter) ವೀಟೊವನ್ನು ಸೇರಿಸುವ ಬಗ್ಗೆ ನಡೆದ ಚರ್ಚೆ ಸಾಕಷ್ಟು ವಿಷದವಾಗಿ ಹೇಳಿ ಸಮಯ ಕಳೆದಿದ್ದೇನೆ. ಇದಕ್ಕೆ ಕಾರಣ 'ವೀಟೊ' ಸಂವಿಧಾನದ ತಿರುಗುಗೂಟ. ಬಲಿಷ್ಠ ರಾಷ್ಟ್ರಗಳಿಗೆ ಅದೊಂದು ಅತ್ಯಾವಶ್ಯಕವಾದ ರಕ್ಷಾಕವಚ. ವೀಟೊದಿಂದ ರಾಷ್ಟ್ರಗಳ ಮಧ್ಯೆ ಸಾಮರಸ್ಯ ವೃದ್ಧಿಯಾಗುವುದೆಂಬ ಭರವಸೆ ಇತ್ತು. ಸ್ಯಾನ್‌ಫ್ರಾನ್ಸಿಸ್‌ಕೋ ಸಮ್ಮೇಳನದಲ್ಲಿ ಯಾರೂ ವೀಟೊ ಅನ್ನುವ ಪದವನ್ನು ಉಪಯೋಗಿಸಲೇ ಇಲ್ಲ. ಅದಕ್ಕೆ 'ಬಲಿಷ್ಠ ರಾಷ್ಟ್ರಗಳ ಒಮ್ಮತದ ನಿಬಂಧನೆ' ಎನ್ನುತ್ತಿದ್ದರು.

ಬಲಿಷ್ಠ ರಾಷ್ಟ್ರಗಳು ಭದ್ರತಾ ಮಂಡಳಿಯ ಸಂಯೋಗದೊಡನೆ ಭಿನ್ನಾಭಿಪ್ರಾಯವಿಲ್ಲದೆ ಕೆಲಸ ಮಾಡುತ್ತದೆ ಎಂದು ಆಶಿಸಿದ್ದರು. ಆದರೆ ಆ ಭರವಸೆ ಈಡೇರಲಿಲ್ಲ. ವೀಟೋ ಅಧಿಕಾರವನ್ನು ಗ್ರೇಟ್ ಬ್ರಿಟನ್ ಅಪರೂಪಕ್ಕೆ ಉಪಯೋಗಿಸಿಕೊಂಡಿತು. ಬ್ರಿಟನ್ ೧೯೫೬ರಲ್ಲಿ ಸೂಯೆಜ್ ಮೇಲೆ ಆಕ್ರಮಣ ಮಾಡಿದಾಗ ಅಮೆರಿಕಾ ಮತ್ತು ಸೋವಿಯಟ್ ಯೂನಿಯನ್ ಎರಡೂ ರಾಷ್ಟ್ರಗಳು, ಇದನ್ನು ಖಂಡಿಸಿ ಮಂಡಿಸಿದ ಠರಾವಿಗೆ ಬೆಂಬಲ ಸೂಚಿಸಿದವು. ಆದರೆ ಬ್ರಿಟನ್ ವೀಟೊ ಮೂಲಕ ಠರಾವು ಊರ್ಜಿತವಾಗದಂತೆ ಮಾಡಿತು. ವೀಟೊವನ್ನು ಸೋವಿಯಟ್ ಯೂನಿಯನ್ ಅಮೆರಿಕಾಕ್ಕಿಂತ ಹೆಚ್ಚು ಬಾರಿ ಚಲಾಯಿಸಿತು. ಇದಕ್ಕೆ ಕಾರಣ ವಿಶ್ವಸಂಸ್ಥೆಯಲ್ಲಿ ಅದರ ಪರವಾಗಿದ್ದ ರಾಷ್ಟ್ರಗಳು ಕಡಿಮೆ. 'ವೀಟೊ' ಅಥವಾ 'ಬಲರಾಷ್ಟ್ರಗಳ ಒಮ್ಮತದ ನಿಬಂಧನೆ' ಶೀತಲ ಸಮರವನ್ನು ನಿಸ್ಸಾರಗೊಳಿಸುತ್ತದೆ ಎನ್ನುವ ನಿರೀಕ್ಷೆ ಸುಳ್ಳಾಗಿ ಅದು (ವೀಟೊ) ಶೀತಲ ಸಮರದ ಚಿಹ್ನೆ ಹಾಗೂ ಸಾಧನವಾಯಿತು.

ಹೀಗಾಗಿ, ವಿಶ್ವಸಂಸ್ಥೆ ಹುಟ್ಟುತ್ತಿರುವಂತೆಯೇ ಅದರಲ್ಲಿ ಮೂರ್ಛೆ ಹೋಗುವ ಚಿಹ್ನೆಗಳು ಕಾಣಿಸಿಕೊಂಡವು. ಅದೊಂದು ಪಿತ್ರಾರ್ಜಿತ ರೋಗ ; ಅದರ ಪಿತೃ

ಲೀಗ್ ಆಫ್ ನೇಷನ್ಸ್. ಅದಕ್ಕೆ ಸೇರಿದ ಹೆಚ್ಚು–ಕಡಿಮೆ ಎಲ್ಲಾ ರಾಷ್ಟ್ರಗಳಿಗೂ ಆ ರೋಗ ತಗುಲಿದೆ ಎನ್ನುವ ಹಾಗೆ ಕಾಣುತ್ತಿತ್ತು. ಭಾರತ ಈ ಸಾಂಕ್ರಾಮಿಕ ಬೇನೆಯಿಂದ ದೂರವಿರಲು ಪ್ರಯತ್ನಿಸುತ್ತಿತ್ತು, ಆದರೆ ಅದಕ್ಕೆ ಸಾಧ್ಯವಾಗಲಿಲ್ಲ. ನಮ್ಮ ನೆರೆ ರಾಜ್ಯ ಅದಕ್ಕೆ ವಶವಾಯಿತು. ಯೂರೋಪ್, ಐವತ್ತರ ದಶಕದ ಮಧ್ಯಭಾಗದವರೆಗೂ ವಿಶ್ವಸಂಸ್ಥೆಯ ಹಿಡಿತದಲ್ಲಿತ್ತು. ನಂತರ ಆ ಕಾಯಿಲೆ ಎಲ್ಲಾ ಕಡೆಗೂ ಹರಡಿತು, ಎಲ್ಲಾ ಕಡೆ ಅಂದರೆ ಐದು ಖಂಡಗಳಿಗೆಲ್ಲಾ, ವಿಶ್ವಕ್ಕೆಲ್ಲಾ ಆದರೆ ಅವರ ತೀಕ್ಷ್ಣತೆ ಕಡಿಮೆ ಪ್ರಮಾಣದಲ್ಲಿತ್ತು. ನಂತರ ಶೀತಲ ಸಮರ ದೈತ್ಯನೊಬ್ಬ ಹುಟ್ಟಿದ – ಅದೇ ಚೀನಾ.

ಮಾನ್ಯರೆ, ಶೀತಲ ಸಮರದ ಹಿನ್ನೆಲೆ ಮತ್ತು ಹುಟ್ಟು – ಈ ಬಗ್ಗೆ ಇದುವರೆಗೂ ತಿಳಿಸಿದೆ. ನನ್ನ ಮುಂದಿನ ಉಪನ್ಯಾಸದಲ್ಲಿ ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನ ಜರುಗಿದ ಮೇಲೆ ಹತ್ತು ವರ್ಷದಲ್ಲಾದ ಬೆಳವಣಿಗೆಯನ್ನು ತಿಳಿಸುತ್ತೇನೆ.

* * * *



## ೨. ಏಳಿಗೆ ಮತ್ತು ಹರವು

ನನ್ನ ಹಿಂದಿನ ಉಪನ್ಯಾಸದಲ್ಲಿ ನಾನು ಸ್ಯಾನ್‌ಫ್ರಾನ್ಸಿಸ್ಕೋನಲ್ಲಿ ನಡೆದ ಸಮ್ಮೇಳನದಲ್ಲಿ ಶೀತಲ ಸಮರದ ಹಿನ್ನೆಲೆಯನ್ನೂ ಅದರ ಸೊರಗಿದ ಪ್ರಾರಂಭವನ್ನೂ ಚಿತ್ರಿಸಲು ಪ್ರಯತ್ನಪಟ್ಟೆ. ಮಾರ್ಕ್ಸಿಸಂನಲ್ಲಿ ಯುದ್ಧ – ಅದು ಸುಡು ಯುದ್ಧವಾಗಿರಬಹುದು ಅಥವಾ ಶೀತಲ ಸಮರವಾಗಿರಬಹುದು – ಅಡಕವಾಗಿರುತ್ತಿತ್ತು. ನಾನು ಇಲ್ಲಿ ಭೂತಕಾಲದ ಕ್ರಿಯಾಪದವನ್ನು ಉಪಯೋಗಿಸುತ್ತಿದ್ದೇನೆ. ಇದಕ್ಕೆ ಕಾರಣ, ಹಿಂದೆ ಸೋವಿಯಟ್ ಯೂನಿಯನ್ ಅರ್ಥ ಮಾಡಿಕೊಂಡಂತೆ ಕಮ್ಯುನಿಸಂನಲ್ಲಿ ಈಗ ಸುಡುಯುದ್ಧದ ಅವಶ್ಯಕತೆ ಇಲ್ಲ. ಶೀತಲ ಸಮರವನ್ನು ಹದ್ದುಬಸ್ತಿನಲ್ಲಿಟ್ಟುಕೊಳ್ಳದಿದ್ದರೆ ಅದು ನೈಜ ಯುದ್ಧಕ್ಕೆ ತಿರುಗಬಹುದೆಂದು ಎಲ್ಲರಿಗೂ ಗೊತ್ತಾಗಿದೆ. ಆದರೆ ಚೀನಾ, ಇನ್ನೂ ಕೂಡ, ಕಮ್ಯುನಿಸಂಗೆ ಯುದ್ಧ ಅನಿವಾರ್ಯ ಹಾಗೂ ಅವಶ್ಯಕ ಎಂದು ನಂಬಿದೆ.

ಕಾರ್ಲ್ ಮಾರ್ಕ್ಸ್ ಪ್ರಕಾರ ಇತಿಹಾಸವೆಂದರೆ ವರ್ಗಕಲಹ. ವರ್ಗರಹಿತ ಸಮಾಜ ಅಸ್ತಿತ್ವಕ್ಕೆ ಬರುವವರೆಗೂ ಈ ಕಲಹ ನಡೆಯುತ್ತಲೇ ಇರುತ್ತದೆ. ಈ ನಿರಂತರ ಕಲಹದಲ್ಲಿ, ಎರಡು ಜಾಗತಿಕ ಯುದ್ಧಗಳ ನಡುವೆ ಇದ್ದದ್ದು, ಸೋವಿಯಟ್ ಯೂನಿಯನ್ ಮತ್ತು ಅದಕ್ಕೆ ನೇತುಹಾಕಿಕೊಂಡಿರುವ ಮಂಗೋಲಿಯಾ ಒಂದು ಕಡೆ, ಗ್ರೇಟ್ ಬ್ರಿಟನ್ ಮತ್ತು ಹಲವು ಸಣ್ಣ ಆದರೆ ಬಲಿಷ್ಠ ಪಶ್ಚಿಮ ಐರೋಪ್ಯ ದೇಶಗಳು ಇನ್ನೊಂದು ಕಡೆ. ಎರಡನೆಯ ಜಾಗತಿಕ ಯುದ್ಧದ ನಂತರ ಕಮ್ಯುನಿಸಂ ವಿರುದ್ಧದ ಹೋರಾಟದ ಹೊರೆ ಗ್ರೇಟ್ ಬ್ರಿಟನ್‌ನಿಂದ ಅಮೆರಿಕಾಕ್ಕೆ ವರ್ಗಾಯಿಸಲ್ಪಟ್ಟಿತು.

ಯುದ್ಧ ಮುಗಿಯುವುದರಲ್ಲಿ ಬಂಡವಾಳಶಾಹಿನ್ನು ಬೆಂಬಲಿಸುವ ರಾಷ್ಟ್ರಗಳ ಮತ್ತು ಕಮ್ಯುನಿಸ್ಟ್ ಜಗತ್ತಿನ ಮಧ್ಯೆ ಶೀತಲ ಸಮರ ತಲೆ ಎತ್ತಿತು. ಕಮ್ಯುನಿಸಂ ಪೂರ್ವ ಯೂರೋಪಿನಲ್ಲೆಲ್ಲಾ ತುಂಬಿ ಹರಿಯುತ್ತಿದೆ ಎಂದು ಚರ್ಚಿಲ್ ಹೆದರಿದ್ದ. ಯುದ್ಧದ ನಂತರ ಅಮೆರಿಕಾ ರಷ್ಯಾಕ್ಕೆ 'ಎರವಲು – ಗುತ್ತಿಗೆ' ಕೊಡುವುದನ್ನು ನಿಲ್ಲಿಸಿತು ಅಥವಾ ಮುಂದೆ ಹಾಕಿತು. ಯುದ್ಧದಿಂದ ಹೆಚ್ಚು ಕಷ್ಟ ನಷ್ಟಗಳಿಗೆ ಗುರಿಯಾದದ್ದು ರಷ್ಯಾ. ಹಾಗಾಗಿ ಅದಕ್ಕೆ ಹೆಚ್ಚಿನ ಸಹಾಯ ಅಗತ್ಯವಾಗಿ ಬೇಕಾಗಿತ್ತು. ನಿಜ, ಅಮೆರಿಕಾ ಮಾರ್ಷಲ್ ಯೋಜನೆಯನ್ನು ಅದಕ್ಕೂ ವಿಸ್ತರಿಸಲು ಒಪ್ಪಿತು.

ಆದರೆ ಅಷ್ಟರಲ್ಲಿ ಶೀತಲ ಸಮರ ತಲೆದೋರಿದ್ದರಿಂದ ರಷ್ಯಾ ಸಹಾಯವನ್ನು ಅನೌಪಚಾರಿಕವಾಗಿ ನಿರಾಕರಿಸಿತು. ಅಮೆರಿಕಾ ರಷ್ಯಾದೊಡನೆ ಪರಮಾಣು ಬಾಂಬಿನ ರಹಸ್ಯವನ್ನು ಹಂಚಿಕೊಳ್ಳಲು ತಯಾರಾಗಿರಲಿಲ್ಲ. ಹಾಗೂ ರಷ್ಯಾ ಸುರುಟಿಕೊಂಡು ಅಮೆರಿಕಾ ಮತ್ತು ಪಾಶ್ಚಿಮಾತ್ಯ ಯೂರೋಪಿನ ದೇಶಗಳೊಡನೆ ಸಂಬಂಧ ಇಟ್ಟುಕೊಳ್ಳದೆ ಏಕಾಕಿಯಾಗಿ ಕೈಗಾರಿಕೆ, ಸೇನೆ, ಪರಮಾಣುಶಕ್ತಿ, ಚಂದ್ರಯಾನ – ಈ ಎಲ್ಲ ಕ್ಷೇತ್ರಗಳಲ್ಲೂ ಅಭಿವೃದ್ಧಿಯನ್ನು ಹೊಂದಲು ನಿರ್ಧರಿಸಿತು. ಅದು ಯಾವ ದೇಶದ ಅಭಯ ಹಸ್ತವನ್ನೂ ಬಯಸಲಿಲ್ಲ. ಪಾಶ್ಚಿಮಾತ್ಯ ಜಗತ್ತಿನೊಡನೆ ತನಗಿರುವ ದ್ವೇಷವನ್ನು ತೋರಿಸಲು ಅದು ಹಿಂದು ಮುಂದು ನೋಡಲಿಲ್ಲ.

೫ ಮಾರ್ಚ್ ೧೯೪೬ರಂದು ಫುಲ್‌ಟನ್‌ನಲ್ಲಿ ಮಾಡಿದ ಚರ್ಚಿಲ್‌ನ ಸುಪ್ರಸಿದ್ಧ 'ಉಕ್ಕಿನ ತೆರೆ' ಭಾಷಣ ಶೀತಲಸಮರದ ಆಗಮನವನ್ನು ಮುನ್‌ಸೂಚಿಸಿತು. 'ಬಾಲ್ಟಿಕ್‌ನಲ್ಲಿರುವ ಸ್ಟೆಟಿನ್‌ನಿಂದ ಹಿಡಿದು ಅಡ್ರಿಯಾಟಿಕ್‌ನಲ್ಲಿರುವ ಟ್ರೀಸ್ಟಿವರೆಗೆ ಉಕ್ಕಿನ ತೆರೆ ಬಿದ್ದಿದೆ' ಎಂದ ಚರ್ಚಿಲ್. ಪ್ರಜೆಗಳನ್ನೊಳಗೊಂಡಂತೆ ಅಲ್ಲಿರುವ ಪ್ರಸಿದ್ಧ ನಗರಗಳೆಲ್ಲವೂ ಸೋವಿಯಟ್ ಗೋಳದೊಳಗೆ ಬರುತ್ತದೆ.

ಚರ್ಚಿಲ್‌ನ ಭಾಷಣ ಹಲವರನ್ನು ದಿಗ್ಭ್ರಮೆಗೊಳಿಸಿತು. ಈವರೆಗೂ ಮೈತ್ರಿಕೂಟದಲ್ಲಿದ್ದ ಬಲಿಷ್ಠ ರಾಷ್ಟ್ರವನ್ನು ತತ್‌ಕ್ಷಣ ಶತ್ರುರಾಷ್ಟ್ರ ಎಂದು ಸುಲಭವಾಗಿ ಹೇಳುವ ಹಾಗಿರಲಿಲ್ಲ. ಲಂಡನ್ ಟೈಮ್ಸ್ ಆಗ ಹೀಗೆ ಬರೆಯಿತು – 'ಪಾಶ್ಚಿಮಾತ್ಯ ಪ್ರಜಾಪ್ರಭುತ್ವ ಮತ್ತು ಕಮ್ಯುನಿಸಂ ಹಲವು ವಿಷಯಗಳಲ್ಲಿ ವಿಮುಖವಾಗಿವೆ. ಆದರೂ ಒಂದು ಇನ್ನೊಂದರಿಂದ ಕಲಿಯುವುದು ಬೇಕಾದಷ್ಟಿದೆ. ರಾಜಕೀಯ ಸಂಸ್ಥೆಗಳ ಕಾರ್ಯವಿಧಾನ, ವ್ಯಕ್ತಿಗೆ ಇರಬೇಕಾದ ಹಕ್ಕುಗಳ ಬಗ್ಗೆ ಕಮ್ಯುನಿಸಂ ಕಲಿಯಬೇಕಾದರೆ, ಪಾಶ್ಚಿಮಾತ್ಯ ಪ್ರಜಾಪ್ರಭುತ್ವ, ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ಯೋಜನೆಗಳನ್ನು ಕಮ್ಯುನಿಸಂನಿಂದ ಕಲಿಯಬೇಕಾಗಿದೆ.' ಅಕಸ್ಮಾತ್ತಾಗಿ ಭಾರತದ ಮನೋಭಾವ ಇದೇ ಆಗಿತ್ತು. ಎರಡು ಕಡೆಯಿಂದಲೂ ಕಲಿಯುವುದಿದೆ ಎನ್ನುವ ಮನೋಭಾವವು ಇದೇ ಪಾಶ್ಚಿಮಾತ್ಯ ಪ್ರಜಾಪ್ರಭುತ್ವದಿಂದ ಭಾರತ ಪಾರ್ಲಿಮೆಂಟರಿ ಪ್ರಜಾಪ್ರಭುತ್ವವನ್ನು ಆಗಲೇ ಸ್ವೀಕರಿಸಿತ್ತು. ಸೋವಿಯಟ್ ರಷ್ಯಾದಿಂದ ಸಾಮಾಜಿಕ ಮತ್ತು ಆರ್ಥಿಕ ಯೋಜನೆಗಳ ಬಗ್ಗೆ ಅದು ತುಂಬ ಕಲಿಯಬೇಕಾಗಿದೆ.

ಪೋಲೆಂಡ್ ರಾಜಕೀಯವಾಗಿ ಹಾಗೂ ಆಧ್ಯಾತ್ಮಿಕವಾಗಿ ತಮ್ಮ ಹತ್ತಿರವಿದೆ ಎಂದು ಪಾಶ್ಚಿಮಾತ್ಯ ರಾಷ್ಟ್ರಗಳು ನಂಬಿದ್ದವು. ಪೋಲೆಂಡ್ ಜನ ರೋಮನ್ ಕ್ಯಾಥೋಲಿಕ್ ಪಂಗಡಕ್ಕೆ ಸೇರಿದವರು. ರಷ್ಯಾದವರಂತೆ ಆರ್ಥೋಡಾಕ್ಸ್ ಚರ್ಚ್‌ಗಲ್ಲ. ಜೊತೆಗೆ ಪೋಲೆಂಡ್‌ಗೆ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಹೆಚ್ಚು ನಂಬಿಕೆ ಇತ್ತು. ಬ್ರಿಟನ್ 'ಪಾರ್ಲಿಮೆಂಟ್ ವ್ಯವಸ್ಥೆಗೆ ಮಾತೃ' ಹಾಗೆಯೇ ಪೋಲೆಂಡ್ ಕೂಡ.

ರಷ್ಯಾ ಪೋಲೆಂಡ್‌ನನ್ನು ಬೇರೆ ಕೋನದಿಂದ ನೋಡಿತು. ಒಂದು ಕಾಲಕ್ಕೆ



ಪೋಲೆಂಡ್ ರಷ್ಯಾಕ್ಕಿಂತ ಹೆಚ್ಚು ಬಲಶಾಲಿ ಆಕ್ರಮಣಶೀಲ ರಾಷ್ಟ್ರವಾಗಿತ್ತು. ಐತಿಹಾಸಿಕವಾಗಿ ಪೋಲೆಂಡ್ ರಷ್ಯಾದ ಪ್ರತಿಸ್ಪರ್ಧಿ ಹಾಗೂ ಶತ್ರು. ೧೭ನೇ ಶತಮಾನದ ಆದಿಯಲ್ಲಿ ಪೋಲಿಷ್ ಪಡೆ ರಷ್ಯಾದ ಹೃದಯದ ಭಾಗದವರೆಗೂ ನುಗ್ಗಿ, ಪವಿತ್ರ ಕ್ರೆಮ್ಲಿನ್‌ನಲ್ಲಿ ತಳ ಊರಿತ್ತು ಎಂದು ರಷ್ಯಾ ಎಂದಿಗೂ ಮರೆಯುವುದಿಲ್ಲ. ಐವಾನ್ ಸುಸನಿನ್ ಎನ್ನುವ ರೋಮಾಂಚನಗೊಳಿಸುವ ಬ್ಯಾಲೆಯಲ್ಲಿ ಆ ಘಟನೆ ಪ್ರಮುಖವಾಗಿದೆ. ೧೯ನೇ ಶತಮಾನದಲ್ಲಿ ಪೋಲೆಂಡ್, ರಷ್ಯಾ, ಆಸ್ಟ್ರಿಯಾ ಮತ್ತು ಜರ್ಮನಿಗಳಿಗೆ ಹಂಚಿ ಹೋದವು. ಮೊದಲನೆಯ ಜಾಗತಿಕ ಯುದ್ಧದ ನಂತರ ಅದು ಸ್ವತಂತ್ರಗೊಂಡು ಪುನಃ ಒಂದಾಯಿತು. ರಷ್ಯಾ ಅಂತರ್ಯುದ್ಧದಿಂದ ಘಾಸಿಗೊಂಡಿದ್ದಾಗ ಪೋಲೆಂಡ್ ರಷ್ಯಾ ಮೇಲೆ ಆಕ್ರಮಣ ನಡೆಸಿ, ತನಗೆ ನ್ಯಾಯ ಸಮ್ಮತವಾಗಿ ಸೇರಿದೆ ಎಂದು ರಷ್ಯಾ ತಿಳಿದುಕೊಂಡಿದ್ದ ಭಾಗಗಳನ್ನು ಕಿತ್ತುಕೊಂಡಿತು. ಈ ಭಾಗಗಳನ್ನು ಪುನಃ ಪಡೆಯಬೇಕೆಂಬ ರಷ್ಯಾದ ನಿರ್ಧಾರವೇ ೧೯೩೯ರಲ್ಲಿ ಆದ ಮಾಲಟೋವ್ – ರಿಬ್ಬೆನ್‌ಟ್ರಾಪ್ ಒಡಂಬಡಿಕೆಗೆ ಕಾರಣ.

ಯುದ್ಧದ ನಂತರ ನಡೆದ ಯಾಲ್ಟಾ ಸಮಾವೇಶದಲ್ಲಿ ಪೋಲೆಂಡ್‌ನಲ್ಲಿ ಪ್ರಜಾಪ್ರಭುತ್ವ ಸರ್ಕಾರ ಏರ್ಪಡಿಸಬೇಕೆಂದು ಎಲ್ಲಾ ಮಿತ್ರ ರಾಷ್ಟ್ರಗಳೂ ತಮ್ಮ ಒಪ್ಪಿಗೆ ಸೂಚಿಸಿದವು. ಆದರೆ ಪ್ರಜಾಪ್ರಭುತ್ವ ಎಂದರೆ ಪಾಶ್ಚಿಮಾತ್ಯ ರಾಷ್ಟ್ರಗಳು ಅರ್ಥೈಸುವುದು ಒಂದು ಬಗೆಯಾದರೆ ರಷ್ಯಾ ಅರ್ಥೈಸುವುದು ಇನ್ನೊಂದು ಬಗೆ. ರಷ್ಯಾ ಪೋಲೆಂಡ್‌ನಲ್ಲಿ ಲಬ್ಲಿನ್ ರೆಷೀಮ್ (Lublin Regime) ಸರ್ಕಾರ ರಚಿಸಬೇಕು ಎಂದರೆ ಪಾಶ್ಚಿಮಾತ್ಯ ನಾಯಕರು ಗಡಿಪಾರಾಗಿ ಲಂಡನ್‌ಗೆ ಬಂದಿರುವ ಪೋಲಿಷ್ ನಾಯಕರ ಸರ್ಕಾರ ಏರ್ಪಡಬೇಕೆಂದು ಹೇಳಿದರು. ಲಂಡನ್‌ನಲ್ಲಿದ್ದ ಪೋಲಿಷ್ ನಾಯಕರು ತಮ್ಮ ತಾಯ್ನಾಡಿಗೆ ೧೯೪೫ರಲ್ಲಿ ಹಿಂದಿರುಗಿದೊಡನೆ ಅವರನ್ನು ದಸ್ತಗಿರಿ ಮಾಡಲಾಯಿತು. ಮಾಲಟೋವ್ ಸ್ಯಾನ್‌ಫ್ರಾನ್ಸಿಸ್ಕೋ ಬಿಟ್ಟು ಹೋಗುವ ಸಂದರ್ಭದಲ್ಲಿ ಪಾಶ್ಚಿಮಾತ್ಯ ಸಹೋದ್ಯೋಗಿಗಳಿಗೆ ಒಂದು ಬೀಳ್ಕೊಡುಗೆಯ ಸಮಾರಂಭ ಏರ್ಪಡಿಸಿದ. ಔತಣ ಮುಗಿದಾದ ಮೇಲೆ ಅವನು ಭಾಷಣ ಮಾಡುತ್ತಾ ಅಕಸ್ಮಾತ್ ಎನ್ನುವಂತೆ ಹೇಳಿದ – 'ಲಂಡನ್‌ನಿಂದ ಹಿಂದಿರುಗಿದ ಪೋಲಿಷ್ ನಾಯಕರನ್ನು ದಸ್ತಗಿರಿ ಮಾಡಲಾಗಿದೆ. ಅವರು ಕೆಂಪು ಸೇನೆಯ ವಿರುದ್ಧ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡಿದ್ದರು.' ಪಾಶ್ಚಿಮಾತ್ಯ ಬಲಿಷ್ಠ ರಾಷ್ಟ್ರಗಳ ನಾಯಕರಿಗೆ ಇದೊಂದು ತಲ್ಲಣಗೊಳಿಸುವ ಸುದ್ದಿ. ಅವರು ಪೋಲೆಂಡನ್ನು ತಮ್ಮದೇ ಆದ ಗೋಳದಲ್ಲಿಟ್ಟುಕೊಳ್ಳಬೇಕೆಂದಿದ್ದರು. ಆದರೆ ಈಗ ಏನು ಮಾಡಲು ಸಾಧ್ಯವಿಲ್ಲ. ಅವರು ಸುಮ್ಮನೆ ಹಲ್ಲು ಕಿರಿದರು.

ಶೀತಲ ಸಮರದ ಸೂಕ್ಷ್ಮಜೀವಿ ಇತಿಹಾಸದ ಪುಟಗಳಲ್ಲಿ ಬಹಳ ಹಿಂದಿನಿಂದ ಇದ್ದರೂ ಖಚಿತವಾಗಿ ಕಂಡದ್ದು ಪೋಲೆಂಡ್‌ನಲ್ಲಿ. ಅಲ್ಲಿಂದ ಪ್ರಾಚ್ಯ ಯೂರೋಪ್‌ಗೆ

ರಕ್ತನಾಳಗಳ ಮೂಲಕ ಈ ವೈರಸ್ ಹೋಗಿ 'ಮಾರ್ಕ್ಸಿಸಂ ಹುಣ್ಣು' ಉತ್ಪತ್ತಿಯಾಯಿತು. ಅದು ಯೂರೋಪಿನ ಹೃದಯದ ಭಾಗ ಜರ್ಮನಿಯನ್ನು ತಲುಪಿ, ದೇಶ ವಿಭಜನೆಯಾಗುವಂತೆ ಮಾಡಿತು. ಉದ್ದೇಶಪೂರ್ವಕವಾಗಿ ಜರ್ಮನಿಯನ್ನು ವಿಭಜಿಸಲಾಯಿತೇ ಎನ್ನುವುದು ಅನುಮಾನದ ವಿಷಯ. ಯುದ್ಧ ನಡೆಯುತ್ತಿರುವಾಗ ಭವಿಷ್ಯತ್ ಜರ್ಮನಿ ಬಗ್ಗೆ ಅನೇಕ ಅಪಕ್ವ ಪ್ರಸ್ತಾಪಗಳು ಬಂದಿದ್ದವು – ಜರ್ಮನಿಯನ್ನು ಪೂರ್ಣವಾಗಿ ನಿಶ್ಶಸ್ತ್ರಗೊಳಿಸುವುದು ಅಥವಾ 'ಗ್ರಾಮೀಣೀಕರಣ' ಮಾಡುವುದು. ಆದರೆ ಅಂತಹ ಪ್ರಸ್ತಾಪವನ್ನು ಯುದ್ಧಾನಂತರ ಬಿಡಲಾಯಿತು. ಬ್ರಿಟನ್‌ಗೇ ಆಗಲೀ ಫ್ರಾನ್ಸ್‌ಗೇ ಆಗಲೀ, ಅಮೆರಿಕಾಕ್ಕೇ ಆಗಲೀ, ಕೊನೆಗೆ ರಷ್ಯಾಕ್ಕೇ ಆಗಲೀ ಜರ್ಮನಿಯನ್ನು ಶಾಶ್ವತವಾಗಿ ಛಿದ್ರಗೊಳಿಸುವುದಕ್ಕೆ ಇಷ್ಟವಿರಲಿಲ್ಲ. ಜರ್ಮನಿ ಕಮ್ಯುನಿಷ್ಟ್ ರಾಷ್ಟ್ರವಾಗುತ್ತದೆ ಎನ್ನುವ ಯಾವ ಭರವಸೆಯೂ ಸ್ಟ್ಯಾಲಿನ್‌ಗೆ ಇರಲಿಲ್ಲ. ಒಂದು ಸಂದರ್ಭದಲ್ಲಿ ಅವನು ಹೇಳಿದ –

'ಹಸುವಿನ ಮೇಲೆ ಜೀನು ಹಾಕಿದಂತೆ ಜರ್ಮನಿ ಕಮ್ಯುನಿಸಂ ಅನ್ನು ಅಳವಡಿಸಿಕೊಳ್ಳಲಾರದು.' ಪಾಟ್ಸ್‌ಡ್ಯಾಮ್‌ನಲ್ಲಾದ ಒಡಂಬಡಿಕೆಯ ಪ್ರಕಾರ ಸದ್ಯಕ್ಕೆ ಜರ್ಮನಿಯನ್ನು ತಾತ್ಕಾಲಿಕವಾಗಿ ನಾಲ್ಕು – ಬ್ರಿಟಿಷ್, ಅಮೆರಿಕನ್, ಫ್ರೆಂಚ್, ರಷ್ಯನ್ – ಆಡಳಿತ ಪ್ರದೇಶಗಳನ್ನಾಗಿ ವಿಭಜಿಸಬೇಕು ಎಂದು ತೀರ್ಮಾನವಾಗಿ ಹಾಗೆಯೇ ಆಯಿತು. ಆದರೆ ಸ್ವಲ್ಪ ಕಾಲದಲ್ಲೇ ಬ್ರಿಟನ್ ಮತ್ತು ಅಮೆರಿಕಾ ಪ್ರದೇಶಗಳು ಒಂದುಗೂಡಿದವು. ೧೯೪೯ನೇ ಅಕ್ಟೋಬರ್‌ನಲ್ಲಿ ಜರ್ಮನ್ ಡೆಮೊಕ್ರಾಟಿಕ್ ರಿಪಬ್ಲಿಕ್ (ಜಿ.ಡಿ.ಆರ್.) ಸ್ಥಾಪನೆಯಾಯಿತು ; ಜರ್ಮನಿ ವಿಭಜನೆಗೊಂಡಿದ್ದು ಆಕಸ್ಮಿಕ ಎಂದಿಟ್ಟುಕೊಂಡರೂ, ಆ ಬಗ್ಗೆ ಯೋಚಿಸಿದಾಗ ಅದು ಅನಿವಾರ್ಯವಾಗಿತ್ತು ಅನಿಸುತ್ತದೆ. ಯೂರೋಪ್‌ನಲ್ಲಿ ಎಲ್ಲಾ ರಾಷ್ಟ್ರಗಳ ಮಧ್ಯೆ ಸಮಾನ ಸಾಮರ್ಥ್ಯವಿರಬೇಕೆಂದು ಬ್ರಿಟನ್ ಶತಮಾನಗಳಿಂದ ಇಷ್ಟಪಟ್ಟಿತ್ತು. ಫ್ರಾನ್ಸಿನಿಂದ ಅಥವಾ ಜರ್ಮನಿಯಿಂದ ಈ ಸಮಾನತೆ ಏರುಪೇರಾದಾಗ ಬ್ರಿಟನ್ ಮಧ್ಯೆ ಪ್ರವೇಶಿಸಿ ತನ್ನ ಬಲವನ್ನು ತೋರಿಸುತ್ತಿತ್ತು. ಈ ಕಾರಣಕ್ಕಾಗಿಯೇ ೨೦ನೇ ಶತಮಾನದಲ್ಲಿ ಬ್ರಿಟನ್ ಎರಡು ಬಾರಿ ಜಾಗತಿಕ ಯುದ್ಧಗಳನ್ನು ಮಾಡಿದ್ದು.

ಎರಡನೆಯ ಜಾಗತಿಕ ಯುದ್ಧದ ಫಲಿತಾಂಶವೇನೆಂದರೆ ಯೂರೋಪ್ ರಾಷ್ಟ್ರಗಳ ಮಧ್ಯೆ ಇದ್ದ ಸಾಮರ್ಥ್ಯದ ಏರುಪೇರಾಗಿ ಸೋವಿಯಟ್ ಯೂನಿಯನ್ ಅತ್ಯಂತ ಬಲಿಷ್ಠ ರಾಷ್ಟ್ರವಾಯಿತು. ಅದನ್ನು ಹತೋಟಿಯಲ್ಲಿಟ್ಟುಕೊಳ್ಳಲು ಸಾಧ್ಯವಿರುವ ಇನ್ನೊಂದು ಬಲಿಷ್ಠರಾಷ್ಟ್ರವೆಂದರೆ ಅಮೆರಿಕಾ ಮಾತ್ರ. ಈ ಎರಡು ಅತ್ಯಂತ ಬಲಿಷ್ಠ ರಾಷ್ಟ್ರಗಳು ಜರ್ಮನಿಯಲ್ಲಿ ಸಂಧಿಸಿದವು; ಅವುಗಳ ಮಧ್ಯೆ ಯಾವಾಗ ಬೇಕಾದರೂ ಕಲಹವಾಗುವ ಅಪಾಯ ಸ್ಥಿತಿ ಬಂತು. ೧೯ನೇ ಶತಮಾನದಲ್ಲಿ ರಷ್ಯನ್ ಮತ್ತು ಬ್ರಿಟಿಷ್ ಸಾಮ್ರಾಜ್ಯಗಳು ಏಕಕಾಲಕ್ಕೆ ಆಫ್ಘಾನಿಸ್ಥಾನದ ಗಡಿಗೆ ಬಂದವು. ಆಗ



ಆಫ್ಘಾನಿಸ್ಥಾನ ಒಂದು ತಡೆರಾಜ್ಯ (ಬಫರ್ ಸ್ಟೇಟ್)ವಾಗಿತ್ತು. ಆಫ್ಘಾನಿಸ್ತಾನ ಅಥವಾ ಆಸ್ಟ್ರಿಯಾದಂತೆ ಜರ್ಮನಿ ಕೂಡ ಬಲಹೀನ ರಾಷ್ಟ್ರವಾಗಿದ್ದರೆ, ಎರಡು ಆಫ್ಘಾನಿಸ್ತಾನ ಬಲಿಷ್ಠರಾಷ್ಟ್ರಗಳು ಎದುರುಬದಲಾಗಿ ಹೋರಾಡುವ ಸಂದರ್ಭ ಕಡಿಮೆ. ಜರ್ಮನಿ ಬಗ್ಗೆ ಹೀಗೆ ಹೇಳುವುದು ಸಾಧ್ಯವಿಲ್ಲ. ಅದನ್ನು ತಟಸ್ಥ ರಾಷ್ಟ್ರ ಎಂದು ಪರಿಗಣಿಸುವಂತೆ ಅಭಿಪ್ರಾಯಗಳು ಬಂದವು. ಆಗ ಆಂಥೊನಿ ಈಡನ್ ಹೇಳಿದ –

'ಜರ್ಮನಿ ತಟಸ್ಥವಾಗಿ ನಿರಾಯುಧವಾಗಿರಬೇಕಾದರೆ ಅದನ್ನು ನಿರಾಯುಧ ರಾಷ್ಟ್ರವನ್ನಾಗಿ ಯಾರು ಮಾಡುತ್ತಾರೆ? ಅದು ಸಶಸ್ತ್ರ ತಾಟಸ್ಥ್ಯ ರಾಷ್ಟ್ರವಾಗಿರ ಬೇಕಾದರೆ ಅದನ್ನು ತಟಸ್ಥವಾಗಿ ಯಾರು ಮಾಡುತ್ತಾರೆ? ಸೋವಿಯಟ್ ರಷ್ಯಾ, ಜರ್ಮನಿ ತಟಸ್ಥ ರಾಷ್ಟ್ರವಾಗಿ ನಿಲ್ಲುವ ಬಗ್ಗೆ ಯೋಚಿಸಿತು. ಪೂರ್ವ ಜರ್ಮನಿಯ ಮೇಲೆ ತಾನಿಟ್ಟುಕೊಂಡಿದ್ದ ಹಿಡಿತವನ್ನು ಅದು ಸ್ವಲ್ಪಮಟ್ಟಿಗೆ ಸಡಿಲಿಸಿತು. ಈ ಸಡಿಲಿಕೆಯ ಪರಿಣಾಮ ಏನೆಂದರೆ ೧೯೫೩ರಲ್ಲಿ ಬರ್ಲಿನ್‌ನಲ್ಲಾದ ದೊಂಬಿ, ಅನಾಚಾರ. ಪೂರ್ವ ಜರ್ಮನಿಯೊಡನೆ ಪಶ್ಚಿಮ ಜರ್ಮನಿಯೂ ಸೇರಿದ್ದಿದ್ದರೆ, ಪಾಶ್ಚಿಮಾತ್ಯ ದೇಶಗಳೂ ಈ ವಿಪ್ಲವದಲ್ಲಿ ಸೇರಿ ರಷ್ಯಾ ವಿರುದ್ಧ ಯುದ್ಧ ಪ್ರಾರಂಭವಾಗುತ್ತಿತ್ತು. ತಟಸ್ಥ ಜರ್ಮನಿಯ ಬಗ್ಗೆ ಸೋವಿಯಟ್ ರಷ್ಯಾ ಇಟ್ಟುಕೊಂಡ ಭಾವನೆಯನ್ನು ದೂರಮಾಡಿತು. ಪೂರ್ವ ಜರ್ಮನಿಯನ್ನು ಪ್ರತ್ಯೇಕ ಕಮ್ಯುನಿಸ್ಟ್ ಸರ್ವಸ್ವತಂತ್ರ ರಾಜ್ಯವನ್ನಾಗಿ ಮಾರ್ಪಡಿಸುವ ಇಚ್ಛೆ ಅದಕ್ಕೆ ಬಂತು. ಪೂರ್ವ ಜರ್ಮನಿ ಕಮ್ಯುನಿಸ್ಟ್ ಜರ್ಮನಿಯ ನ್ಯೂಕ್ಲಿಯಸ್ (ಕೇಂದ್ರ ಬಿಂದು) ಆಗಲಿ ಎನ್ನುವ ಮಹಾಕಾಂಕ್ಷೆ ಅದಕ್ಕೆ ಇತ್ತೋ ಇಲ್ಲವೋ ಖಚಿತವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಎಲ್ಲಿಯವರೆಗೆ ಸೋವಿಯಟ್ ರಷ್ಯಾಗೆ ಇಂತಹ ಆಕಾಂಕ್ಷೆ ಇದೆ ಎನ್ನುವ ಹೆದರಿಕೆ ಬೇರೆ ರಾಷ್ಟ್ರಗಳಿಗೆ ಇರುತ್ತದೋ ಅಲ್ಲಿಯವರೆಗೆ ಜರ್ಮನಿ ಶೀತಲ ಸಮರದ ಶಿರವಾಗಿರುತ್ತದೆ. ಆದರೆ ಡಾ. ಅಡೆನ್ಯೂಯರ್ ೧೯೫೫ರಲ್ಲಿ ಮಾಸ್ಕೋಗೆ ಭೇಟಿಕೊಟ್ಟ ನಂತರ ಸೋವಿಯತ್ ಸರ್ಕಾರ ಪಶ್ಚಿಮ ಜರ್ಮನಿಯನ್ನು ಮಾನ್ಯ ಮಾಡಿತು. ಅಂತೂ ಜರ್ಮನಿಯಲ್ಲಿ ಶೀತಲ ಸಮರ ಕೊನೆಗೊಂಡಿತು.

೧೯೫೮ರಲ್ಲಿ ಮಿ. ಕ್ರುಶ್ಚೇವ್ ಬರ್ಲಿನ್‌ನ ಪರಿಸ್ಥಿತಿಯನ್ನು ಕಲಕಿದ. ರಷ್ಯಾ ಆಗತಾನೇ ಸ್ಪುಟ್ನಿಕ್ ಅನ್ನು ವ್ಯೋಮಕ್ಕೆ ಹಾರಿಸಿತ್ತು. ತನ್ನ ಬಳಿ ಅತ್ಯಧಿಕ ಸಾಮರ್ಥ್ಯವುಳ್ಳ ಆಯುಧ ಖಂಡಾಂತರ ಕ್ಷಿಪಣಿ – ಇದೆ ಎನ್ನುವುದನ್ನು ಜಗತ್ತಿಗೆ ಸಾರಿದ ಕ್ರುಶ್ಚೇವ್.

ಈಗ ರಷ್ಯಾ ಮತ್ತು ಪಾಶ್ಚಿಮಾತ್ಯ ದೇಶಗಳ ಮಧ್ಯೆ ಯಾವುದು ಮಿಲಿಟರಿ ಬಲದಲ್ಲಿ ಮೇಲು ಎಂದು ಗೊತ್ತಾಯಿತು. ಮಾವೊ – ತ್ಸೆ–ತುಂಗ್ ಅತ್ಯಂತ ಹರ್ಷದಿಂದ ಕೂಗಿ ಹೇಳಿದ – 'ಮೂಡಲ ಮಾರುತ ಪಡುವಣದ ಮಾರುತದ ಮೇಲೆ ಮೇಲುಗೈ ಸಾಧಿಸಿದೆ.' ಕ್ರುಶ್ಚೇವ್ ಪೂರ್ವ ಜರ್ಮನಿಯೊಡನೆ ಪ್ರತ್ಯೇಕ ಶಾಂತಿ ಕೌಲನ್ನು ಮಾಡಿಕೊಳ್ಳುವುದಾಗಿ ಹೇಳಿದ. ಪಾಶ್ಚಿಮಾತ್ಯ ದೇಶಗಳು ಪೂರ್ವ

ಜರ್ಮನಿಯೊಡನೆ ಬರ್ಲಿನ್ ವಿಷಯದಲ್ಲಿ ಸಂಧಾನ ಮಾಡಿಕೊಳ್ಳುವಂತೆ ಬಲಾತ್ಕಾರ ಮಾಡಿದ. ಆದರೆ ಪಾಶ್ಚಿಮಾತ್ಯ ರಾಷ್ಟ್ರಗಳು ಇದಕ್ಕೆ ಸೊಪ್ಪು ಹಾಕಲಿಲ್ಲ. ನೆಮ್ಮದಿ ಇಲ್ಲದ ಬಿಕ್ಕಟ್ಟಿನ ಪರಿಸ್ಥಿತಿ ೧೯೬೧ರವರೆಗೆ ಮುಂದುವರಿಯಿತು. ೧೯೬೧ರಲ್ಲಿ ಪೂರ್ವ ಬರ್ಲಿನ್ ಮತ್ತು ಪಶ್ಚಿಮ ಬರ್ಲಿನ್ ಮಧ್ಯೆ ಎಲ್ಲ ತರಹದ ವ್ಯವಹಾರವೂ ನಿಂತುಹೋಯಿತು. ಗೋಡೆ ಜರ್ಮನಿಯ ಒಕ್ಕೂಟದ ಶವಪೆಟ್ಟಿಗೆಗೆ ಹೊಡೆದ ಕಡೆಯ ಮೊಳೆ. ಪಾಶ್ಚಿಮಾತ್ಯ ರಾಷ್ಟ್ರಗಳು ನಿರಾತಂಕದ ನಿಟ್ಟುಸಿರು ಬಿಟ್ಟವು. ಈಗ ಪೂರ್ವ ಮತ್ತು ಪಶ್ಚಿಮ ಬರ್ಲಿನ್‌ಗಳ ಮಧ್ಯೆ ಕಲಹವಿಲ್ಲ; ಇಲ್ಲದಿದ್ದರೆ ಕಲಹ ತಲೆದೋರಿ ಅದು ಜಾಗತಿಕ ಯುದ್ಧಕ್ಕೆ ನಾಂದಿಯಾಗುತ್ತಿತ್ತು.

ನನಗೆ ಶೀತಲ ಸಮರದ ವೈಯಕ್ತಿಕ ಪರಿಚಯವಾದದ್ದು ಕೊರಿಯಾದಲ್ಲಿ. ನಾನು ೧೯೪೭ರ ಅಂತ್ಯದಲ್ಲಿ ಚೀನಾದಲ್ಲಿ ರಾಯಭಾರಿಯಾಗಿದ್ದೆ. ಆಗ ಕೊರಿಯಾ ಬಗ್ಗೆ ವಿಶ್ವಸಂಸ್ಥೆ ನಿಯೋಜಿಸಿದ್ದ ಮಂಡಲಿಯಲ್ಲಿ ಸದಸ್ಯನಾಗಿದ್ದೆ. ನಂತರ ಅದರ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟೆ. ಅಲ್ಲಿ ನನಗಾದ ಅನುಭವಗಳನ್ನು ಸ್ವಲ್ಪ ಕೂಲಂಕಷವಾಗಿ ತಿಳಿಸಲು ಇಷ್ಟಪಡುತ್ತೇನೆ.

ಆ ಸಮಯದಲ್ಲಿ ಭಾರತ ಯಾವ ಬಲಿಷ್ಠ ಬಣಕ್ಕೂ ಸೇರದ ನೀತಿ ಅನುಸರಿಸಿತ್ತು. ಭಾರತೀಯರಿಗೆ ಇದರ ಬಗ್ಗೆ ವಿವರ ನೀಡುವುದು ಅನಗತ್ಯ. ಭಾರತ ಅಲಿಪ್ತ ನೀತಿ ಅನುಸರಿಸಬೇಕು ಎನ್ನುವ ಧೋರಣೆ ಹುಟ್ಟಿದ್ದು ಜವಾಹರ್‌ಲಾಲ್ ನೆಹರೂರವರ ಮಿದುಳಿನಲ್ಲಿ. ಅವರೊಬ್ಬ ಕನಸುಗಾರ ; ಆದರೆ ಅವರಿಗೆ ವಾಸ್ತವಿಕತೆಯ ಅರಿವಿತ್ತು. ಅಮೆರಿಕಾ ಮತ್ತು ರಷ್ಯಾ ನಡುವೆ ಇದ್ದ ಶೀತಲ ಸಮರದ ಬಗ್ಗೆ ಒಂದು ಯಥಾರ್ಥವಾದ ಅಭಿಪ್ರಾಯ ಅವರು ಇಟ್ಟುಕೊಂಡಿದ್ದರು.

ಭಾರತದ ಸ್ವಾತಂತ್ರ್ಯ ಮತ್ತು ಶೀತಲ ಸಮರದ ತೀವ್ರತೆ ಏಕಕಾಲದಲ್ಲಿ ಸಂಭವಿಸಿತು ಎನ್ನುವುದು ಹಲವರ ಗಮನಕ್ಕೆ ಬಂದಿಲ್ಲ. ಕೆಲವು ತಿಂಗಳ ಹಿಂದೆ ಚರ್ಚಿಲ್ ಫುಲ್‌ಟನ್‌ನಲ್ಲಿ ಭಾಷಣ ಮಾಡಿದ್ದ. ಅದು ಶೀತಲ ಸಮರದ ಸ್ಪಷ್ಟ ಚಿಹ್ನೆ. ೭ ಸೆಪ್ಟೆಂಬರ್ ೧೯೪೬ರಲ್ಲಿ ನೆಹರೂ ತಾತ್ಕಾಲಿಕ ಸರ್ಕಾರವನ್ನು ರಚಿಸಿದ ನಂತರ ವ್ಯಕ್ತಪಡಿಸಿದ ಅಭಿಪ್ರಾಯ ಚರ್ಚಿಲ್‌ನ ಭಾಷಣಕ್ಕೆ ಉತ್ತರ ಕೊಟ್ಟಂತಿತ್ತು. ಅವರು ಹೇಳಿದರು – 'ನಾವು ಪ್ರಪಂಚದ ಅಧಿಕಾರ ರಾಜಕಾರಣದಿಂದ ಸಾಧ್ಯವಾದಷ್ಟು ದೂರವಿರಲು ಯತ್ನಿಸುತ್ತೇವೆ. ನಾವು ಯಾವ ಬಣಕ್ಕೂ ಸೇರಲು ಇಚ್ಛಿಸುವುದಿಲ್ಲ. ಅಧಿಕಾರ – ರಾಜಕಾರಣ ಹಿಂದೆ ಎರಡು ಜಾಗತಿಕ ಯುದ್ಧಗಳಿಗೆ ಎಡೆಮಾಡಿಕೊಟ್ಟಿತು. ಈಗ ಇನ್ನೊಂದು ಯುದ್ಧವಾದರೆ ಮತ್ತಷ್ಟು ಹೆಚ್ಚಿನ ಪ್ರಮಾಣದಲ್ಲಿ ಸಾವು ನೋವು ವಿಪತ್ತು ಉಂಟಾಗುತ್ತದೆ. ಪ್ರತಿಸ್ಪರ್ಧೆ, ದ್ವೇಷ, ಒಳಕಲಹ ಇವೆಲ್ಲಾ ಇದ್ದರೂ ಪ್ರಪಂಚದ ರಾಷ್ಟ್ರಗಳು ಹತ್ತಿರ ಹತ್ತಿರ ಬರುತ್ತಿವೆ, ಅವರಲ್ಲಿ ಸಹಕಾರದ



ಮನೋಭಾವ ಸ್ಥಾಪಿತವಾಗುತ್ತವೆ. ಇಂತಹ ಐಕ್ಯೈಕ ಜಗತ್ತಿಗಾಗಿ ಸ್ವತಂತ್ರ ಭಾರತ ಶ್ರಮಪಡುತ್ತದೆ. ಅಂತರರಾಷ್ಟ್ರೀಯ ವಿಷಯಗಳಲ್ಲಿ ಪ್ರಮುಖ ಪಾತ್ರವಹಿಸುವ ಅದೃಷ್ಟ ಅಮೆರಿಕಾಕ್ಕೆ ಇದೆ. ಅಲ್ಲಿಯ ಜನರಿಗೆ ನಮ್ಮ ಶುಭಾಶಯಗಳು. ಹಾಗೆಯೇ ಸೋವಿಯಟ್ ಯೂನಿಯನ್‌ನ ಮೇಲೆ ಪ್ರಾಪಂಚಿಕ ಘಟನೆಗಳನ್ನು ನಿರ್ಣಯಿಸುವ ಹೆಚ್ಚಿನ ಜವಾಬ್ದಾರಿ ಬಿದ್ದಿದೆ. ಅಲ್ಲಿನ ಜನರಿಗೂ ನಾವು ನಮ್ಮ ಶುಭಕಾಮನೆಗಳನ್ನು ಕಳುಹಿಸಲು ಇಚ್ಛಿಸುತ್ತೇವೆ.'

ಆಸಫ್ ಅಲಿ ಮತ್ತು ನನ್ನನ್ನು ಸ್ವತಂತ್ರ ಭಾರತದ ರಾಯಭಾರಿಗಳಾಗಿ ವಾಷಿಂಗ್‌ಟನ್ ಮತ್ತು ನಾನ್‌ಕಿಂಗ್‌ಗೆ ಸರ್ಕಾರ ಕಳುಹಿಸಿತು. ಆ ಸಂದರ್ಭದಲ್ಲಿ ನೆಹರೂ ನಮಗೆ ಒಂದು ಖಾಸಗಿ ಪತ್ರ ಬರೆದರು – 'ಯಾವ ಬಣಕ್ಕೂ ಸೇರದೆ ಇರುವುದೇ ನಮ್ಮ ನಿಲುವು. ಪ್ರಬಲ ರಾಷ್ಟ್ರಗಳ ರಾಜಕಾರಣದಿಂದ ದೂರವಿರಬೇಕೆಂಬುದೇ ನಮ್ಮ ಆಸೆ. ಈಗ ಇರುವ ಪ್ರಬಲ ರಾಷ್ಟ್ರಗಳೆಂದರೆ (೧) ರಷ್ಯನ್ ಬಣ (೨) ಆ್ಯಂಗ್ಲೋ–ಅಮೆರಿಕನ್ ಬಣ. ನಾವು ಎರಡು ಬಣಗಳೊಡನೆಯೂ ಸ್ನೇಹದಿಂದ ಇರಬೇಕು; ಆದರೆ ಯಾವ ಒಂದು ಬಣಕ್ಕೂ ಸೇರಬಾರದು. ಅಮೆರಿಕಾ ಮತ್ತು ರಷ್ಯಾ ನಡುವೆ ಒಂದರ ಬಗ್ಗೆ ಇನ್ನೊಂದಕ್ಕೆ ತುಂಬ ಅನುಮಾನವಿದೆ. ಹಾಗಾಗಿ ನಾವು ಹೋಗುವ ದಾರಿ ದುಸ್ತರವಾಗಿದೆ. ನಮ್ಮನ್ನು ಈ ಎರಡೂ ರಾಷ್ಟ್ರಗಳು ಅನುಮಾನದಿಂದಲೇ ನೋಡಬಹುದು! ಆದರೆ ಈ ಬಗ್ಗೆ ನಾವು ಏನೂ ಮಾಡುವ ಹಾಗಿಲ್ಲ. ಅಂತ್ಯದಲ್ಲಿ ನಮ್ಮ ವಿದೇಶಾಂಗ ನೀತಿ ನಮ್ಮ ಆಂತರಿಕ ನೀತಿಯ ಮೇಲೆ ನಿಶ್ಚಯಿಸಬೇಕಾಗುತ್ತದೆ. ನಮ್ಮ ನಿಲುವು ಇಂಡಿಯಾದ ಕಮ್ಯುನಿಸ್ಟ್ ಪಾರ್ಟಿಯ ನಿಲುವಿಗಿಂತ ಬೇರೆಯಾದರೂ ನಾವು ಸಮಾಜವಾದ ತತ್ವಕ್ಕೆ ಅನುಗುಣವಾಗಿ ಅಭಿವೃದ್ಧಿಗೊಳ್ಳಬೇಕು ಎಂಬ ಅಸ್ಪಷ್ಟ ಭಾವನೆ ಇದೆ. ನಾವು ಅಮೆರಿಕಾದಿಂದ ತಂತ್ರಜ್ಞಾನದ ಸಹಾಯವನ್ನು ನಿರೀಕ್ಷಿಸುತ್ತೇವೆ. ಸೋವಿಯಟ್ ರಷ್ಯಾದಲ್ಲಿ ಆಗಿರುವ ಬದಲಾವಣೆಗಳಿಂದ ಪ್ರಜೆಗಳಿಗಾಗಿರುವ ಒಳಿತನ್ನು ನಾವು ಅರಿತಿದ್ದೇವೆ. ನಮಗೆ ಸೋವಿಯಟ್ ಯೂನಿಯನ್‌ನ ಸಹಕಾರವೂ ಬೇಕು. ಅದು ನಮ್ಮ ಪಕ್ಕದ ರಾಷ್ಟ್ರವಾಗಿರುವುದರಿಂದ ಅದರೊಂದಿಗೆ ನಿಕಟ ಬಾಂಧವ್ಯ ಬೆಳೆಸಿಕೊಳ್ಳುವುದು ಅನಿವಾರ್ಯ. ಬೇರೆಯವರ ಕೋಪಕ್ಕೆ ಗುರಿಯಾಗುತ್ತೇವೆಂದು ರಷ್ಯಾದೊಡನೆ ವಿರೋಧ ಕಲ್ಪಿಸಿಕೊಳ್ಳುವುದು ಸರಿಯಲ್ಲ, ಹಾಗೆಯೇ ಅಮೆರಿಕಾದೊಡನೆ ನಾವು ಹಗೆತನ ಬೆಳೆಸಿಕೊಳ್ಳುವುದು ಸಾಧ್ಯವಿಲ್ಲ.

ನಾವಿದ್ದ ಸ್ಥಿತಿ ಎಷ್ಟು ಕಷ್ಟಮಯವಾಗಿತ್ತು ಹಾಗೂ ಅಮೆರಿಕಾ ಮತ್ತು ಸೋವಿಯಟ್ ರಷ್ಯಾ ಮಧ್ಯೆ ಎಷ್ಟು ದ್ವೇಷವಿತ್ತು ಎಂದು ನನಗೆ ಕೊರಿಯಾಕ್ಕೆ ಹೋದ ಮೇಲೆ ಗೊತ್ತಾಯಿತು. ನಾನು ಅಲ್ಲಿಗೆ ಹೋದಾಗ ನನಗೆ ಅದರ ಇತಿಹಾಸವಾಗಲೀ, ರಾಜಕೀಯವಾಗಲೀ ಗೊತ್ತಿರಲಿಲ್ಲ. ಅಲ್ಲಿಗೆ ಹೋದೊಡನೆ

ನಾನು ಅದರ ಇತಿಹಾಸ ತಿಳಿದುಕೊಳ್ಳಲು ಪ್ರಯತ್ನಪಟ್ಟೆ. ಅದು ನಿಜವಾಗಿಯೂ ತುಂಬ ವಿಸ್ಮಯಕಾರಿಯಾಗಿತ್ತು. ಮೂರು ಸಾವಿರ ವರ್ಷಗಳಿಂದ ಕೇವಲ ಮೂರು ರಾಜವಂಶದವರು ಎಡೆಬಿಡದೆ ಆಳಿದ ದೇಶ ಅದು. ಹಾಗಾಗಿಯೇ ಅದನ್ನು 'ಪ್ರಶಾಂತ ಪ್ರಾತಃಕಾಲದ ನಾಡು' ಎನ್ನುತ್ತಾರೆ. ಆದರೆ ಅದರಲ್ಲಿದ್ದ ಶಾಂತಿ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಮುರಿಯಿತು. ಅನೇಕ ಪಾಶ್ಚಿಮಾತ್ಯ ರಾಷ್ಟ್ರಗಳು ಹಾಗೂ ಒಂದು ಮೂಡಲ ಪ್ರಬಲ ರಾಷ್ಟ್ರ ಅದನ್ನು ತಮ್ಮೊಡನೆ ವಾಣಿಜ್ಯ ಹಾಗೂ ರಾಜಕೀಯ ಕರಾರನ್ನು ಮಾಡಿಕೊಳ್ಳುವಂತೆ ಬಲವಂತ ಮಾಡಿದವು. ಮೂಡಲ ರಾಷ್ಟ್ರ ಜಪಾನ್ ಹೆಚ್ಚು ಬಲಶಾಲಿಯಾಗಿತ್ತು. ಅದು ವೈರಿ ರಾಷ್ಟ್ರಗಳಾದ ಚೀನಾ ಮತ್ತು ರಷ್ಯಾವನ್ನು ಕೊರಿಯಾದಿಂದ ಹೊಡೆದೋಡಿಸಿತು. ೧೮೯೪ರಲ್ಲಿ ನಡೆದ ಚೀನಾ–ಜಪಾನ್ ಯುದ್ಧದಲ್ಲಿ ಗೆದ್ದದ್ದು ಜಪಾನ್. ಚೀನಾ ಮತ್ತು ರಷ್ಯಾ ವಿರುದ್ಧ ಜಪಾನ್ ೧೯೦೫ರಲ್ಲಿ ಯುದ್ಧ ಮಾಡಿ ಪುನಃ ಜಪಾನ್ ಗೆಲವು ಸಾಧಿಸಿತು. ೧೯೧೦ರಲ್ಲಿ ಜಗತ್ತಿನ ಅತ್ಯಂತ ಬಲಶಾಲಿ ಗ್ರೇಟ್ ಬ್ರಿಟನ್‌ನ ಸಹಾಯದಿಂದ ಅದು ಕೊರಿಯಾದಲ್ಲಿ ತಳವೂರಿತು. ಮೊದಲು ಕೊರಿಯಾ ಸ್ವಾತಂತ್ರ್ಯದ ರಕ್ಷಕ ಎಂದು ಹೇಳುತ್ತಿದ್ದ ಜಪಾನ್ ಕೊನೆಗೆ ಅದರ ಭಕ್ಷಕವಾಯಿತು. ಎರಡನೆಯ ಜಾಗತಿಕ ಸಮಯದಲ್ಲಿ ಕೊರಿಯಾಕ್ಕೆ ತನಗೆ ಸ್ವಾತಂತ್ರ್ಯ ಸಿಗಬಹುದೆಂಬ ಆಸೆ ಚಿಗುರಿತು. ೧೯೪೩ರಲ್ಲಿ ಕೈರೊನಲ್ಲಿ ನಡೆದ ಸಮಾವೇಶದಲ್ಲಿ 'ಕೊರಿಯಾದ ಸ್ವಾತಂತ್ರ್ಯ' ಯುದ್ಧದ ಉದ್ದೇಶ ಎಂದು ಘೋಷಿಸಿದ್ದರು. ಆದರೆ ಯುದ್ಧದ ನಂತರ ರಷ್ಯನ್ ಮತ್ತು ಅಮೆರಿಕನ್ ಜನರಲ್‌ಗಳು ಕೊರಿಯವನ್ನು ಎರಡು ಭಾಗ ಮಾಡಿದರು – ೩೮ನೇ ಅಕ್ಷಾಂಶ ರೇಖೆಗೆ ಉತ್ತರಕ್ಕೆ ಇರುವ ಭಾಗ ಉತ್ತರ ಕೊರಿಯಾ, ರೇಖೆಗೆ ದಕ್ಷಿಣದಲ್ಲಿರುವುದು ದಕ್ಷಿಣ ಕೊರಿಯಾ.

ಅಮೆರಿಕಾ, ರಷ್ಯಾ, ಬ್ರಿಟನ್ ಮತ್ತು ಚೀನಾ ನ್ಯಾಸಧಾರಿಗಳಾಗಿ ಕೊರಿಯಾದ ಆಡಳಿತವನ್ನು ಐದು ವರ್ಷಗಳ ಕಾಲ ನೋಡಿಕೊಳ್ಳಬೇಕು, ನಂತರ ಕೊರಿಯಾಕ್ಕೆ ಸ್ವಾತಂತ್ರ್ಯ ಕೊಡಬೇಕು. ಆದರೆ ಕೊರಿಯಾ ಪ್ರಜೆಗಳಿಗೆ ನ್ಯಾಸ (Trustee) ಎನ್ನುವ ಪದ ದ್ವೇಷ ಹುಟ್ಟಿಸುತ್ತಿತ್ತು. ಜಪಾನ್ ಕೊರಿಯಾಕ್ಕೆ ನ್ಯಾಸಧಾರಿಯಾಗಿ ತಾನೇ ಹೊಕ್ಕಿದ್ದು? ಕೊರಿಯಾ ಈ ಸೂತ್ರಕ್ಕೆ ಒಪ್ಪದೇ ಇರುವುದಕ್ಕೆ ಕಾರಣ ಅಮೆರಿಕಾ ಎಂದು ರಷ್ಯಾ ಅನುಮಾನಿಸಿತು. ಅಮೆರಿಕಾದ ಆಶ್ರಯದಲ್ಲಿದ್ದ ಡಾ. ಸೈಂಗ್‌ಮನ್ ರ್‍ಹೀ ದಕ್ಷಿಣ ಕೊರಿಯಾಕ್ಕೆ ಇದ್ದಕ್ಕಿದ್ದಂತೆ ಬಂದದ್ದು ರಷ್ಯನರ ಸಂಶಯವನ್ನು ದೃಢಪಡಿಸಿತು. ಡಾ. ರ್‍ಹೀ (Rhee) ಕೊರಿಯಾದ ಸ್ವಾತಂತ್ರ್ಯಕ್ಕೆ ಜೀವನ ಪೂರ್ತಿ ಹೋರಾಡಿದವನು. ಆದರೆ ರಷ್ಯಾ ಅವನನ್ನು ಅಮೆರಿಕಾದ ಅನುಯಾಯಿ ಎಂದು ಭಾವಿಸಿತ್ತು. ಉತ್ತರ ಕೊರಿಯಾ ಅವನೊಬ್ಬ ನಾಯಕ ಎಂದು ಗುರುತಿಸಿಯೇ ಇರಲಿಲ್ಲ. ಉತ್ತರ ಕೊರಿಯಾದಲ್ಲಿ ಕಿಮ್ ಇಲ್–ಸುಂಗ್ ನೇತೃತ್ವದಲ್ಲಿ ಕಮ್ಯುನಿಸ್ಟರು



ಮೇಲ್ಬರುತ್ತಿದ್ದರು.

ಕೊರಿಯಾದ ಏಕೀಕರಣಕ್ಕೆ ಮತ್ತು ಸ್ವಾತಂತ್ರ್ಯಕ್ಕೆ ಹೇಗೆ ಸಹಾಯ ಮಾಡಬಹುದು ಎನ್ನುವುದೇ ದೊಡ್ಡ ಪ್ರಶ್ನೆಯಾಗಿತ್ತು. ರಷ್ಯಾ ಮತ್ತು ಅಮೆರಿಕಾದ ಯೋಧರನ್ನೆಲ್ಲಾ ಅವರವರ ನಾಡಿಗೆ ವಾಪಸ್ಸು ಕಳುಹಿಸಿ, ಕೊರಿಯನ್ನರಿಗೆ ನಿಮ್ಮ ಸಮಸ್ಯೆಯನ್ನು ನೀವೇ ಪರಿಹರಿಸಿಕೊಳ್ಳಿ ಎಂದು ಹೇಳಬೇಕು ಎಂದು ರಷ್ಯಾ ತಿಳಿಸಿತು. ಹಾಗೆ ಮಾಡಿದರೆ ಅಲ್ಲಿ ಗಲಭೆ, ಗಲಾಟೆ ಉದ್ಭವವಾಗುತ್ತದೆ. ನಂತರದಲ್ಲಿ ಕಮ್ಯುನಿಸಂ ಎನ್ನುವ ಭಯ ಅಮೆರಿಕಾಕ್ಕೆ. ಆದುದರಿಂದ ಯೋಧರನ್ನು ವಾಪಸ್ಸು ಕರೆಸಿಕೊಳ್ಳುವುದು ಮತ್ತು ಸ್ವಾತಂತ್ರ್ಯ ಏಕಕಾಲಕ್ಕೆ ವಿಶ್ವಸಂಸ್ಥೆಯ ಅಧೀನದಲ್ಲೇ ಆಗಬೇಕು ಎಂದು ಅಮೆರಿಕಾ ತಿಳಿಸಿತು. ವಿಶ್ವಸಂಸ್ಥೆಯ ಮಹಾಸಭೆ ಇದಕ್ಕೆ ಒಪ್ಪಿ ಒಂದು ಮಂಡಲಿಯನ್ನು ಸ್ಥಾಪಿಸಿತು. ಮಂಡಲಿಯಲ್ಲಿ ಆಸ್ಟ್ರೇಲಿಯಾ, ಕೆನಡಾ, ಚೀನಾ, ಎಲ್–ಸಾಲ್ವೆಡಾರ್, ಫ್ರಾನ್ಸ್, ಇಂಡಿಯಾ, ಫಿಲಿಫೈನ್ಸ್, ಸಿರಿಯಾ ಮತ್ತು ಯುಕ್ರೇನಿನ ಪ್ರತಿನಿಧಿಗಳು ನೇಮಿಸಲ್ಪಟ್ಟರು. ನಾನು ಭಾರತದ ಪ್ರತಿನಿಧಿ, ನಂತರ ಅದರ ಅಧ್ಯಕ್ಷನಾಗಿ ಚುನಾಯಿಸಲ್ಪಟ್ಟೆ. ಇದನ್ನು ಹಿಂದೆಯೇ ಹೇಳಿದ್ದೇನೆ.

ನಾವು ಕೊರಿಯಾ ಸಮಸ್ಯೆಯನ್ನು ಶೀತಲ ಸಮರ ಬಿಟ್ಟು, ಬಗೆ ಹರಿಸಬೇಕೆಂದು ಯತ್ನಿಸಿದೆವು. ಕೊರಿಯಾದ ಸಾಮಾನ್ಯ ಜನರ ಹಿತದ ಬಗ್ಗೆ ಗಮನಕೊಡುವುದು ನಮ್ಮ ಅಭಿಪ್ರಾಯ. ನಾನು ಕೊರಿಯಾ ಬಗ್ಗೆ ವಿಶ್ವ ಸಂಸ್ಥೆಗೆ ಕೊಟ್ಟ ವರದಿ ಹೀಗಿತ್ತು – 'ನಾವು ಕೊರಿಯಾ ಸಮಸ್ಯೆಯನ್ನು ಕೊರಿಯನ್ನರ ಒಳಿತನ್ನೇ ಗುರಿಯಾಗಿಟ್ಟು ಬಗೆ ಹರಿಸಿದರೆ ಮೂವತ್ತು ದಶಲಕ್ಷ ಕೊರಿಯನ್ನರು ವಿಶ್ವಸಂಸ್ಥೆಗೆ ಚಿರಕಾಲ ಕೃತಜ್ಞರಾಗಿರುತ್ತಾರೆ. ಕೊರಿಯಾ ಒಂದು 'ಸಾಧುಗಳ' ರಾಜ್ಯ. ತನ್ನ ತಪ್ಪಿಲ್ಲದೇ ಅದು ಅಂತರರಾಷ್ಟ್ರೀಯ ಪ್ರಾಬಲ್ಯಕ್ಕೆ ಮಣಿದು ರಾಜಕೀಯದಲ್ಲಿ ಆಟವಾಡಬೇಕಾಗಿದೆ. ಈಗ ಸಮಸ್ಯೆಗೆ ಪರಿಹಾರ ದೊರಕಿದರೆ ಪ್ರಪಂಚಕ್ಕೆ ಮುಖ್ಯವಾಗಿ ಏಷ್ಯನ್ ರಾಷ್ಟ್ರಗಳಿಗೆ ಬಲಿಷ್ಠ ರಾಷ್ಟ್ರಗಳ ಬಗ್ಗೆ ಹೆಚ್ಚು ಗೌರವ ಮೂಡುತ್ತದೆ. ಈ ಮಂಡಲಿಯಲ್ಲಿರುವ ಮೂರು ದೇಶಗಳಿಗೆ ಇತ್ತೀಚೆಗೆ ಸ್ವಾತಂತ್ರ್ಯ ಸಿಕ್ಕಿದೆ, ನನ್ನ ದೇಶ ಭಾರತಕ್ಕೆ ಸ್ವಾತಂತ್ರ್ಯ ದೊರೆತದ್ದು ಕಡೆಯಲ್ಲಿ. ಭಾರತೀಯನಾಗಿ ಹಾಗೂ ವಿಶ್ವಸಂಸ್ಥೆ ನಿಯಮಿಸಿದ ಸಮಿತಿಯ ಅಧ್ಯಕ್ಷನಾಗಿ ನಾನು ಕೊರಿಯಾ ಆದಷ್ಟು ಬೇಗ ಪೂರ್ಣ ಸಾರ್ವಭೌಮತ್ವವುಳ್ಳ ಸ್ವತಂತ್ರ ದೇಶ ಆಗುವುದಕ್ಕೆ ಪರಿಹಾರ ಸೂಚಿಸಬೇಕಾಗಿದೆ.'

ಆದರೆ ನನ್ನ ಈ ಮನವಿಗೆ ಬೆಂಬಲ ಸಿಗಲಿಲ್ಲ. ನಾವು ಮೊದಲಿನಿಂದಲೂ ಶೀತಲ ಸಮರದ ವಿರುದ್ಧವೇ ಇದ್ದೆವು. ಆದರೂ ಮಂಡಲಿಯ ಒಂದು ರಾಷ್ಟ್ರ – ಯುಕ್ರೇನ್ – ನಮ್ಮ ಜೊತೆಗೂಡಿ ಕೆಲಸಮಾಡಲಿಲ್ಲ. ಉತ್ತರ ಕೊರಿಯಾ ನಮ್ಮನ್ನು ಗಮನಿಸಲೇ ಇಲ್ಲ. ಉತ್ತರ ಕೊರಿಯಾದಲ್ಲಿದ್ದ ಸೋವಿಯಟ್ ದಳದ ಕಮ್ಯಾಂಡಿಂಗ್

ಆಫೀಸರ್ ಹಾಗೂ ದಕ್ಷಿಣ ಕೊರಿಯಾದಲ್ಲಿದ್ದ ಅಮೆರಿಕನ್ ದಳದ ಕಮ್ಯಾಂಡಿಂಗ್ ಆಫೀಸರ್ ಔಪಚಾರಿಕವಾಗಿ ಭೇಟಿ ಮಾಡಬೇಕೆಂದು ಮಂಡಲಿ ಸಲಹೆ ಮಾಡಿತು. ನಾನು ಇಬ್ಬರು ಕಮ್ಯಾಂಡಿಂಗ್ ಆಫೀಸರ್‌ಗಳಿಗೂ ಪತ್ರ ಬರೆದೆ. ಅವರಿಂದ ಜವಾಬು ಬರಲಿಲ್ಲ. ಆದರೆ. ಮಿ. ಗ್ರೋಮಿಕೊ ವಿಶ್ವಸಂಸ್ಥೆಯ ಮಹಾಸಭೆಯಲ್ಲಿ 'ಕೊರಿಯಾ ಬಗ್ಗೆ ರಚಿಸಿರುವ ಮಂಡಲಿ ಬಗ್ಗೆ ಸೋವಿಯಟ್ ಸರ್ಕಾರಕ್ಕೆ ಇನ್ನೂ ನಕಾರಾತ್ಮಕ ಭಾವನೆ ಇದೆ' ಎಂದು ಹೇಳಿದ. ಹೀಗಾಗಿ, ರಷ್ಯಾ ಸೇನೆ ಆಕ್ರಮಿಸಿಕೊಂಡಿರುವ ಕೊರಿಯಾ ಭಾಗದಲ್ಲಿ (ಉತ್ತರ ಕೊರಿಯಾ) ಮಂಡಲಿ ಯಾವ ಕೆಲಸವನ್ನು ಮಾಡಲಾಗಲಿಲ್ಲ.

ಹಾಗಿದ್ದರೂ ನಮಗೆ ಸಾಧ್ಯವಾದಷ್ಟು ತನಿಖಾ ಕಾರ್ಯವನ್ನು ನಾವು ದಕ್ಷಿಣ ಕೊರಿಯಾದಲ್ಲಿ ಕೈಕೊಂಡೆವು. ಸ್ವತಂತ್ರ ರಾಷ್ಟ್ರವಾಗಲು ಕೊರಿಯಾ ಸಿದ್ಧವಾಗಿತ್ತು. ಜಪಾನ್ ಆಕ್ರಮಿಸಿದ ಆ ಕಪ್ಪು ದಿನಗಳಲ್ಲೂ ಕೊರಿಯನ್ನರು ಸ್ವಾತಂತ್ರ್ಯದ ಚೈತನ್ಯವನ್ನು ಜೀವಂತವಾಗಿಟ್ಟಿದ್ದರು. ಸ್ವಾತಂತ್ರ್ಯದ ಜ್ಯೋತಿಯನ್ನು ಹತ್ತಿರದಿಂದ ದೂರದವರೆಗೂ ಕೊಂಡೊಯ್ಯದ ನಾಯಕರಲ್ಲಿ ಡಾ. ಸೈಂಗ್‌ಮನ್ ರ್ಹೀ ಪ್ರಮುಖ. ಅವನನ್ನು ಬಿಟ್ಟರೆ ಕಿಮ್ ಕೂ. ಆತ ರ್ಹೀನ್ ಕಡುವೈರಿ. ಯುವಕನಾಗಿದ್ದಾಗ ಆತ ಹಲವಾರು ವಿಖ್ಯಾತ ವೀರ ಕೃತ್ಯಗಳನ್ನು ಎಸೆಗಿದ್ದ. ಕೊರಿಯಾದ ಕಡೆಯ ರಾಣಿಯನ್ನು ಕೊಂದ, ಕ್ಯಾಪ್ಟನ್ ಟ್ಸುಚಿಡ (Tsuchida) ಎಂಬ ಜಪಾನಿಯನ್ನು ಬರಿಗೈಯಿಂದ ಕತ್ತು ಹಿಸುಕಿ ಸಾಯಿಸಿದ ಕಿಮ್ ಕೂ. ೧೯೩೨ರಲ್ಲಿ ಷಾಂಗೈನ ಪಾರ್ಕ್‌ನಲ್ಲಿ ಅವನು ಕೈ ಬಾಂಬು ಎಸೆದುದರ ಫಲವಾಗಿ ಜಪಾನಿ ಕಮ್ಯಾಂಡರ್ – ಇನ್–ಛೀಫ್ ಪ್ರಾಣ ಬಿಟ್ಟ, ಒಬ್ಬ ಜಪಾನಿ ಅಡ್ಮಿರಲ್ ಒಂದು ಕಣ್ಣು ಕಳೆದುಕೊಂಡ, ಒಬ್ಬ ಜಪಾನಿ ಜನರಲ್‌ನ ಕಾಲು ತುಂಡಾಯಿತು.

ಕೊರಿಯನ್ನರು ಜಪಾನೀ ಆಡಳಿತದೊಡನೆ ರಾಜಿಯಾಗಲೇ ಇಲ್ಲ. ೧೯೧೯ರಲ್ಲಿ ಅವರು ಜಪಾನೀಯರ ಕಬಳಿಕೆ ವಿರುದ್ಧ ದಂಗೆ ಎದ್ದರು. ಅವರ ನಾಯಕರು ಗಾಂಧೀಜಿಯವರ ತತ್ವಗಳಿಗೆ ಮಾರುಹೋಗಿದ್ದರು. ಅವರು ತಮ್ಮ ಅನುಯಾಯಿಗಳಿಗೆ ಹೋರಾಟ ಅಹಿಂಸಾರೂಪದಲ್ಲಿರಬೇಕೆಂದು ಹೇಳಿದರು. ಆ ಸಂದರ್ಭದಲ್ಲಿ ಹೊರಡಿಸಿದ ಕರಪತ್ರ (ಪ್ಯಾಂಪ್ಲೆಟ್) ಹೀಗಿತ್ತು –

ನೀನು ಏನೇ ಮಾಡು
ಜಪಾನೀಯರನ್ನು ಅವಮಾನ ಮಾಡಬೇಡ
ಅವರಿಗೆ ಕಲ್ಲು ಹೊಡೆಯಬೇಡ
ಅವರನ್ನು ಮುಷ್ಟಿಯಿಂದ ಗುದ್ದಬೇಡ –
ಏಕೆಂದರೆ ಇವೆಲ್ಲಾ ಅನಾಗರಿಕರ ಕೃತ್ಯಗಳು

ಉತ್ತರ ಕೊರಿಯಾ ಅನುಸರಿಸಿದ ನೀತಿರೀತಿಯಿಂದಾಗಿ ಕೊರಿಯಾದ



ಏಕೀಕರಣ ಮತ್ತು ಸ್ವಾತಂತ್ರ್ಯದ ಬಗ್ಗೆ ಮಂಡಲಿ ಒಂದು ನಿರ್ದಿಷ್ಟ ಯೋಜನೆಯನ್ನು ತಯಾರಿಸಲಾಗಲಿಲ್ಲ, ಕೊರಿಯಾದ ಒಂದು ಭಾಗವನ್ನು ಪ್ರತ್ಯೇಕಿಸಿ ಅದನ್ನು ಸರ್ವಸ್ವತಂತ್ರ ರಾಜ್ಯವನ್ನಾಗಿ ಮಾಡುವಂತೆ ವಿಶ್ವಸಂಸ್ಥೆಗೆ ಶಿಫಾರಸ್ಸು ಮಾಡಲೂ ನಾವು ಹಿಂಜರಿದೆವು. ಇದಕ್ಕೆ ಕಾರಣ ನಾವು ಹಾಗೆ ಮಾಡಿದ್ದರೆ ಕೊರಿಯಾ ವಿಭಜನೆ ಸರ್ವಕಾಲಿಕವಾಗುತ್ತಿತ್ತು. ಕೊರಿಯಾ ಒಂದೇ ದೇಶ ಅನ್ನುವುದು ವಿಧಿ ನಿಯಮ. ಉತ್ತರ ಕೊರಿಯಾ ದಕ್ಷಿಣ ಕೊರಿಯಾದ ನೆರವಿಲ್ಲದೆ ಬದುಕಲಾರದು, ಹಾಗೆಯೇ ದಕ್ಷಿಣ ಕೊರಿಯಾ ಬದುಕಲು ಉತ್ತರ ಕೊರಿಯಾ ಬೇಕು. ದಕ್ಷಿಣ ಕೊರಿಯಾ ವ್ಯವಸಾಯದ ಪ್ರದೇಶ, ಉತ್ತರ ಕೊರಿಯಾದಲ್ಲಿ ಖನಿಜ ಸಂಪತ್ತು, ಕೈಗಾರಿಕೆಗಳಿವೆ. ದಕ್ಷಿಣ ಕೊರಿಯಾ 'ಏಷ್ಯಾದ ರೊಟ್ಟಿಯ ಬುಟ್ಟಿ' ಎನಿಸಿಕೊಂಡಿತ್ತು. ದಕ್ಷಿಣ ಕೊರಿಯಾದಲ್ಲಿ ಹೇರಳವಾಗಿ ಬತ್ತ ಬೆಳೆಯುತ್ತಾರೆ. ಕಬ್ಬಿಣ, ಕಲ್ಲಿದ್ದಲು, ಮರಮುಟ್ಟು, ಜಲವಿದ್ಯುತ್ – ಇವೆಲ್ಲಾ ಇರುವುದು ಉತ್ತರ ಕೊರಿಯಾದಲ್ಲಿ. ಆರ್ಥಿಕ, ರಾಜಕೀಯ, ಐತಿಹಾಸಿಕ ದೃಷ್ಟಿಯಿಂದ ಕೊರಿಯಾವನ್ನು ವಿಭಜಿಸಬಾರದು, ಪ್ರತಿಯೊಬ್ಬ ಕೊರಿಯನ್ನಿನ ಹೃದಯದ ಅಂತರಾಳದಲ್ಲಿರುವುದು ಇದೇ.

ನಾನು ಸೋಲ್ (Seoul) ನಲ್ಲಿರುವ ಕ್ರೀಡಾಂಗಣದಲ್ಲಿ ೧೫ ಜನವರಿ ೧೯೪೮ರಂದು ಭಾಷಣ ಮಾಡಿದೆ. ಎರಡು ಲಕ್ಷ ಜನ ಸೇರಿದ್ದರು. ನಾನು ಕೊರಿಯಾದ ಐಕ್ಯತೆ ಬಗ್ಗೆ ಹೇಳಿದೆ–'ವಿಧಿ ಎರಡನ್ನೂ ಸೇರಿಸಿದೆ. ಅದನ್ನು ಯಾರೂ ಪ್ರತ್ಯೇಕಿಸಲು ಹೋಗಬಾರದು' ಎಂದೆ. ನನ್ನ ಭಾಷಣ ಕೇಳಿ ಜನರು ಪುಳಕಿತರಾದರು. ದೀರ್ಘ ಕರತಾಡನ ಮಾಡಿದರು. ಅದನ್ನು ನಾನು ಮರೆಯಲಾರೆ.

ನಾವು ತೆಗೆದುಕೊಂಡ ತೀರ್ಮಾನವನ್ನು ಮಹಾಸಭೆಗೆ ತಿಳಿಸಲು ನಾನು ನ್ಯೂಯಾರ್ಕ್‌ಗೆ ಹಾರಿದೆ. ಆದರೆ ಅಮೆರಿಕಾ ತನ್ನ ಅಧೀನದಲ್ಲಿರುವ ಪ್ರತ್ಯೇಕ ರಾಜ್ಯವನ್ನು ದಕ್ಷಿಣ ಕೊರಿಯಾದಲ್ಲಿ ಸ್ಥಾಪಿಸಲು ನಿರ್ಧರಿಸಿತ್ತು. ಅದರ ಬಗ್ಗೆ ಮಹಾಸಭೆಯಲ್ಲಿ ಒಂದು ಠರಾವು ಮಂಡಿಸಲಾಯಿತು. ಹೆಚ್ಚು ಮತಗಳಿಂದ ಠರಾವು ಪಾಸಾಯಿತು, ರಿಪಬ್ಲಿಕ್ ಆಫ್ ಕೊರಿಯಾ ಸ್ಥಾಪನೆಗೊಂಡಿತು. ವಿಶ್ವಸಂಸ್ಥೆಯಿಂದ ಅದು ಅಂಗೀಕರಿಸಲ್ಪಟ್ಟಿತು ಕೂಡಾ. ಅಷ್ಟರಲ್ಲಿ ಬೇರೊಂದು ರಾಜ್ಯ – ಪೀಪಲ್ಸ್ ರಿಪಬ್ಲಿಕ್ ಆಫ್ ಕೊರಿಯಾ – ಉತ್ತರದಲ್ಲಿ ಸ್ಥಾಪನೆಗೊಂಡಿತು. ಪೂರ್ಣ ಕೊರಿಯಾ ತನ್ನ ವ್ಯಾಪ್ತಿಗೆ ಬರುತ್ತದೆ ಎಂದು ಅದು ಹೇಳಿತು. ಈ ಎರಡು ರಾಜ್ಯಗಳು ಪರಸ್ಪರ ಹೋರಾಟಕ್ಕಿಳಿದು ಬೇರೆ ದೇಶಗಳು ಅವುಗಳ ಬೆಂಬಲಕ್ಕೆ ಬಂದು ಯುದ್ಧ ಪ್ರಾರಂಭವಾಗಬಹುದೆಂದು ನಾವು ಹೆದರಿದ್ದೆವು. ವಿಶ್ವ ಸಭೆಯಲ್ಲಿ ನಾನು ಈ ಬಗ್ಗೆ ಎಚ್ಚರಿಕೆಯ ಮಾತುಗಳನ್ನು ಹೇಳಿದೆ – 'ಕೊರಿಯಾ ಸ್ಫೋಟಿಸಬಹುದು ; ಅದು ಏಷ್ಯಾದ ಮತ್ತು ಪ್ರಪಂಚದ ವಿಪ್ಲವಕ್ಕೆ ಕಾರಣವಾಗಬಹುದು.'

ನಾವು ಅಂದುಕೊಂಡಂತೆ ೧೯೫೦ ರಲ್ಲಿ ಕೊರಿಯಾ ಸ್ಫೋಟಗೊಂಡಿತು. ಚೀನಾದಲ್ಲಿ ಒಂದು ಕಡೆ, ವಿಶ್ವಸಂಸ್ಥೆಯನ್ನು ಒಂದು ಕಡೆ ಅದು ಸೆಳೆಯಿತು. ಭಾರತದ ನಿಲುವು, ಸುಡು ಸಮರವೇ ಆಗಲೀ, ಶೀತಲ ಸಮರವೇ ಆಗಲಿ – ಒಂದೇ ಆಗಿತ್ತು. ಭಾರತದ ವಿದೇಶಾಂಗ ನೀತಿಯಲ್ಲಿ ಇದು ಗಮನಾರ್ಹ ಹೆಜ್ಜೆ. ಉತ್ತರ ಕೊರಿಯಾದ ದಂಡು ದಕ್ಷಿಣ ಕೊರಿಯಾದ ಮೇಲೆ ಆಕ್ರಮಣ ಮಾಡಿದ ವಿಷಯ ವಿಶ್ವಸಂಸ್ಥೆಯಲ್ಲಿ ಬಂದಾಗ ಭಾರತ ಉತ್ತರ ಕೊರಿಯಾ ಆಕ್ರಮಣಕಾರಿ ದೇಶವೆಂದು ಹೇಳಿತು. ಇದೇ ಅಭಿಪ್ರಾಯ ಅಧಿಕಾಂಶ ಸದಸ್ಯರಿಗೆ ಇತ್ತು. ಉತ್ತರ ಕೊರಿಯಾ ಸರ್ಕಾರ ಅಮೆರಿಕಾದ ಪ್ರತಿಕ್ರಿಯೆ ಹೀಗಿರುತ್ತದೆ ಎಂದು ಭಾವಿಸಿರಲಿಲ್ಲ. ಕೆಲವು ತಿಂಗಳ ನಂತರ ಅಮೆರಿಕಾದ ಸೆಕ್ರೆಟರಿ ಆಫ್ ಸ್ಟೇಟ್ ಮಿ. ಅಚೆಸನ್, 'ಕೊರಿಯಾ ಅಮೆರಿಕಾದ ರಕ್ಷಣೆಯ ವ್ಯಾಪ್ತಿಗೆ ಬರುವುದಿಲ್ಲ' ಎಂದು ಹೇಳಿದ್ದ. '೧೨ ಜನವರಿ ೧೯೫೦ರಲ್ಲಿ ಅವನು ಅಲ್ಯುಷಿಯನ್ ದ್ವೀಪಗಳಿಂದ (Aleution Islands) ಹಿಡಿದು ಜಪಾನ್ ಮತ್ತು ಓಕಿನವಾ (Okinawa) ವರೆಗೆ ಮಾತ್ರ ಅಮೆರಿಕಾದ ರಕ್ಷಣೆಯ ವ್ಯಾಪ್ತಿ' ಎಂದು ಅವನು ಹೇಳಿದ್ದೇ ತಡ ಉತ್ತರ ಕೊರಿಯಾ ದಕ್ಷಿಣ ಕೊರಿಯಾದ ಮೇಲೆ ಆಕ್ರಮಣ ನಡೆಸಲು ಅದಕ್ಕೆ ಹಸಿರು ದೀಪ ತೋರಿಸಿದಂತಾಯಿತು.

ಉತ್ತರ ಕೊರಿಯಾದಿಂದ ಆಕ್ರಮಣವಾದೊಡನೆ, ಅಮೆರಿಕಾ ಭದ್ರತಾ ಮಂಡಲಿ ಒಪ್ಪಿಗೆ ನೀಡುವ ಮುಂಚೆಯೇ ದಕ್ಷಿಣ ಕೊರಿಯಾವನ್ನು ರಕ್ಷಿಸಲು ತನ್ನ ಸೇನೆ ಕಳುಹಿಸಿತು. ಹದಿನೈದು ದೇಶಗಳು ದಕ್ಷಿಣ ಕೊರಿಯಾದ ಸಹಾಯಕ್ಕೆ ತಮ್ಮ ಸೇನೆಗಳನ್ನು ಕಳುಹಿಸಲು ಒಪ್ಪಿದವು. ಇಂಡಿಯಾ ಆ್ಯಂಬ್ಯುಲೆನ್ಸ್ ದಳವನ್ನು ಕಳುಹಿಸಿತು. ಕೊರಿಯಾ ಕದನ ಉಗ್ರವಾಗಿ ಅದು ಜಾಗತಿಕ ಯುದ್ಧಕ್ಕೆ ನಾಂದಿಯಾಗಬಹುದೆಂಬ ಹೆದರಿಕೆ ಭಾರತಕ್ಕೆ ಇತ್ತು. ಯುದ್ಧ ಯಾವ ಪಥದಲ್ಲಿ ಸಾಗಿತು ಎನ್ನುವುದನ್ನು ಇಲ್ಲಿ ವಿವರಿಸಬೇಕಾಗಿಲ್ಲ. ಜನರಲ್ ಮ್ಯಾಕ್ ಆರ್ಥರ್ ತನ್ನ ಚಾಣಾಕ್ಷ್ಯತೆ ಉಪಯೋಗಿಸಿ ದಕ್ಷಿಣ ಕೊರಿಯಾದಲ್ಲಿದ್ದ ಆಕ್ರಮಣಕಾರಿ ಉತ್ತರ ಕೊರಿಯಾದ ಸೇನೆಯನ್ನು ಹೊರದಬ್ಬಿದ. ಯುದ್ಧ ಮುಗಿಯಲು ಅಷ್ಟು ಸಾಕಾಗಿತ್ತು. ಆದರೆ ಗೆದ್ದ ಉತ್ಸಾಹದಿಂದ ಜನರಲ್ ಮ್ಯಾಕ್ ಆರ್ಥರ್ ವಿಶ್ವಸಂಸ್ಥೆಯ ಒಪ್ಪಿಗೆ ಇಲ್ಲದೆ ಸೇನೆಯನ್ನು ಉತ್ತರ ಕೊರಿಯಾಕ್ಕೂ ನುಗ್ಗಿಸಿದ. ಯುದ್ಧ ಚೀನಾದ ಹೊಸ್ತಿಲು ಅಂದರೆ ಯಲು (Yalu) ನದಿ ತೀರದವರೆಗೂ ಬಂತು, ಚೀನಾ ಅಮೆರಿಕಾ ಸೇನೆಯನ್ನು ದಕ್ಷಿಣಕ್ಕೆ ದಬ್ಬಿತು. ಆಗ ಆದ ಸಾವು ನೋವು ಅಗಾಧ. ಅಮೆರಿಕಾದ ಅಧ್ಯಕ್ಷ ಟ್ರೂಮನ್ ಚೀನಾಕ್ಕೆ ಪಾಠ ಕಲಿಸಲು ಅದರ ಮೇಲೆ ಪರಮಾಣುಬಾಂಬನ್ನು ಹಾಕುವ ಯೋಚನೆಯನ್ನೂ ಮಾಡಿದ. ಕಾಮನ್‌ವೆಲ್ತ್ ದೇಶಗಳು, ಮುಖ್ಯವಾಗಿ ಕೆನಡಾ, ಕೊರಿಯಾ ಬಿಕ್ಕಟ್ಟಿನ ಪರಿಹಾರಕ್ಕೆ ಪುನಃ ಪ್ರಯತ್ನಿಸಿದವು. ಅಂತಹ ಪರಿಹಾರ ಒದಗಿದ್ದರೆ ಚೀನಾ



ಒಂದು ಕ್ರೋಧದ, ಹತಾಶೆಗೊಂಡ, ಪ್ರತೀಕಾರ ಭಾವನೆಯುಳ್ಳ ಲೆವಿಯತಾನ್ (Leviathan) ಆಗುವುದನ್ನು ತಪ್ಪಿಸಬಹುದಾಗಿತ್ತು. ಆದರೆ ಅಮೆರಿಕಾ, ಚೀನಾ ಒಂದು ಆಕ್ರಮಣಕಾರಿ ದೇಶ ಎಂದು ಹೇಳಿ ಅದಕ್ಕೆ ಕಳಂಕ ಹತ್ತುವಂತೆ ಮಾಡಿತು. ಇದರ ಫಲ ಏನೆಂದರೆ ಯುದ್ಧ ಮೂರು ವರ್ಷಗಳ ಕಾಲ ಸಾಗಿತು. ಒಂದು ಲಕ್ಷ ನಲವತ್ತು ಸಾವಿರ ಅಮೆರಿಕನ್ ಯೋಧರು ಸತ್ತರು, ಅದಕ್ಕಿಂತ ಹೆಚ್ಚು ಜನ ಕೊರಿಯನ್ನರು ಪ್ರಾಣ ಬಿಟ್ಟರು.

ಯುದ್ಧದ ನಿಲುಗಡೆಗೆ ಭಾರತ ವಿಶ್ವಸಂಸ್ಥೆಯಲ್ಲಿ, ಹಾಗೂ ಬೇರೆ ಬೇರೆ ಕಡೆಯಿಂದ ಪ್ರಯತ್ನ ಮಾಡುವುದನ್ನು ಮುಂದುವರಿಸಿತು. ಯುದ್ಧ ಖೈದಿಗಳನ್ನು ಅವರವರ ಸ್ವದೇಶಕ್ಕೆ ಹೇಗೆ ಹಿಂದಿರುಗಿಸಬೇಕು ಎನ್ನುವ ವಿಷಯದಲ್ಲಿ ಭಾರತ ಒಂದು ಸೂತ್ರ ಸೂಚಿಸಿತು. ಈ ಸೂತ್ರವನ್ನು ವಿಶ್ವಸಂಸ್ಥೆಯ ಮಹಾಸಭೆಯಲ್ಲಿಟ್ಟಾಗ ಮಿ. ವಿಷಿನಿಸ್ಕಿ ಅದನ್ನು ತೆಗಳಿದ. ಅವನು ಆಡಂಬರದ ಭಾಷೆಯಲ್ಲಿ ಹೇಳಿದ್ದು ಹೀಗೆ – 'ಅತಿ ಹೆಚ್ಚೆಂದರೆ ಭಾರತೀಯರು ಕನಸುಗಾರರು, ಆದರ್ಶವಾದಿಗಳು; ಅತಿ ಕೀಳೆಂದರೆ ಅವರು ಅಮೆರಿಕಾದ ಭೀಕರ ಧ್ಯೇಯಗಳ ವಾಹಕರು'. ಆದರೆ ಕೆಲವೇ ತಿಂಗಳೊಳಗೆ ಕೊರಿಯಾದಲ್ಲಿನ ಸಮಸ್ಯೆಗೆ ನಾವು ಹೇಳಿದ ಸೂತ್ರವೇ ಬುನಾದಿಯಾಯಿತು. ಅಷ್ಟರಲ್ಲಿ ಸ್ಟ್ಯಾಲಿನ್ ನಿಧನನಾದ. ಹೆಚ್ಚು ವಿವೇಕವಿರುವ ಸರ್ಕಾರ ಬಂತು.

೧೮ ಫೆಬ್ರವರಿ ೧೯೫೨ರಂದು ಅಂದರೆ ಅವನು ನಿಧನವಾಗುವುದಕ್ಕೆ ಹದಿನೈದು ದಿನಗಳ ಹಿಂದೆ ನಾನು ಸ್ಟ್ಯಾಲಿನ್‌ನನ್ನು ಭೇಟಿಯಾಗಿದ್ದೆ. ನಾನು ಆತನನ್ನು ಸಂದರ್ಶಿಸಿ ರಾಯಭಾರ ಕಚೇರಿಗೆ ವಾಪಸ್ಸಾದ ಕೂಡಲೇ ಜಗತ್ತಿನ ಪತ್ರಿಕೆಗಳ ಬಾತ್ಮಿದಾರರು ನನ್ನನ್ನು ಮುತ್ತಿದರು. ಇದಕ್ಕೆ ಕಾರಣ ಸ್ಟ್ಯಾಲಿನ್‌ನನ್ನು ಭೇಟಿಯಾಗುವುದೇ ಒಂದು ಅಸಾಮಾನ್ಯ ವಿಷಯ. 'ಸ್ಟ್ಯಾಲಿನ್ ಹೇಗೆ ಕಂಡ?' ಎಂದು ಅವರ ಪ್ರಶ್ನೆ. 'ಆತ ಸಂಪೂರ್ಣ ಆರೋಗ್ಯದಿಂದ ಇದ್ದ ಹಾಗೆ ಕಂಡರು' ಎಂದೆ. ಇದಾದ ಹತ್ತುದಿನದಲ್ಲಿ ಸ್ಟ್ಯಾಲಿನ್ ಕಾಯಿಲೆಗೆ ತುತ್ತಾದ. ಹದಿನೈದು ದಿನಗಳೊಳಗೆ ಸತ್ತುಹೋದ.

ಇದಾದ ನಂತರ ನಾನು ಹಂಗೇರಿಯ ರಾಯಭಾರಿಯಾದೆ, ಬುಡಾಪೆಸ್ಟ್‌ಗೆ ಹೋಗಿ ಸರ್ಕಾರಕ್ಕೆ ನನ್ನ ಪರಿಚಯ ಪತ್ರವನ್ನು ತಲುಪಿಸಿದೆ. ಆಗ ಹಂಗೇರಿಯ ಪ್ರಧಾನಿ ರಕೋಸಿ. ಅವನೊಬ್ಬ ಜಾಣ ಆದರೆ ಕುಟಿಲ ಯಹೂದಿ. ಹಂಗೇರಿಯಲ್ಲಿ ಕ್ರಾಂತಿಯಾಗುವುದಕ್ಕೆ ಅವನೇ ಮುಖ್ಯಕಾರಣ. ಅವನೊಡನೆ ಸುಮಾರು ಒಂದು ಗಂಟೆಯ ಕಾಲ ಮಾತನಾಡಿದೆ. ಕಡೆಯಲ್ಲಿ ಆತ ಹೇಳಿದ – 'ಶ್ರೀಮಾನ್ ರಾಯಭಾರಿಯವರೇ, ಬಾತ್ಮಿದಾರರಿಗೆ ನೀವು ನಾನು ಹೇಳಿದ್ದೆಲ್ಲವನ್ನೂ ಹೇಳಬಹುದು. ಆದರೆ ನಾನು ಪೂರ್ಣವಾಗಿ ಆರೋಗ್ಯವಾಗಿದ್ದೇನೆ ಎಂದು ಮಾತ್ರ

ಹೇಳಬೇಡಿ.'

'ನಾನು ಸ್ಟ್ಯಾಲಿನ್‌ನನ್ನು ನೋಡುತ್ತೇನೆ, ಆಗ ಪ್ರತ್ಯೇಕವಾಗಿ ಅವರಿಗೆ ಏನನ್ನಾದರೂ ಹೇಳಬೇಕೆ? ದಯಮಾಡಿ ತಿಳಿಸಿ' ಎಂದು ನಮ್ಮ ಪ್ರಧಾನ ಮಂತ್ರಿಯವರಿಗೆ ತಂತಿ ಕಳುಹಿಸಿದೆ. 'ನನ್ನ ಶುಭಾಶಯಗಳನ್ನು ಅವರಿಗೆ ತಿಳಿಸಿ ವಿಶ್ವಸಂಸ್ಥೆಯಲ್ಲಿ ಭಾರತ ಕೊರಿಯಾ ಬಗ್ಗೆ ವ್ಯಕ್ತಪಡಿಸಿದ ಸೂತ್ರವನ್ನೂ ಅದಕ್ಕೆ ಮಿ. ವಿಷಿನಿಸ್ಕಿ ತೋರಿಸಿದ ವಿರೋಧವನ್ನೂ ಹೇಳಿ'. ನಾನು ಹಾಗೆಯೇ ಮಾಡಿದೆ. ಆದರೆ ಸ್ಫಿಂಕ್‌ನಂತೆ ಆತ ಸುಮ್ಮನೆ ಕುಳಿತಿದ್ದ, ಆಗಾಗ 'ಡಾ, ಡಾ' (ಹೌದು, ಹೌದು) ಎನ್ನುತ್ತಿದ್ದ. 'ಹೌದು' ಅನ್ನುವುದನ್ನು 'ಇಲ್ಲ' ಎಂದೂ ತಿಳಿದುಕೊಳ್ಳಬಹುದಾಗಿತ್ತು. ಒಟ್ಟಿನಲ್ಲಿ ನಮ್ಮ ಸಲಹೆ ಆತನಿಗೆ ಒಪ್ಪಿಗೆಯಾಯಿತೋ, ಇಲ್ಲವೋ ಗೊತ್ತಾಗಲಿಲ್ಲ.

ಕೊರಿಯಾದಲ್ಲಿ ಉದ್ಭವವಾದ ಸನ್ನಿವೇಶ ಸ್ಟ್ಯಾಲಿನ್‌ಗೆ ಸಂತಸ ತಂದಿತ್ತು. ಅವನು ಸಂತೋಷದಿಂದ ಕುಣಿದಾಡಿದ. ಸಾವಿರಾರು ಅಮೇರಿಕನ್ನರು, ಚೀನಿಯರು ಮತ್ತು ಕೊರಿಯನ್ನರು ಅಲ್ಲಿ ನಡೆದ ಕದನದಲ್ಲಿ ಮಡಿದರು, ಆದರೆ ಒಬ್ಬ ರಷ್ಯನ್‌ಗೂ ಹಾನಿಯಾಗಲಿಲ್ಲ.

ಸ್ಟ್ಯಾಲಿನ್‌ನ ತರುವಾಯ ಬಂದವರು ಸ್ವಲ್ಪ ಉದಾರ ಭಾವನೆಯುಳ್ಳ ಮನಸ್ಸಿನವರು. ಸ್ಟ್ಯಾಲಿನ್ ಕಾಲದಲ್ಲಿ ತಿರಸ್ಕರಿಸಲ್ಪಟ್ಟ ನಮ್ಮ ಸೂತ್ರವನ್ನು ಅವರು ಒಪ್ಪಿದರು. ಅದನ್ನು ಶ್ಲಾಘಿಸಿ ಚೀನಾ ಸರ್ಕಾರಕ್ಕೆ ಬರೆದರು. ಮೂರು ವರ್ಷಗಳಿಂದ ನಡೆಯುತ್ತಾ ಬಂದಿದ್ದ ಕೊರಿಯಾ ಯುದ್ಧ ಕಡೆಗೂ ೧೯೫೩ರಲ್ಲಿ ನಿಂತಿತು. ಇದಕ್ಕೆ ಭಾರತದ ಪ್ರೇರಣೆಯೂ ಕಾರಣ. ಸೋವಿಯತ್ ಸರ್ಕಾರ ಮುಂದೆ ಅಂತರರಾಷ್ಟ್ರೀಯ ವಿಷಯಗಳಲ್ಲಿ ಯುಕ್ತಾಯುಕ್ತ ಪರಿಜ್ಞಾನವುಳ್ಳ ನಿಲವು ತೆಗೆದುಕೊಳ್ಳುತ್ತದೆ ಎನ್ನುವ ಸೂಚನೆ ಬಂದಂತಾಯಿತು.

ಕೊರಿಯಾ ವಿಷಯದಲ್ಲಿ ತಾನು ವಹಿಸಿದ ಪಾತ್ರಕ್ಕೆ ಭಾರತ ಹೆಮ್ಮೆಪಟ್ಟುಕೊಳ್ಳಬಹುದು ನಿಜ. ಕೊರಿಯಾ ಒಂದಾಗಿ ಉಳಿಯಲು ಅಥವಾ ಯುದ್ಧ ತಪ್ಪಿಸಲು ಅದಕ್ಕೆ ಸಾಧ್ಯವಾಗಲಿಲ್ಲ. ಆದರೆ ಯುದ್ಧ ಅನಗತ್ಯವಾಗಿ ಮುಂದುವರಿಯುವುದನ್ನು ಮತ್ತು ಜಾಗತಿಕ ಯುದ್ಧವಾಗಿ ಅದು ಮಾರ್ಪಾಡಾಗುವುದನ್ನು ಅದು ತಪ್ಪಿಸಿತು. ಭಾರತ ತಟಸ್ಥ ನೀತಿ ಪರೀಕ್ಷೆಗೊಳಗಾಗಿ ಅದು ಗೆದ್ದಿತು. ಕೆಲವು ಬಲಿಷ್ಠ ದೇಶಗಳು ಅದರ ನೀತಿಯನ್ನು ಖಂಡಿಸಿದರೂ ಪಾಶ್ಚಾತ್ಯ ದೇಶದ ಹಲವಾರು ಚಿಂತಕರು ಜಾಗತಿಕ ಶಾಂತಿಗೋಸ್ಕರ ಯಾವ ಸ್ವ–ಹಿತವನ್ನೂ ಇಟ್ಟುಕೊಳ್ಳದೆ ಭಾರತ ಮಾಡಿದ ಕೆಲಸವನ್ನು ಶ್ಲಾಘಿಸಿದರು. ತಾನು ಭಾವಿಸಿದಂತೆ ಭಾರತ, ಪಾಶ್ಚಾತ್ಯ ದೇಶಗಳ ಉಪಗ್ರಹವಲ್ಲ ಎನ್ನುವ ಸತ್ಯ ರಷ್ಯಾದ ಅರಿವಿಗೆ ಬಂತು.



ಜಗತ್ತಿನ ಇನ್ನೊಂದು ಭಾಗದಲ್ಲಿ ನಡೆಯುತ್ತಿದ್ದ ಯುದ್ಧವನ್ನು ಕೊನೆಗಾಣಿಸುವುದರಲ್ಲಿ ಭಾರತ ಒಂದು ಉಪಯುಕ್ತ ಪಾತ್ರವಹಿಸಿತು. ಇಂಡೋ–ಚೀನಾದಲ್ಲಿ ರಾಷ್ಟ್ರೀಯ ಕದನವೆಂದು ಆರಂಭವಾದ ಯುದ್ಧ ಕಮ್ಯುನಿಸಂ ಪರ ಯುದ್ಧವಾಗಿ ಮಾರ್ಪಟ್ಟಿತು. ಮೊದಲ ಹಂತದಲ್ಲಿ ಆ ಹೋರಾಟಕ್ಕೆ ಅಮೇರಿಕಾದ ಸಹಾನುಭೂತಿ ಮತ್ತು ಬೆಂಬಲವಿತ್ತು. ಓ.ಎಸ್.ಎಸ್. ಫ್ರೆಂಚ್ ವಿರುದ್ಧ ಹೋರಾಟ ನಡೆಸುತ್ತಿದ್ದ ವಿಯಟ್ ಮಿನ್ಹ್‌ಗೆ ಸಹಾಯಮಾಡಿತು. ವಸಾಹತು ವಿರೋಧದಿಂದ ಹುಟ್ಟಿದ ಅಮೇರಿಕಾ ಎಂದಿದ್ದರೂ ವಸಾಹತುಶಾಲಿ ವಿರೋಧಿ. ಸೂಯೆಜ್ ಮೇಲೆ ಆ್ಯಂಗ್ಲೋ–ಫ್ರೆಂಚ್ ಆಕ್ರಮಣ ನಡೆದಾಗಲೂ ಅಮೇರಿಕಾ ಅದನ್ನು ವಿರೋಧಿಸಿತ್ತು. ಎರಡನೆಯ ಜಾಗತಿಕ ಯುದ್ಧದ ನಂತರ ಏಷ್ಯಾದ ದೇಶಗಳೆಲ್ಲಾ ಸ್ವತಂತ್ರವಾಗುತ್ತವೆ, ಹೊಸ ಜಗತ್ತೊಂದು ಹುಟ್ಟುತ್ತದೆ ಎಂದು ಅಧ್ಯಕ್ಷ್ಯ ರೂಸ್‌ವೆಲ್ಟ್ ಯೋಚಿಸಿದ್ದ. ಅಟ್ಲಾಂಟಿಕ್ ಪ್ರಣಾಳಿಕೆ (ಅಟ್ಲಾಂಟಿಕ್ ಚಾರ್ಟರ್) ಯೂರೋಪಿನ ದೇಶಗಳಿಗೆ ಮಾತ್ರವಲ್ಲ, ಏಷ್ಯಾ ದೇಶಗಳಿಗೂ ಅನ್ವಯಿಸುತ್ತದೆ ಎನ್ನುವ ಅಭಿಪ್ರಾಯ ಅವನದಾಗಿತ್ತು. ಆದರೆ ಆ ಪ್ರಣಾಳಿಕೆಯ ವ್ಯಾಪ್ತಿಯನ್ನು ಮಿತಿಗೊಳಿಸಿ ಅದು ಏಷ್ಯಾ ದೇಶಗಳಿಗೆ ಅನ್ವಯವಾಗದಂತೆ ಚರ್ಚಿಲ್ ಮಾಡಿದ. ಇಂಡಿಯಾದ ಸ್ವಾತಂತ್ರ್ಯಕ್ಕೆ ರೂಸ್‌ವೆಸ್ಟ್ ಚರ್ಚಿಲ್‌ನನ್ನು ಆಗಾಗ ತಿವಿಯುತ್ತಿದ್ದ ಎನ್ನುವುದನ್ನು ನಾವು ಕೃತಜ್ಞತೆಯಿಂದ ಜ್ಞಾಪಿಸಿಕೊಳ್ಳಬೇಕು. ಒಂದು ಬಾರಿ ಚರ್ಚಿಲ್‌ಗೆ ಎಷ್ಟು ಕೋಪ ಬಂದಿತೆಂದರೆ ಅವನು ಅರಚಿದ – 'ನಿನಗೆ ಬೇಕಾಗಿದ್ದರೆ ಇಂಡಿಯಾವನ್ನು ತೆಗೆದುಕೋ. ಆದರೆ ಎಚ್ಚರ, ನೀನು ರಕ್ತದ ಮಡುವಿನಲ್ಲಿ ಸ್ನಾನ ಮಾಡಬೇಕಾಗುತ್ತದೆ.'

ವಸಾಹತುಶಾಹಿ ವಿರುದ್ಧವಿದ್ದ ಅಮೇರಿಕಾ ವಿಯಟ್‌ಮಿನ್ಹ್‌ನ ಸಹಾಯಕ್ಕೆ ಬಂದದ್ದು ಆಶ್ಚರ್ಯದ ವಿಷಯವಲ್ಲ. ಆದರೆ ಅದಕ್ಕೆ ಯಾವಾಗ ಕಮ್ಯುನಿಸಂ–ವಿರೋಧಿ 'ಹುಳು' ಕಚ್ಚಿತ್ತೋ ಮತ್ತು ಯಾವಾಗ ಚೀನಾ ಕಮ್ಯುನಿಸ್ಟ್ ರಾಷ್ಟ್ರವಾಯಿತೋ ಅದರ ನಿಲುವು ಪೂರ್ತಿ ಬದಲಾವಣೆಗೊಂಡಿತು. ಅದು ನೈಜ ರಾಷ್ಟ್ರೀಯತೆ (Genuine Nationalism) ಅಂದರೆ ಹೋ ಚಿ ಮಿನ್ಹ್ – ರಾಷ್ಟ್ರೀಯತೆಯ ವಿರುದ್ಧ ತನ್ನ ಬೆಂಬಲ ಎಂದಿತು. ೧೯೫೦ರಲ್ಲಿ ಅಮೇರಿಕಾದ ಯುದ್ಧದ ಹಡಗುಗಳು ಚಕ್ರವರ್ತಿ ಬಾವೋ–ಬಾಯ್ (Bao-Bai) ಅನ್ನು ಬೆಂಬಲಿಸುವುದಕ್ಕೆ ಸೈಗಾನ್‌ಗೆ ಹೋದವು. ಅಮೇರಿಕಾದ ನಿಲುವಿಗೆ ಮಾರ್ಗದರ್ಶನ ಮಾಡುತ್ತಾ ಅದನ್ನು ತನ್ನ ಹತೋಟಿಯಲ್ಲಿಟ್ಟುಕೊಂಡವನು ಜಾನ್‌ಫಾಸ್ಟರ್ ಡಲ್ಲೆಸ್. ಅವನಿಗೆ ಕಮ್ಯುನಿಸಂ ವಿರುದ್ಧ ಹೋರಾಡುವುದು ಎಂದರೆ ಅದೊಂದು ಧರ್ಮಯುದ್ಧ. ಅವನ ಪಾಲಿಗೆ ಕಮ್ಯುನಿಸಂ ಮತ್ತು ರಾಷ್ಟ್ರೀಯತೆ ಒಡಂಬಡದ ವಿಷಯ, ಒಂದಕ್ಕೊಂದು ಅಸಮಂಜಸ, ರಾಷ್ಟ್ರೀಯ ಕಮ್ಯುನಿಸ್ಟ್ ಅನ್ನುವುದು ವಿರೋದಾಭಾಸ. ಹೀಗೆ ಅವನು ಅರ್ಥೈಸುವುದಕ್ಕೆ ಕಮ್ಯುನಿಸ್ಟರೇ ಕಾರಣ. ಅವರ ಪ್ರಕಾರ ಕಮ್ಯುನಿಸಂ ಒಂದು ವಿಶ್ವಧರ್ಮ, ಬೇರೆ

ಧರ್ಮಗಳಂತೆ ಇದಲ್ಲ. ಇದು ಯುದ್ಧ ಮತ್ತು ಹಿಂಸೆಯಿಂದ ಮಾತ್ರ ಬರತಕ್ಕದ್ದು. "ಡಲ್ಲೆಸ್ ಕಮ್ಯುನಿಸಂ ಅನ್ನು ಅದರ ಮುಖಬೆಲೆಯಿಂದ ಅರ್ಥಮಾಡಿಕೊಂಡಿದ್ದ. ಅವನು ರಾಷ್ಟ್ರೀಯತೆಯ ಬಲದ ಮೌಲ್ಯವನ್ನು ಕುಗ್ಗಿಸಿದ್ದ, ಕಮ್ಯುನಿಸ್ಟರೆಲ್ಲರಿಗೂ ಒಂದೇ ಬ್ರಷ್‌ನಿಂದ 'ಟಾರ್' ಬಳಿದಿದೆ ಎಂದುಕೊಂಡಿದ್ದ.

ಹಾಗಾಗಿ ಅವನು ಹೋ ಚಿ ಮಿನ್ಹ್ ವಿರುದ್ಧ ಫ್ರೆಂಚರು ಮಾಡುತ್ತಿದ್ದ ಯುದ್ಧದಲ್ಲಿ ಫ್ರೆಂಚರಿಗೆ ಬೆಂಬಲ ನೀಡಿದ್ದಲ್ಲದೆ, ಅವರಿಗೆ ಇಷ್ಟವಿಲ್ಲದಿದ್ದರೂ ಯುದ್ಧವನ್ನು ಮುಂದುವರಿಸಿದ. ಡಿಯೆನ್ ಬಿಯೆನ್ ಫು ರಣರಂಗದಲ್ಲಿ ಫ್ರೆಂಚರು ಹೀನಾಯ ಸೋಲು ಅನುಭವಿಸಿದರು. ಡಲ್ಲೆಸ್ ಕೂಡ ಸೋಲನ್ನು ತಪ್ಪಿಸಲಾಗಲಿಲ್ಲ, ಆದರೂ ಹೋರಾಟ ನಿಲ್ಲಲಿಲ್ಲ. ಅವನಿಗೆ 'ಇಂಡೋ–ಚೀನಾ, ಬಾಟಲ್‌ಗೆ ಇರುವ ಮುಚ್ಚಳ.' ಅದನ್ನು ತೆಗೆದರೆ ಕಮ್ಯುನಿಸಂ ಆಗ್ನೇಯ ಏಷ್ಯಾದಲ್ಲೆಲ್ಲಾ ಉಕ್ಕಿ ಹರಿಯುತ್ತದೆ. ಡಲೆಸ್ ತನ್ನ ಮಿತ್ರ ರಾಷ್ಟ್ರಗಳನ್ನು ಯುದ್ಧಕ್ಕೆ ಎಳೆಯಲು ಪ್ರಯತ್ನಿಸಿದ. ಸದ್ಯ, ಮಿತ್ರ ರಾಷ್ಟ್ರಗಳು ಅವನ ಕರೆಗೆ ಓಗೊಡಲಿಲ್ಲ. ರಷ್ಯಾ ಮತ್ತು ಚೀನಾ ಯುದ್ಧಕ್ಕೆ ಇಳಿದಿದ್ದರೆ ಅದು ಜಾಗತಿಕ ಯುದ್ಧಕ್ಕೆ ದಾರಿ ಮಾಡಿ ಕೊಟ್ಟಂತಾಗುತ್ತಿತ್ತು.

ಈ ಸಂದಿಗ್ಧ ಸಮಯದಲ್ಲಿ ಭಾರತ ಹಾಗೂ ಇನ್ನು ಕೆಲವು ಏಷ್ಯಾದ ದೇಶಗಳು ಇಂಡೋ–ಚೀನಾದಲ್ಲಿ ಶಾಂತಿ ಮೂಡಲು ವಿಶ್ವ ಪ್ರಯತ್ನ ಮಾಡಿದವು. ಜಿನಿವಾ ಸಮ್ಮೇಳನದಲ್ಲಿ ಅವರಿಗೆ ಜಯ ದೊರೆಯಿತು. ಡಲ್ಲೆಸ್ ಅಲ್ಲಿದ್ದರೂ ಅವನು ಇಂಡೋ–ಚೀನಾದ ವಿಭಜನೆಯನ್ನು ವಿರೋಧಿಸಿದ. "ಕಮ್ಯುನಿಷ್ಟರೆಲ್ಲರನ್ನು 'ಈ ಕೊಠಡಿಯಷ್ಟು ಜಾಗದಲ್ಲಿ' ಒಂದು ಕಡೆ ಕೂಡಿ ಹಾಕುವುದಕ್ಕೆ ನನ್ನ ಒಪ್ಪಿಗೆ ಇದೆ" ಎಂದ. ಚೌ–ಎನ್–ಲೈನೊಡನೆ ಹಸ್ತಲಾಘವವನ್ನೂ ಮಾಡದೆ ಸಮ್ಮೇಳನ ಬಿಟ್ಟು ಆಚೆ ನಡೆದ. ಸಮ್ಮೇಳನದಲ್ಲಿ 'ಇಂಡೋ–ಚೀನಾವನ್ನು ತಾತ್ಕಾಲಿಕವಾಗಿ ವಿಭಜಿಸಿ, ನಂತರ ಭಾರತದ ಅಧ್ಯಕ್ಷತೆಯಲ್ಲಿ ಅಂತರರಾಷ್ಟ್ರೀಯ ಆಯೋಗವನ್ನು ರಚಿಸಿ, ಅದರ ಮೂಲಕ ಇಂಡೋ–ಚೀನಾದ ಏಕತೆ,' ಎನ್ನುವ ತೀರ್ಮಾನವಾಯಿತು. ದಕ್ಷಿಣ ವಿಯೆಟ್ನಾಂನ ಪ್ರಧಾನಿ ಏನ್‌ಗೊಡಿನ್ಹ್ – ಡಿಯೆಮ್ (Ngo Dinh - Diem) ನನ್ನು ಸಮ್ಮೇಳನದಲ್ಲಾದ ಒಪ್ಪಂದಕ್ಕೆ ರುಜು ಹಾಕಬಾರದೆಂದು ಡಲ್ಲೆಸ್ ಒತ್ತಾಯಿಸಿದ. ಫಲವಾಗಿ ಇಂಡೋ–ಚೀನಾ ಇನ್ನು ಹೊತ್ತಿ ಉರಿಯುತ್ತಿದೆ.

ಇದಾದ ನಂತರ ನಡೆದ ಕೆಲವು ಘಟನೆಗಳಿಂದ ಕೆಲವರು ಡಲ್ಲೆಸ್‌ನ ನಿಲುವು ಸರಿಯಾಗಿತ್ತು ಎನ್ನುತ್ತಾರೆ. ಯುದ್ಧವನ್ನು ಚೀನಾದೊಳಗೂ ಪ್ರಸರಿಸುವಂತೆ ಮಾಡಿ, ಅನಂತರ ಅದರ ತಲೆಯ ಮೇಲೆ ಭಾರಿ ಪೆಟ್ಟೊಂದನ್ನು ಕೊಟ್ಟಿದ್ದರೆ ತುಂಬ ಅನುಕೂಲವಾಗುತ್ತಿತ್ತು, ಆಗ ಚೀನಾ ಬಲಹೀನವಾಗಿತ್ತು ಎನ್ನುವುದು ಕೆಲವರ ಅಭಿಪ್ರಾಯ. ಭಾರತದಲ್ಲೂ ಕೆಲವರು ಈ ನಿಲುವನ್ನು ಬೆಂಬಲಿಸುವವರು ಈಗಲೂ ಇದ್ದಾರೆ. ಕಾರಣ ಚೀನಾ ಭಾರತದ ಮೇಲೆ ಆಕ್ರಮಣ ನಡೆಸಿತು.



ಚೀನಾ ಅಮೆರಿಕಾ ಮಧ್ಯೆ ಯುದ್ಧ ಶುರುವಾಗಿದ್ದರೆ ರಷ್ಯಾ ಸುಮ್ಮನೆ ಕೂತಿರುತ್ತಿರಲಿಲ್ಲ. ರಷ್ಯಾ ಇನ್ನೂ (೧೯೫೪) ಚೀನಾದ ಮಿತ್ರ ರಾಷ್ಟ್ರವಾಗಿತ್ತು. ಅದು ಚೀನಾದ ಸಹಾಯಕ್ಕೆ ಬರುತ್ತಿತ್ತು. ನಂತರ ಇನ್ನೊಂದು ಜಾಗತಿಕ ಯುದ್ಧ. ಯುದ್ಧವಾದರೆ ಹೆಚ್ಚು ನಷ್ಟ ಆಗುತ್ತಿದ್ದುದು ಹೊಸದಾಗಿ ಸ್ವತಂತ್ರಗೊಂಡ ದೇಶಗಳಿಗೆ. ಆ ದೇಶಗಳ ಸರ್ಕಾರಗಳು ಜನರು ಜೀವನ ಮಟ್ಟವನ್ನು ಏರಿಸಲು ಹಾಕಿಕೊಂಡ ಯೋಜನೆಗಳೆಲ್ಲಾ ತಲೆ ಕೆಳಗಾಗಿ ಜನ ತೊಂದರೆಗೆ ಸಿಲುಕುತ್ತಿದ್ದರು. ಇಂಡೋ–ಚೀನಾದ ಬಗ್ಗೆ ಜಿನೀವಾ ಸಮ್ಮೇಳನದಲ್ಲಾದ ತೀರ್ಮಾನಗಳನ್ನು ಅಕ್ಷರಶಃ ಪಾಲಿಸಿದರೆ, ಬಲಿಷ್ಠ ರಾಷ್ಟ್ರಗಳು ಇಂಡೋ–ಚೀನಾದ ಆಂತರಿಕ ವಿಷಯದಲ್ಲಿ ತಲೆಹಾಕಿಲ್ಲದಿದ್ದರೆ, ವಿಯಟ್ನಾಂ ಏಕ ರಾಷ್ಟ್ರವಾಗಿ ನಿಲ್ಲುತ್ತಿತ್ತು. ನಿಜ, ಅದು ಪೂರ್ಣ ಕಮ್ಯುನಿಸ್ಟ್ ದೇಶವಾಗುತ್ತಿತ್ತು, ಅದು ಏಷ್ಯಾದ ಯುಗೋಸ್ಲಾವಿಯಾ ಆಗಿ ಮಾರ್ಪಾಡಾಗುತ್ತಿತ್ತು. ಚೀನಿಯರಿಗೂ ವಿಯಟ್ನಾಂ ಜನರಿಗೂ ಮಧ್ಯೆ ಅಷ್ಟೇನೂ ಪ್ರೀತಿ, ಸೌಹಾರ್ದವಿರಲಿಲ್ಲ. ಒಂದು ಬಾರಿ ಉತ್ತರ ವಿಯೆಟ್ನಾಂನ ವಿದೇಶಾಂಗ ಮಂತ್ರಿ ಫ್ಯಾನ್ ವ್ಯಾನ್ ಡಾಂಗ್ (Phan Van Dong) ಮತ್ತು ಭಾರತದ ಪ್ರಧಾನ ಮಂತ್ರಿ ನೆಹರೂ ಆಸಕ್ತಿ ಹುಟ್ಟಿಸುವ ಸಂಭಾಷಣೆಯಲ್ಲಿ ನಿರತರಾಗಿದ್ದರು. ಫ್ಯಾನ್ ವ್ಯಾನ್ ಡಾಂಗ್ ನೆಹರೂರವರನ್ನು ಭಾರತದಲ್ಲಿ ಎಷ್ಟು ಜನ ಚೀನಿಯರು ಇದ್ದಾರೆ ಎಂದು ಕೇಳಿದರು. ಅದಕ್ಕೆ ನೆಹರೂ 'ಸುಮಾರು ಹದಿನೈದು ಸಾವಿರ, ಬಹುಪಾಲು ಜನ ಕಲ್ಕತ್ತಾ ಮತ್ತು ಅದರ ಸುತ್ತ ಮುತ್ತ ನೆಲೆಸಿದ್ದಾರೆ' ಎಂದರು.

ಫ್ಯಾನ್ ವ್ಯಾನ್‌ನ ಬಾಯಿಯಿಂದ ಅನೈಚ್ಛಿಕವಾಗಿ 'ಎಂತಹ ಅದೃಷ್ಟ!' ಎನ್ನುವ ಮಾತು ಹೊರಬಂತು.

ವಿಯಟ್ನಾಂ, ಚೀನಾದ ಉಪಗ್ರಹವಾಗಿದ್ದಿದ್ದರೆ ಅದು ತನಗೆ ಒದಗಿದ ಅದೃಷ್ಟ, ಗೌರವ ಎಂದುಕೊಳ್ಳುತ್ತಿತ್ತು. ಚೀನಾ ಈಗಿರುವ ಹಾಗೆ ದುಂಡಾವರ್ತಿ ಅಥವಾ ಜಗಳಗಂಟಿ ದೇಶವಾಗುತ್ತಿರಲಿಲ್ಲ ಅನಿಸುತ್ತಿತ್ತು. ಜಿನೀವಾ ಸಮ್ಮೇಳನದಲ್ಲಿ ಮತ್ತು ಇತರ ಸ್ಥಳಗಳಲ್ಲಿ ಚೌ ಎನ್ ಲೈ ೧೯೫೪ರಲ್ಲಿ ತೋರಿಸಿದ ವಿವೇಕ, ಸಂಯಮ ಅವನಿಂದ ಮಾಯವಾಗುತ್ತಿರಲಿಲ್ಲ. ಅಂತರ ರಾಷ್ಟ್ರೀಯ ಬಿಕ್ಕಟ್ಟು ಕಡಿಮೆಯಾಗುತ್ತಿತ್ತು. ಹಾಗಾಗುವುದನ್ನು ಕ್ರುಶ್ಚೇವ್ ಕೂಡ ಬಯಸಿದ್ದ. ಇವೆಲ್ಲಾ ಊಹಾಪೋಹದ ವಿಷಯ. ಬಹುಶಃ ಅಪೇಕ್ಷಿಯ – ಆಲೋಚನೆ. ೧೯೫೪ರಲ್ಲಿ ಜಗತ್ತಿನಲ್ಲಿ ಶಾಂತಿ ಮತ್ತು ಸೌಹಾರ್ದ ಬಯಸಿದ್ದವರೆಲ್ಲಾ ಸಮ್ಮೇಳನದಲ್ಲಾದ ನಡವಳಿಕೆಯನ್ನು ಸ್ವಾಗತಿಸಿದ್ದರು. ೨೧ ಜುಲೈ ೧೯೫೪ರಲ್ಲಿ ನೆಹರೂ ಹೇಳಿದರು – 'ಹಲವಾರು ವರ್ಷಗಳಲ್ಲಿ ಈಗ ಮೊದಲನೆ ಬಾರಿ ಪ್ರಪಂಚದ ಯಾವ ಕಡೆಯೂ ಯುದ್ಧವಾಗುತ್ತಿಲ್ಲ.'

ಕಳೆದ ದಶಕದ ಮಧ್ಯಭಾಗದಲ್ಲಿ ಶಾಂತಿಯ ಶುಭ ಶಕುನಗಳು ಕಂಡವು.

೧೯೫೩ರಲ್ಲಿ ಕೊರಿಯಾ ಯುದ್ಧ, ೧೯೫೪ರಲ್ಲಿ ಇಂಡೋ–ಚೀನಾ ಯುದ್ಧ ಅಂತ್ಯಗೊಂಡಿತು. ೧೯೫೫ರಲ್ಲಿ ಪಶ್ಚಿಮ ಜರ್ಮನಿಯ ಸರ್ಕಾರವನ್ನು ಸೋವಿಯಟ್ ಸರ್ಕಾರ ಮಾನ್ಯಮಾಡಿತು. ಜರ್ಮನಿಯಲ್ಲಿದ್ದ ವಿಷಮ ಪರಿಸ್ಥಿತಿ ಮಾಯವಾಯಿತು. ಶೀತಲ ಸಮರ ಮುಗಿಯಿತು ಎನ್ನುವ ಆಶಾಭಾವನೆ ಹುಟ್ಟಿತು. ಇತಿಹಾಸದಲ್ಲಿ ಮಾನವಕುಲ ಬೇರೊಂದು ಅಧ್ಯಾಯಕ್ಕೆ ಕಾಲಿಡುವ ಹಂತ ಬಂತು. ಮುಂದಿನ ಹತ್ತು ವರ್ಷಗಳಲ್ಲಿ ನಮ್ಮ ಭರವಸೆಗಳು, ಅಭಿಲಾಷೆಗಳು ಸಫಲಗೊಂಡವೇ ಅಥವಾ ವಿಫಲಗೊಂಡವೇ ಎಂಬುದ್ನು ನಾನು ನನ್ನ ಮುಂದಿನ ಮತ್ತು ಕಡೆಯ ಭಾಗದಲ್ಲಿ ಹೇಳುತ್ತೇನೆ.

* * * *



## ೩. ಅವನತಿ ಮತ್ತು ಮಾರ್ಪಾಡು

ಭಾರತೀಯ ವಿದ್ಯಾ ಭವನದಲ್ಲಿ ಭಾಷಣ ಮಾಡಲು ನನ್ನನ್ನು ಆಹ್ವಾನಿಸಿದ್ದಕ್ಕೆ ನಾನು ಆಭಾರಿಯಾಗಿದ್ದೇನೆ ಎಂದು ಇನ್ನೊಂದು ಬಾರಿ ತಿಳಿಸಲು ಇಷ್ಟಪಡುತ್ತೇನೆ.

ಸಂಸ್ಕೃತಿ–ಜಗತ್ತಿನಲ್ಲಿ, 'ಭವನ'ಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಭಾರತೀಯ ಸಂಸ್ಕತಿ ಪುನರುಜ್ಜೀವನಕ್ಕೆ ಡಾ. ಮುನ್ಷಿ ಮತ್ತು ಶ್ರೀಮತಿ ಮುನ್ಷಿಯವರ ಕೊಡುಗೆ ಅಪಾರ, ಅವರಷ್ಟು ಕೆಲಸವನ್ನು ಇನ್ನು ಯಾರೂ ಮಾಡಿಲ್ಲ.

ಭವಿಷ್ಯತ್ ಇತಿಹಾಸಕಾರರು ಹತ್ತೊಂಬತ್ತನೆಯ ಶತಮಾನದಲ್ಲಿ ರಾಜಾರಾಮ್ ಮೋಹನ್‌ರಾಯ್ ಪುನರುಜ್ಜೀವನ ಕೆಲಸ ಮಾಡಿದ ಹಾಗೆ ಇಪ್ಪತ್ತನೆಯ ಶತಮಾನದಲ್ಲಿ ಮುನ್ಷಿ ದಂಪತಿಗಳು ಮಾಡಿದ್ದಾರೆ ಎಂದು ಬರೆಯುತ್ತಾರೆ. ಪುನರುಜ್ಜೀವನವೆಂದರೆ ಹಿಂದೂ ಸಂಸ್ಕೃತಿಯ ಮರುಹುಟ್ಟು ಮಾತ್ರವಲ್ಲ, ಅದು ಇತರ ಸಂಸ್ಕೃತಿಗಳ ಸಂಯೋಗ ಕೂಡ. ಶೀತಲ ಸಮರ ಎನ್ನುವುದು ಡಾ. ಮುನ್ಷಿಯವರ ಸಾಂಸ್ಕೃತಿಕ ಶಬ್ದಕೋಶದಲ್ಲಿರಲಿಲ್ಲ. ಭಾರತ ಶೀತಲ ಸಮರದಿಂದ ದೂರವಿರಲು ಯತ್ನಿಸುತ್ತಿತ್ತು ಎನ್ನುವುದನ್ನು ಹಿಂದೆ ನನ್ನ ಉಪನ್ಯಾಸಗಳಲ್ಲಿ ತಿಳಿಸಿದ್ದೇನೆ.

ನನ್ನ ಹಿಂದಿನ ಉಪನ್ಯಾಸದಲ್ಲಿ ಏಷ್ಯಾ ಮತ್ತು ಯೂರೋಪಿನಲ್ಲಿ ೧೯೪೫ ಮತ್ತು ೧೯೫೫ರ ನಡುವೆ ಶೀತಲ ಸಮರ ಕಾಣಿಸಿಕೊಂಡದ್ದನ್ನು ತಿಳಿಸಿದ್ದೆ. ಪೋಲೆಂಡ್, ಜರ್ಮನಿ, ಕೊರಿಯಾ ಮತ್ತು ಇಂಡೋ–ಚೀನಾ ಈ ಪ್ರದೇಶಗಳನ್ನು ಆಯ್ಕೆ ಮಾಡಿಕೊಂಡು ಮಾತಾಡಿದ್ದೆ. ಪೋಲೆಂಡನ್ನು ನಾನು ಆರಿಸಿಕೊಂಡಿದ್ದಕ್ಕೆ ಕಾರಣ ಸೋವಿಯಟ್ ರಷ್ಯಾ ಅದನ್ನು ತನ್ನ ಪ್ರಭಾವಕ್ಕೆ ಬೀಳಿಸಿಕೊಂಡಿತ್ತು. ಅದರ ಫಲವಾಗಿ ಬಲಾಢ್ಯ ರಾಷ್ಟ್ರಗಳ ಮಧ್ಯೆ ಒಡಕುಂಟಾಯಿತು. ನಿಜ, ಎರಡನೆಯ ಜಾಗತಿಕ ಯುದ್ಧದ ಸಮಯದಲ್ಲಿ ಅವು ಒಟ್ಟುಗೂಡಿ ಮೈತ್ರಿ ರಾಷ್ಟ್ರಗಳಾಗಿದ್ದವು. ಜರ್ಮನಿಯಲ್ಲಿ ಉದ್ಭವಿಸಿದ ಶೀತಲ ಸಮರ ತೀಕ್ಷ್ಣವಾಗಿ ಅದರಲ್ಲಿ ಸಿಡಿಯುವ ಬಲಾಢ್ಯತೆ ಇದ್ದುದರಿಂದ ಸಂಬಂಧಪಟ್ಟವರೆಲ್ಲಾ ಬಹು ಜಾಗರೂಕತೆಯಿಂದ ಕಾರ್ಯ ನಿರ್ವಹಿಸಬೇಕಾಯಿತು. ಕೊರಿಯಾದಲ್ಲಿ ಶೀತಲ ಸಮರ ಶುರುವಾಗಿ ನಂತರ ಸುಡು ಸಮರ (Hot war) ವಾಗಿ ಮಾರ್ಪಟ್ಟು ಮೂರು ವರ್ಷಗಳ ಕಾಲ ಎಳೆದಾಡಿತು. ಅಂತರರಾಷ್ಟ್ರೀಯ ವಾತಾವರಣವನ್ನು ಅದು ವಿಷಮಗೊಳಿಸಿತು. ಇಂಡೋ–ಚೀನಾದಲ್ಲಿ ನಡೆದ ವಸಾಹತು ವಿರೋಧಿ ಕದನ ೧೯೫೪ರಲ್ಲಿ ಜಿನೀವಾ

ಸಮ್ಮೇಳನದಲ್ಲಿ ತೆಗೆದುಕೊಂಡ ತೀರ್ಮಾನದಿಂದ ಮುಕ್ತಾಯಕ್ಕೆ ಬಂತು. ಇದನ್ನು ಜೆ. ಎಫ್. ಡಲ್ಲೆಸ್ 'ಕಮ್ಯುನಿಸ್ಟ್–ಪರ' ಯುದ್ಧ ಎಂದು ಕರೆದಿದ್ದ.

೧೯೫೫ ರ ವೇಳೆಗೆ ಶೀತಲ ಸಮರ ಕಳೆಯಿತು ಎನ್ನುವ ಸ್ಥಿತಿಗೆ ಬಂದೆವು. ೧೯೫೩ರಲ್ಲಿ ಕೊರಿಯಾ ಕದನ, ೧೯೫೪ರಲ್ಲಿ ಇಂಡೋ–ಚೀನಾ ಸಮರ ಕೊನೆಗೊಂಡಿತು. ೧೯೫೫ರಲ್ಲಿ ಪಶ್ಚಿಮ ಜರ್ಮನಿಯನ್ನು ರಷ್ಯಾ ಮಾನ್ಯತೆ ಮಾಡಿದ್ದು ಜರ್ಮನಿಯಲ್ಲಿದ್ದ ಶೀತಲಸಮರದ ತೀಕ್ಷ್ಣತೆ ಕಡಿಮೆಯಾಯಿತು. ಹೀಗಾಗಿ ಕಳೆದ ದಶಕದ ಮಧ್ಯಭಾಗದಲ್ಲಿದ್ದ ಅಂತರರಾಷ್ಟ್ರೀಯ ಬಿಕ್ಕಟ್ಟುಗಳು ಬಹುಮಟ್ಟಿಗೆ ಕಡಿಮೆಯಾಗಿ, ಬಿಗಿಗೊಂಡಿದ್ದ ವಾತಾವರಣ ತಿಳಿಯಾಯಿತು. ಇದರಲ್ಲಿ ಹೆಮ್ಮೆ ಪಡಬಹುದಾದ ಭಾರತದ ಪಾತ್ರವೂ ಇತ್ತು. ಬಲಿಷ್ಠ ರಾಷ್ಟ್ರ, ಅದು ಯಾವುದೇ ಇರಲಿ ಅದರಲ್ಲಿರುವ ಶ್ಲಾಘ್ಯ ಗುಣಗಳನ್ನು ಗುರುತಿಸುವುದು ಭಾರತದ ನಿಲುವಾಗಿತ್ತು ಮತ್ತು ಬಲಿಷ್ಠ ರಾಷ್ಟ್ರಗಳ ಮಧ್ಯೆ ಸ್ನೇಹ ಸೌಹಾರ್ದವನ್ನು ವೃದ್ಧಿ ಮಾಡುವ ಕೆಲಸ ಅದು ಮಾಡಿತು.

ಅಂತರರಾಷ್ಟ್ರೀಯ ಸನ್ನಿವೇಶವನ್ನು ಉತ್ತಮಗೊಳಿಸಲು ಬಿಗಡಾಯಿಸಿದ ಸಮಸ್ಯೆಗಳನ್ನು ಬಿಡಿಸುವುದರಲ್ಲಿ ಸೋವಿಯಟ್ ಯೂನಿಯನ್ ತೆಗೆದುಕೊಂಡ ನಿಲುವುಗಳ ತುಂಬಾ ಯಶಸ್ಸಿನ ಸಿಂಹಪಾಲು ಸೋವಿಯಟ್ ರಷ್ಯಾಕ್ಕೆ ಸಿಕ್ಕ ಬೇಕು. ಸ್ಟ್ಯಾಲಿನ್‌ನ ನಿಧನದ ನಂತರ ಸೋವಿಯಟ್ ರಷ್ಯಾ ತಾನೊಂದು ಪೂರ್ಣವಾಗಿ ವಿಕಾಸಗೊಂಡ ದೇಶ ಎನ್ನುವುದನ್ನು ಸಾಬೀತು ಮಾಡಿತು. ಶೀತಲ ಸಮರ ಅಪಕ್ವದ ಚಿಹ್ನೆ ಎಂದು ಅದಕ್ಕೆ ಗೊತ್ತಾಯಿತು. ವ್ಯಕ್ತಿಯೇ ಆಗಲಿ, ರಾಷ್ಟ್ರವೇ ಆಗಲೀ ಪೂರ್ಣ ಪ್ರಮಾಣದಲ್ಲಿ ವಿಕಸಿಸದಿದ್ದಾಗ ಅದು ಒಂದು ರೀತಿಯ ಮನೋಭಾವ – ಹೆದರಿಕೆ, ಅನುಮಾನ, ಹೊಟ್ಟೆಕಿಚ್ಚು, ಕೀಳರಿಮೆ, ದ್ವೇಷದಿಂದ ನರಳುತ್ತದೆ. ಸ್ಟ್ಯಾಲಿನ್ ರಷ್ಯಾ ಈ ರೀತಿ ನರಳಿತು.

ಸ್ಟ್ಯಾಲಿನ್ ಶಾಲಾ ಉಪಾಧ್ಯಾಯನಂತೆ ವರ್ತಿಸುತ್ತಿದ್ದ. ಕಠಿಣ ಸ್ವಭಾವ, ಕ್ರೂರಿ, 'ಬೆತ್ತ ಬಿಡು, ವಿದ್ಯಾರ್ಥಿಗಳನ್ನು ಹಾಳುಮಾಡು' ಎನ್ನುವ ಗಾದೆಯಲ್ಲಿ ಅವನಿಗೆ ನಂಬಿಕೆ. ಬೆತ್ತದ ರುಚಿ ನೋಡಿ ಅಥವಾ ವಯ್ಯಕ್ತಿಕ ಶ್ರದ್ಧೆ ಮತ್ತು ಜಾಣತನದಿಂದ ಬೆಳೆದು ಸಮಾಜಕ್ಕೆ ಒಳ್ಳೆಯದನ್ನು ಮಾಡಬಹುದು. ಸ್ಟ್ಯಾಲಿನ್ ಉಪಯೋಗಿಸಿದ ವಿಧಾನ ಸೂಕ್ಷ್ಮ ಪರೀಕ್ಷೆಗೆ ಒಳಗಾಗಿಲ್ಲ. ಬರ್ಬರವನ್ನು ಬರ್ಬರದ ವಿಧಾನದಿಂದಲೇ ಓಡಿಸಬೇಕು ಎನ್ನುವ ಅವನ ವಿಧಾನ ಎಷ್ಟು ಕಠೋರ! ಆದರೆ ಸ್ಟ್ಯಾಲಿನ್ ನಿಧನನಾಗುವುದರೊಳಗೆ ದೇಶದಲ್ಲಿ ಅನಾಗರಿಕತೆ ನಾಶವಾಗಿತ್ತು. ಅವನು ಮಾಡಿದ ಒಂದು ಮಹಾನ್ ಕಾರ್ಯವೆಂದರೆ ರಷ್ಯಾವನ್ನು ಅವನು ವಿದ್ಯಾವಂತ ದೇಶವನ್ನಾಗಿ ಮಾಡಿದ. ಅವನು ಅಧಿಕಾರಕ್ಕೆ ಬಂದಾಗ ಅಲ್ಲಿ ವಿದ್ಯಾವಂತರ ಸಂಖ್ಯೆ ಶೇ. ೨೦, ಈಗ ನೂರಕ್ಕೆ ನೂರು. ವಿಜ್ಞಾನ ಮತ್ತು ಯಂತ್ರ ಕಲಾಶಾಸ್ತ್ರದಲ್ಲಿ



ರಷ್ಯಾದವರ ಸಾಧನೆ ಅಪಾರ. ಸ್ಪುಟ್ನಿಕ್ ಅನ್ನು ವ್ಯೋಮಕ್ಕೆ ಯಶಸ್ವಿಯಾಗಿ, ಪೈಪೋಟಿಯಿಂದ, ಕಳುಹಿಸಿದ ರಾಷ್ಟ್ರ ರಷ್ಯಾ. ಅಂತಹ ರಾಷ್ಟ್ರವನ್ನು ಈಗ ಒಬ್ಬ ತನ್ನ ಹೆಬ್ಬೆಟ್ಟಿನಿಂದ ಹಿಡಿದಿಡಲಾರ. ಅದಕ್ಕೆ ಡ್ಯೂಟ್ಸೆಚೆರ್ (Deutscher) ಹೇಳಿದ್ದು – 'ಸ್ಟ್ಯಾಲಿಸಂ ಅನ್ನು ಅಸಾಧ್ಯವಾಗುವಂತೆ ಮಾಡಿದ್ದು ಸ್ಟ್ಯಾಲಿನ್ನೇ ಹೊರತು ಇನ್ನು ಯಾರೂ ಅಲ್ಲ.'

ಜನರನ್ನು ವಿದ್ಯಾವಂತರಾಗಿ ಮಾಡಿ ತನ್ನ ಕೀರ್ತಿಗೆ ಧಕ್ಕೆ ತಂದುಕೊಂಡ ಸ್ಟ್ಯಾಲಿನ್. ಮಹಾಮಹಿಳೆ ಕ್ಯಾಥರೀನ್ ಇವನಿಗಿಂತ ಜಾಣೆ ಅನ್ನುವ ಹಾಗೆ ಕಾಣುತ್ತದೆ. ಆಕೆ ರಷ್ಯಾದಲ್ಲಿ ಶಾಲೆಗಳ ಸರಪಳಿಯನ್ನೇ ಸ್ಥಾಪಿಸಿದಳು. ಆದರೆ ಶಾಲೆಗೆ ಹೋಗುತ್ತಿದ್ದವರು ಬಹಳ ಕಡಿಮೆ. ಶಿಕ್ಷಣ ಇಲಾಖೆಯ ನಿರ್ದೇಶಕ ಇದನ್ನು ಅವಳ ಗಮನಕ್ಕೆ ತಂದಾಗ ಅವಳು ಹೇಳಿದಳು – 'ನಾನು ಶಾಲೆಗಳನ್ನು ಏಕೆ ಸ್ಥಾಪಿಸಿದ್ದೇನೆ ಎನ್ನುವುದು ನಿಮಗೆ ಗೊತ್ತಿರಬೇಕು. ಉಳಿದ ಯೂರೋಪ್ ಜನ ನಾವು ಅನಾಗರಿಕರು ಎಂದು ತಿಳಿದುಕೊಳ್ಳಬಾರದು. ವಿದ್ಯಾರ್ಥಿಗಳು ಶಾಲೆಗೆ ಹೋಗಲು ಶುರುಮಾಡಿದರೆ ನೀವು, ನಾನು ನಾವಿರುವ ಸ್ಥಾನದಲ್ಲಿರುವುದಿಲ್ಲ.'

ಸ್ಟ್ಯಾಲಿನ್ ಕಾಲದಲ್ಲಿ ವಿದ್ಯಾರ್ಥಿಗಳು ಶಾಲೆಗೆ ಹೋದರು. ಇದರ ಪರಿಣಾಮ ಅವನು ಈಗ 'ಶೋಭಾಯಮಾನವಾದ ಸಮಾಧಿ ಭವನ'ದಲ್ಲಿಲ್ಲ.

ಸ್ಟ್ಯಾಲಿನ್ ನಂತರ ಬಂದವರಿಗೆ ನವೀನ ರಷ್ಯಾ ಜಗತ್ತಿನೊಡನೆ ಹೇಗೆ ಸ್ಪಂದಿಸಬೇಕು ಎಂದು ಗೊತ್ತಿತ್ತು. ಅವರು ಆಂತರಿಕ ಮತ್ತು ಅಂತರರಾಷ್ಟ್ರೀಯ ನಿಲುವುಗಳಲ್ಲಿ ತುಂಬ ವ್ಯತ್ಯಾಸ ಮಾಡಿಕೊಂಡರು. ತಾತ್ವಿಕವಾಗಿಯೂ ಮತ್ತು ಪ್ರಯೋಗಾತ್ಮಕವಾಗಿಯೂ ಕಮ್ಯುನಿಸಂ ಅನ್ನು ಮಿ. ಕ್ರುಶ್ಚೇವ್ ಬದಲಾಯಿಸಿದ. ಅಪಕ್ವತೆಯ ಚಿಹ್ನೆ, ಸೂತ್ರಾಂಧತೆಗೆ ಅಂಟಿಕೊಂಡಿರುವುದು. ಮಾರ್ಕ್ಸ್‌ನ ಅನುಯಾಯಿಗಳಲ್ಲಿ ತುಂಬ ಜನ ಇಂತಹ ವರ್ಗಕ್ಕೆ ಸೇರಿದವರು. ಅಂತೆಯೇ ಸಾಮಾನ್ಯ ರೋಮನ್ ಕ್ಯಾಥೋಲಿಕ್, ೨೩ನೇ ಪೋಪ್ ಜಾನ್, ೬ನೇ ಪಾಲ್ ಇವರಿದ್ದಾಗ ಸರ್ವೇಸಾಧಾರಣ ರೋಮನ್ ಕ್ಯಾಥೋಲಿಕ್ ಸೂತ್ರಾಂಧತೆಗೆ ಒಳಗಾಗಿದ್ದ. ನಾನು ಇಲ್ಲಿ ಯಾವ ಮತವನ್ನು ಹೀಯಾಳಿಸುತ್ತಿಲ್ಲ.

ಸ್ಟ್ಯಾಲಿನ್ ನಿಧನದ ನಂತರ ಸೋವಿಯಟ್ ಯೂನಿಯನ್ ನಿಧಾನವಾಗಿ ಮಾರ್ಪಾಡಾಯಿತು. ಕಮ್ಯುನಿಸ್ಟ್ ಪಾರ್ಟಿಯ ಇಪ್ಪತ್ತನೆಯ ಕಾಂಗ್ರೆಸ್‌ನಲ್ಲಿ ಮಾರ್ಕ್ಸಿಸಂನಲ್ಲಿದ್ದ ಕೆಲವು ಮೂಲಭೂತ ಸಿದ್ಧಾಂತಗಳೂ ಬದಲಾವಣೆಗೊಂಡವು. ಇದಕ್ಕೆ ಕಾರಣ ನ್ಯೂಕ್ಲಿಯರ್ ಯುಗದ ಆರಂಭ. ಮಾರ್ಕ್ಸಿಸಂ ಮೂಲಭೂತ ಸಿದ್ಧಾಂತಗಳಲ್ಲಿ ಒಂದು ಹೀಗಿತ್ತು – 'ಮಾನವ ಜನಾಂಗ ಭವಿಷ್ಯತ್‌ನಲ್ಲಿ ಅನೇಕ ಯುದ್ಧಗಳನ್ನು ಅಂದರೆ ಬಂಡವಾಳಶಾಹಿ ವಿರುದ್ಧ ಕಮ್ಯುನಿಸಂನ ಸಂಘರ್ಷಗಳನ್ನು ನೋಡುತ್ತದೆ. ಕೊನೆಯಲ್ಲಿ ಕಮ್ಯುನಿಸಂ ಗೆದ್ದು ಬಂಡವಾಳಶಾಹಿ ನಿರ್ನಾಮವಾಗುತ್ತದೆ.'

ಮಾರ್ಕ್ಸ್‌ನ ವಾದಕ್ಕೆ ಇತಿಹಾಸದ ಪುಟಗಳಿಂದ ಬೆಂಬಲ ಸಿಕ್ಕಿತ್ತು. ಮೊದಲನೆಯ ಜಾಗತಿಕ ಯುದ್ಧದ ನಂತರ ೧/೬ ಭಾಗದಷ್ಟು ಜನ ಕಮ್ಯುನಿಸಂ ಅನ್ನು ಅಪ್ಪಿಕೊಂಡರು; ಎರಡನೆಯ ಜಾಗತಿಕ ಯುದ್ಧದ ನಂತರ ಜಗತ್ತಿನ ೧/೪ ಭಾಗ ಜನ ಕಮ್ಯುನಿಸಂ ಅನ್ನು ಒಪ್ಪಿಕೊಂಡರು. ಇನ್ನು ಉಳಿದಿರುವುದೇನು? ಇನ್ನೆರಡು ಮೂರು ಜಾಗತಿಕ ಯುದ್ಧಗಳಾದರೆ ಸಾಕು ಭೂಮಂಡಲದ ಮೇಲೆ ಉಳಿಯುವುದು ಕಮ್ಯುನಿಸಂ ಒಂದೇ.

ಆದರೆ ಈಗ ಪರಮಾಣು ಬಾಂಬಿನ (Atom bomb) ಆವಿಷ್ಕಾರವಾಗಿದೆ. ಅದರಿಂದ ನಾಗರಿಕತೆ ಪೂರ್ಣವಾಗಿ ನಾಶವಾಗಬಹುದು. ಅದರಿಂದ ಬಾಂಬ್ ಹಾಕಿದ ದೇಶ, ಯಾವ ದೇಶದ ಮೇಲೆ ಪ್ರಯೋಗವಾಯಿತು ಆ ದೇಶ – ಎರಡೂ ವಿವರಿಸಲಾಗದಷ್ಟು ಹಾನಿಗೆ ಒಳಗಾಗುತ್ತವೆ. ಅದು ಬಂಡವಾಳಶಾಹಿ ಮತ್ತು ಕಮ್ಯುನಿಸಂ ನಡುವೆ ಯಾವ ತಾರತಮ್ಯವನ್ನೂ ತೋರಿಸುವುದಿಲ್ಲ. ಕ್ರುಶ್ಚೇವ್‌ಗೆ ಪರಮಾಣು ಬಾಂಬಿನಲ್ಲಿರುವ ಈ ಅಪಾರ ಶಕ್ತಿ ಗೊತ್ತಿತ್ತು. ಆದುದರಿಂದಲೇ ಅವನು ಮಾರ್ಕ್ಸಿಸಂನಲ್ಲಿರುವ ಒಂದು ಮೂಲಭೂತ ಸೂತ್ರವನ್ನು ಬದಲಾಯಿಸಿದ. ಅವನು ಹೇಳಿದ – 'ಯುದ್ಧ ಅಗತ್ಯವಲ್ಲ, ಅಗತ್ಯವಾಗಬಾರದು.'

ಕಾರ್ಲ್‌ಮಾರ್ಕ್ಸ್ 'ಪರಮಾಣು – ಪೂರ್ವ ಮನುಷ್ಯ' (Pre-atomic man) ಹೀಗೆ ಮೊದಲ ಬಾರಿ ಹೇಳಿದ್ದು ಕಮ್ಯುನಿಸ್ಟ್ ಕ್ರುಶ್ಚೇವ್ ಎಂದು ಮ್ಯಾಕ್‌ಮಿಲನ್ ಹೇಳಿದ್ದಾನೆ.

ಸಮಾಜದ ಮಾರ್ಪಾಡಿಗೆ ಹಿಂಸೆ ಅಗತ್ಯ ಎನ್ನುವ ಸೂತ್ರವನ್ನು ಮಿ. ಕ್ರುಶ್ಚೇವ್ ಮಾರ್ಪಾಡು ಮಾಡಿದ. ಬಹುಶಃ ಇದಕ್ಕೆ ಕಾರಣ ಹಿಂಸೆ ಇಲ್ಲದೆ ಭಾರತದಲ್ಲಾದ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ. ಕ್ರುಶ್ಚೇವ್ ನನ್ನ ಬಳಿ ಮಾತಾಡುತ್ತಾ ಹೀಗೆ ಹೇಳಿದ – 'ನೀವು – ಭಾರತೀಯರು – ವಿಸ್ಮಯಗೊಳಿಸುವ ಜನ. ರಾಜರ ಆಡಳಿತವನ್ನು ನೀವು ಅಳಿಸಿದಿರಿ, ರಾಜರನ್ನು ಅಳಿಸದೆ ೨೦ನೇ ಕಮ್ಯುನಿಷ್ಟ್ ಕಾಂಗ್ರೆಸ್‌ನಲ್ಲಿ ಮಿ. ಕ್ರುಶ್ಚೇವ್ ಘೋಷಿಸಿದ – ಸಮಾಜದ ಮಾರ್ಪಾಡಿಗೆ ಹಿಂಸೆ ಅತ್ಯಾವಶ್ಯಕವಲ್ಲ. ಪಾರ್ಲಿಮೆಂಟರಿ ಪ್ರಜಾಪ್ರಭುತ್ವದ ಮೂಲಕವೂ ಬದಲಾವಣೆ ಸಾಧ್ಯ. ಕಾಂಗ್ರೆಸ್‌ನಲ್ಲಾದ ಇನ್ನೊಂದು ಮುಖ್ಯ ನಡವಳಿಕೆ ಏನೆಂದರೆ 'ಬೇರೆ ಬೇರೆ ರಾಜ್ಯಗಳಿಗೆ ಸಮಾಜವಾದದ ಗುರಿ ಮುಟ್ಟಲು ತಮ್ಮದೇ ಆದ ಮಾರ್ಗ ಹಿಡಿಯಲು ಸ್ವಾತಂತ್ರ್ಯವಿದೆ'. ಇದೊಂದು ಸ್ಫೋಟಕ ತತ್ವನಿರೂಪಣೆ. ತಕ್ಷಣವೇ ಪೋಲೆಂಡ್‌ನಲ್ಲಿ ಎದ್ದ ಬಂಡಾಯ ಇದಕ್ಕೆ ಉದಾಹರಣೆ, ಅಂತೆಯೇ ಹಂಗೇರಿಯ ಕ್ರಾಂತಿ, ಹಂಗರಿಯಲ್ಲಿ ಎದ್ದಿದ್ದ ಕ್ರಾಂತಿಯ ಬಗ್ಗೆ ಭಾರತ ಅನುಸರಿಸಿದ ನೀತಿಯನ್ನು ಹಲವರು ತಪ್ಪಾಗಿ ಅರ್ಥೈಸಿದರು. ಮಹಾಸಭೆಯಲ್ಲಿ ಭಾರತದ ಪ್ರತಿನಿಧಿ ನೀಡಿದ ಹೇಳಿಕೆ ಹಾಗೂ ಮತ ಚಲಾಯಿಸಿದ ಬಗೆ ಭಾರತದ ಬಗ್ಗೆ ತಪ್ಪು ಭಾವನೆ



ಬರುವಂತೆ ಮಾಡಿತು. ಆದರೆ ಭಾರತ, ಹಂಗೇರಿಯಲ್ಲಿ ಎದ್ದಿದ್ದ ಕ್ರಾಂತಿಯನ್ನು ದಮನಮಾಡಲು ಯತ್ನಿಸಿದ್ದು ಸರಿ ಎಂದು ಹೇಳಿತು ಅಥವಾ ಕ್ರಾಂತಿಯನ್ನು ಗಮನಕ್ಕೆ ತೆಗೆದುಕೊಳ್ಳಲಿಲ್ಲ ಎನ್ನುವುದು ಸರಿಯಲ್ಲ. ನಾನೇ ಖುದ್ದಾಗಿ ರಷ್ಯಾದ ವಿದೇಶಾಂಗ ಮಂತ್ರಿ ಮಿ. ಷೆಫಿಲೋನ್, ಪ್ರಧಾನಮಂತ್ರಿ ಮಿ. ಬುಲ್ಗಾನಿನ್, ಕಮ್ಯುನಿಸ್ಟ್ ಪಾರ್ಟಿ ಕಾರ್ಯದರ್ಶಿ ಮಿ. ಕ್ರುಶ್ಚೇವ್‌ಗೆ ಹಂಗೇರಿಯಲ್ಲಾಗುತ್ತಿರುವ ಘಟನೆಗಳ ಬಗ್ಗೆ ನಮ್ಮ ತೀವ್ರ ಆತಂಕವನ್ನು ಸೂಚಿಸಿದ್ದೆ. ಹಂಗೇರಿಯಲ್ಲಿ ಕ್ರಾಂತಿ ಶುರುವಾದ ಹತ್ತು ದಿನಗಳ ನಂತರ ಸೂಯೆಜ್ ಮೇಲೆ ಆ್ಯಂಗ್ಲೋ–ಫ್ರೆಂಚ್ ಆಕ್ರಮಣ ನಡೆಯಿತು. ಇದನ್ನು ಭಾರತ ಮತ್ತು ಏಷ್ಯಾದ ರಾಷ್ಟ್ರಗಳು ದೂಷಿಸಿದವು. ಈಜಿಪ್ಟ್‌ನಲ್ಲಿ ನಡೆದ ಘಟನೆ ಮತ್ತು ಹಂಗೇರಿಯ ಕ್ರಾಂತಿ ಬಗ್ಗೆ ಭಾರತ ಬೇರೆ ಬೇರೆ ನಿಲುವು ಹೊಂದಿದೆ ಎಂದ ಕೆಲವು ಬಲಿಷ್ಠ ರಾಷ್ಟ್ರಗಳು ಭಾರತದ ಮೇಲೆ ದೋಷಾರೋಪಣೆ ಮಾಡಿದವು. ಆದರೆ ಈ ಎರಡು ಘಟನೆಗಳನ್ನು ಬೇರೆ ಬೇರೆ ರೀತಿಯಿಂದ ನೋಡುವುದು ಅವಶ್ಯಕವಾಗುತ್ತದೆ. ಈಜಿಪ್ಟ್‌ನ ಮೇಲೆ ಮಾಡಿದ ಧಾಳಿ ಸಾಮ್ರಾಜ್ಯ ತತ್ವವನ್ನು ಮರುಚಲಾವಣೆಗೆ ತರುವ ಯತ್ನ ಎಂದು ಭಾರತ ಮತ್ತು ಏಷ್ಯಾದ ರಾಷ್ಟ್ರಗಳು ಅರ್ಥಮಾಡಿಕೊಂಡಿದ್ದವು. ಹಂಗೇರಿ ಕ್ರಾಂತಿಯಲ್ಲಿ ಎರಡು ಹಂತವಿತ್ತು. ಮೊದಲನೆಯ ಹಂತದಲ್ಲಿ ಅಂದರೆ ೨೩ ಅಕ್ಟೋಬರ್ ೧೯೫೬ರಿಂದ ತಿಂಗಳ ಕೊನೆಯವರೆಗೂ ರಷ್ಯಾ ಸಂಯಮದಿಂದ, ಕಡಿಮೆ ತೀವ್ರತೆಯಲ್ಲಿ ಕಾಯಕ ನಡೆಸಿತು. ೩೦ ಅಕ್ಟೋಬರ್ ೧೯೫೬ರಲ್ಲಿ ರಷ್ಯಾ ಒಂದು ಒಕ್ಕಣೆ ಹೊರಡಿಸಿತು – 'ಬುಡಾಪೆಸ್ಟ್‌ನಿಂದ ತಕ್ಷಣವೇ ನಮ್ಮ ಯೋಧರು ವಾಪಸ್ಸಾಗುತ್ತಾರೆ' ನಂತರ ಹಂಗೇರಿ ಸರ್ಕಾರದ ಜೊತೆ ವ್ಯವಹರಿಸಿ ಆ ರಾಜ್ಯದಲ್ಲಿರುವ ನಮ್ಮ ಸೇನೆಯೆಲ್ಲಾ ವಾಪಸ್ಸಾಗುವಂತೆ ಕ್ರಮ ತೆಗೆದುಕೊಳ್ಳುತ್ತೇವೆ.' ಮುಂದಿನ ಮೂರು ನಾಲ್ಕು ದಿನಗಳಲ್ಲಿ ಅನೇಕ ಘಟನೆಗಳು ಜರುಗಿದವು – ವಿಶ್ವ ಸಂಸ್ಥೆಯಲ್ಲಿ ಹಂಗೇರಿ ಪ್ರಧಾನಿಯ ಮನವಿ, ವಾರ್ಸಾ ಒಡಂಬಡಿಕೆಯಿಂದ ಹಿಮ್ಮೆಟ್ಟುವಿಕೆ, ಕಾರ್ಡಿನಲ್ ಮಿಂಡ್‌ಜೆಂಟಿಯ ಅನೌಚಿತ ಹೇಳಿಕೆಗಳು, ವಾಯ್ಸ್ ಆಫ್ ಅಮೆರಿಕಾ ಮತ್ತು ರೇಡಿಯೋ ಯೂರೋಪ್‌ನಿಂದ ಬಿತ್ತರವಾಗುತ್ತಿದ್ದ ಕ್ಷಾತ್ರ ಭಾವನೆಯ ವಾರ್ತೆಗಳು.

ಅಕ್ಟೋಬರ್ ೩೦ರಲ್ಲಾದ ನಿರ್ಣಯದಂತೆ ಹಂಗೇರಿಯ ಸರ್ಕಾರದೊಡನೆ ವ್ಯವಹರಿಸಲು ರಷ್ಯಾ ಬುಡಾಪೆಸ್ಟ್‌ಗೆ ಮಿ. ಮಿಕೋಯಸ್‌ನನ್ನು ಕಳುಹಿಸಿತು. ಅವನು ಅಲ್ಲಿಗೆ ಪ್ರಯಾಣಿಸುತ್ತಿರುವಾಗ ಆ್ಯಂಗ್ಲೋ–ಫ್ರೆಂಚ್–ಇಸ್ರೇಲಿ ಪಡೆಗಳಿಂದ ಸೂಯೆಜ್ ಮೇಲೆ ಆಕ್ರಮಣ ನಡೆಯಿತು. ಮಿ. ಮಿಕೋಯಸ್‌ಗೆ ಮಹಾನ್ ತಕರಾರು ನಿವಾರಕ (Trouble Shooter) ಎನ್ನುವ ಹೆಸರಿತ್ತು. ಆದರೆ ಅವನಿಗೆ ನೀಡಿದ್ದ ಸೂಚನೆಗಳು ಬದಲಾದವು. ಸೋವಿಯಟ್ ಯೂನಿಯನ್, ಮೆಡಿಟರೇನಿಯನ್ ಸಮುದ್ರದಲ್ಲಿರುವ ಯುದ್ಧ ಹಡಗುಗಳ ಮೇಲೆ ಆಕಾಶ ಬಾಂಬ್

(Rocket) ಹಾರಿಸುವುದಾಗಿ ಬೆದರಿಕೆ ಹಾಕಿತು. ಮತ್ತೊಂದು ಜಾಗತಿಕ ಯುದ್ಧ ಉದ್ಭವವಾಗುವ ಸ್ಥಿತಿ ಬಂತು. ರಷ್ಯಾ ಹಂಗರಿಯಲ್ಲಿ ತಲೆ ಎತ್ತಿದ ಕ್ರಾಂತಿಯನ್ನು ಮಟ್ಟಹಾಕುವುದಕ್ಕೆ ಕಾರಣ ಮೇಲೆ ವಿವರಿಸಿದ ಸನ್ನಿವೇಶ ಎಂದರೆ ನಾನು ರಷ್ಯಾ ಪರ ವಾದಿಸುತ್ತಿದ್ದೇನೆ ಎಂದು ಯಾರೂ ತಿಳಿಯಬಾರದು. ಇದಂತೂ ನಿಜ, ಹಂಗೇರಿಯಲ್ಲಿ ಹುಟ್ಟಿದ ಕ್ರಾಂತಿ ಮತ್ತು ಅದರ ಬೆಳವಣಿಗೆಯಿಂದ ಸೋವಿಯಟ್ ಯೂನಿಯನ್‌ನ ಸುರಕ್ಷತೆಗೆ ಹಾಗೂ ಅದರ ಗೌರವಕ್ಕೆ ಚ್ಯುತಿ ಬಂದಿತ್ತು. ಅದರ ಗಡಿಪ್ರಾಂತ್ಯಗಳು ಅದರ ರಕ್ಷಣೆಯ ಕವಚಗಳಂತಿದ್ದವು. ಈಗ ಅವಕ್ಕೆ ಅಪಾಯ ಬಂದರೆ? ಸೂಯೆಜ್ ವಿಷಯದಲ್ಲಿ ಇಂತಹ ಪರಿಸ್ಥಿತಿ ಎದುರಿಸಬೇಕಾಗಿರಲಿಲ್ಲ. ಭಾರತದ ನಿಲುವು ಇಬ್ಬಗೆಯದು ಎಂದು ನಮ್ಮಲ್ಲಿಯೇ ಕೆಲವರು ದೋಷಾರೋಪಣೆ ಮಾಡುವುದುಂಟು. ಆದರೆ ಇಂತಹ ದೋಷಾರೋಪಣೆಯಲ್ಲಿ ಯಾವ ತಿರುಳೂ ಇಲ್ಲ.

ಸ್ಟ್ಯಾಲಿನ್‌ನ ಮರಣದ ನಂತರ ಅಂತರರಾಷ್ಟ್ರೀಯ ಬಿಕ್ಕಟ್ಟನ್ನು ಸಡಿಲಗೊಳಿಸಲು ಸೋವಿಯಟ್ ಸರ್ಕಾರ ತೆಗೆದುಕೊಂಡ ನಿಲುವುಗಳನ್ನು ಶ್ಲಾಘಿಸಲೇ ಬೇಕು. ಏಕೆಂದರೆ ಜಾನ್ ಫಾಸ್ಟರ್ ಡಲ್ಲೆಸ್ ಅದನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಲೇ ಇದ್ದ. ರಷ್ಯಾದ ಇಪ್ಪತ್ತನೆಯ ಕಾಂಗ್ರೆಸ್‌ನಲ್ಲಿ ನಡೆದ ಕಾರ್ಯಕಲಾಪಗಳನ್ನು ಡಲ್ಲೆಸ್ ತಪ್ಪಾಗಿ ಅರ್ಥಮಾಡಿಕೊಂಡಿದ್ದ. ಬುಡಾಪೆಸ್ಟ್‌ನಿಂದ ರಷ್ಯಾ ಸೇನೆ ಹಿಮ್ಮೆಟ್ಟಿದ್ದಕ್ಕೆ ಕಾರಣ ಪಶ್ಚಿಮ ರಾಷ್ಟ್ರಗಳ ಹೆಚ್ಚಿನ ಬಲಾಢ್ಯತೆ ಎನ್ನುವುದು ಅವನ ಅನಿಸಿಕೆ. ಇದಕ್ಕಿಂತ ಜಾಸ್ತಿಯಾದ ತಪ್ಪು ಕಲ್ಪನೆ ಇತಿಹಾಸದಲ್ಲಿ ಸಿಕ್ಕಲಾರದು. ರಷ್ಯಾ ತನ್ನ ನಿಲುವಿನಲ್ಲಿ ಮಹತ್ತರ ಬದಲಾವಣೆಗಳನ್ನು ಮಾಡಿಕೊಂಡಿತ್ತು.

ಅಧ್ಯಕ್ಷ ಕೆನಡಿ ಅಧಿಕಾರ ವಹಿಸಿಕೊಂಡು, ಡಲ್ಲೆಸ್ ತನ್ನ ಪದವಿಯಿಂದ ನಿರ್ಗಮಿಸಿದ ಮೇಲೆ ಅಮೆರಿಕಾ ಕೂಡ ನೆಮ್ಮದಿಯ ಸಹಬಾಳ್ವೆ ನಡೆಸುವ ಪಥದಲ್ಲಿ ಹೋಗಲು ಇಷ್ಟಪಟ್ಟಿತು. ಯಾರು ನನ್ನ ಸಂಗಡವಿರುವುದಿಲ್ಲವೋ ಅವರು ನನ್ನ ವಿರೋಧಿ ಎನ್ನುವ ಬಾಲಿಶ ಭಾವನೆಯನ್ನು ಅಮೆರಿಕಾ ತ್ಯಜಿಸಿತು. ಡಲ್ಲೆಸ್ ಕರೆದಂತೆ 'ತಾಟಸ್ಥ್ಯ ಭಾವ ಎನ್ನುವುದು ಸಮೀಪ ದೃಷ್ಟಿಯಲ್ಲ, ಅನೈತಿಕವಲ್ಲ. 'ಸರಿತಪ್ಪುಗಳ ಬಗ್ಗೆ ಔದಾಸೀನ್ಯದಿಂದಿರುವುದು ತಾಟಸ್ಥ್ಯದ ಉದ್ದೇಶವಲ್ಲ ಎಂದು ಅಧ್ಯಕ್ಷ ಐಸೆನ್‌ಹೋವರ್ ಹೇಳಿದ್ದು ಡಲ್ಲೆಸ್‌ಗೆ ಕಸಿವಿಸಿಯಾಯಿತು. ತಾಟಸ್ಥ್ಯದ ನಿಲುವನ್ನು ಹಿಂದೆ ಅಮೆರಿಕಾ ಅನುಸರಿಸಿತ್ತು. ಅಧ್ಯಕ್ಷ ಜೆಫರ್‌ಸನ್ 'ತಾಟಸ್ಥ್ಯ' ಎನ್ನುವ ಬದಲು, 'ಮಿತ್ರರೊಡನೆ ತೊಡಕಿನಲ್ಲಿ ಸಿಕ್ಕಿಕೊಳ್ಳುವುದರಿಂದ ವಿಮೋಚನೆ' ಎಂದಿದ್ದ. ಅಮೆರಿಕಾ ಮೂರು ವರ್ಷಗಳ ಕಾಲ ಅನುಸರಿಸಿದ್ದ ನೀತಿಯನ್ನು ಈಗ ಏಷ್ಯಾದ ದೇಶಗಳು ಏಕೆ ಅನುಸರಿಸಬಾರದು? ಅಮೆರಿಕಾದ ಕೆಲವು ಬುದ್ಧಿಜೀವಿಗಳು, 'ಭಾರತ ಅನುಸರಿಸುತ್ತಿರುವ ನಿಜವಾದ ತಾಟಸ್ಥ್ಯನೀತಿ, ಯಾವ ನೀತಿನಿಯಮಗಳನ್ನೂ



ಆಚರಿಸದ, ಸಮಯಸಾಧಕ ಪಾಕಿಸ್ತಾನ್‌ನಂತಹ ದೇಶಗಳಿಗಿಂತ ಉತ್ತಮ. ಪಾಕಿಸ್ತಾನ ಮತ್ತು ಅಂತಹ ಕೆಲವು ದೇಶಗಳು ಆರ್ಥಿಕ ಮತ್ತು ಸೇನೆಯ ನೆರವನ್ನು ಅಮೇರಿಕಾದಿಂದ ಪಡೆಯುತ್ತಾ, ಅದರ ಶತ್ರು ಚೀನಾದೊಡನೆ ಅಪವಿತ್ರ ಸ್ನೇಹ ಇಟ್ಟುಕೊಂಡಿವೆ. ತಾಟಸ್ಥ್ಯ ನೀತಿ ಇದಕ್ಕಿಂತ ಉತ್ತಮ.'

ಅಮೆರಿಕಾ ಮತ್ತು ಸೋವಿಯಟ್ ಯೂನಿಯನ್ ನಡುವೆ ಇದ್ದ ಶೀತಲ ಸಮರ ಕಳೆದ ದಶಕದ ಮಧ್ಯಭಾಗದಲ್ಲಿ ತನ್ನ ತೀಕ್ಷ್ಣತೆಯನ್ನು ಕಳೆದುಕೊಳ್ಳುತ್ತಾ ಬಂತು. ಆದರೆ ಅದರ ಸೂಕ್ಷ್ಮ ಕ್ರಿಮಿಗಳು ಇನ್ನೂ ಜೀವಂತವಾಗಿದ್ದು, ಬೇರೆ ಬೇರೆ ಪ್ರದೇಶಗಳಿಗೂ, ಖಂಡಗಳಿಗೂ, ಅರ್ಧಗೋಳಕ್ಕೂ ಹರಡುತ್ತಾ ಬಂದವು. ಈ ಉಪನ್ಯಾಸದಲ್ಲಿ ಹೀಗೆ ಕೆಲವು ದೇಶಗಳ ಗಡಿ ಪ್ರದೇಶಗಳಲ್ಲಿ ಕಾಣಿಸಿಕೊಂಡ ಶೀತಲ ಸಮರವನ್ನು ಹೇಳಲು ಬಯಸುತ್ತೇನೆ.

ಬೇರೆ ಬೇರೆ ಪ್ರದೇಶಗಳಲ್ಲಿ ಬೇರೆ ಬೇರೆ ರೀತಿಯಲ್ಲಿ ಶೀತಲ ಸಮರ ಕಾಣಿಸಿಕೊಂಡಿತು. ಶೀತಲ ಸಮರಕ್ಕೆ ಬೇರೆ ಬೇರೆ ಕಾರಣಗಳಿದ್ದವು. ಇರಾನ್ ಮತ್ತು ಟರ್ಕಿ ಬಗ್ಗೆ ಹೇಳುವುದಾದರೆ ಅದಕ್ಕೆ ಭೌಗೋಳಿಕ ಸನ್ನಿವೇಶವೇ ಕಾರಣ ಎನ್ನಬಹುದು. 'ಯಾವ ದೇಶ ನಿನ್ನ ದೇಶದ ಗಡಿಯ ಪಕ್ಕದ ದೇಶವೋ ಅದು ನಿನ್ನ ಶತ್ರು ದೇಶ, ಯಾವುದಲ್ಲವೋ ಅದು ನಿನ್ನ ಮಿತ್ರ ದೇಶ' ಎಂದು ಕೌಟಿಲ್ಯ ಹೇಳಿದ್ದಾನೆ. ಇರಾನ್ ಮತ್ತು ಟರ್ಕಿ ಮತ್ತು ರಷ್ಯಾ ಇವುಗಳ ಮಧ್ಯೆ ಇರುವ ಸಂಬಂಧ ಕೌಟಿಲ್ಯ ಹೇಳಿದ್ದನ್ನು ದೃಢೀಕರಿಸುತ್ತದೆ. ಇತಿಹಾಸದಲ್ಲಿ ಬರುವ ಇನ್ನೊಂದು ಉದಾಹರಣೆ ಫ್ರಾನ್ಸ್ ಮತ್ತು ಜರ್ಮನಿ ನಡುವೆ ಇರುವ ಸಂಬಂಧ. ಎರಡನೆಯ ಜಾಗತಿಕ ಯುದ್ಧವಾದ ಮೇಲೆ ತನ್ನ ದೇಶವನ್ನು ವಿಸ್ತಾರಗೊಳಿಸುವ ದಿಕ್ಕಿನಲ್ಲಿ ಸ್ಟ್ಯಾಲಿನ್ ಇರಾನ್ ಮತ್ತು ಟರ್ಕಿ ಮೇಲೆ ಒತ್ತಡ ಹಾಕುತ್ತಾ ಬಂದ. ಅಷ್ಟರಲ್ಲಿ ಈ ಎರಡು ದೇಶಗಳು ರಷ್ಯಾ ವಿರುದ್ಧದ 'ಬಾಗ್ದಾದ್ ಒಡಂಬಡಿಕೆ'ಗೆ ಒಪ್ಪಿದ ರಾಷ್ಟ್ರಗಳಾದವು. ಸ್ಟ್ಯಾಲಿನ್ ನಂತರ ಅಧಿಕಾರಕ್ಕೆ ಬಂದವರು ಮೈತ್ರಿಭಾವದ ನಿಲುವನ್ನು ಹೊಂದಿದ್ದರೂ ಮತ್ತು ಗಡಿ ವಿವಾದಗಳನ್ನು ಪರಿಹರಿಸಿದ್ದರೂ ಅವು ಬಾಗ್ದಾದ್ ಒಡಂಬಡಿಕೆಯ ರಾಷ್ಟ್ರಗಳಾಗಿಯೇ ಉಳಿದವು. ೧೯೫೮ರಲ್ಲಿ ನಡೆದ ಕ್ರಾಂತಿಯ ದೆಸೆಯಿಂದ ಅದು ಬಾಗ್ದಾದ್ ಒಡಂಬಡಿಕೆಯಿಂದ ಹೊರಬಂತು ಎಂದು ಮಿ. ಕ್ರುಶ್ಚೇವ್ ಹೇಳಿದ. ಆದರೆ ಮೈತ್ರಿ ಇನ್ನೊಂದು ಹೆಸರಿನಲ್ಲಿ ಉದ್ಭವವಾಯಿತು. ಅದೇ ಸೆಂಟೊ (CENTO).

ಪಾಕಿಸ್ತಾನ ಸೆಂಟೋ (CENTO) ನ ಒಂದು ಸದಸ್ಯ ರಾಷ್ಟ್ರ– ವಿಚಿತ್ರ ಎನ್ನಬಹುದಾದ ಸದಸ್ಯ ದೇಶ. ಅದು ಕಮ್ಯುನಿಸ್ಟ್ ವಿರುದ್ಧವಿದ್ದ ಮೈತ್ರಿಕೂಟದ ಸದಸ್ಯ ರಾಷ್ಟ್ರವಾಗಿ ಮುಂದುವರಿಯಿತು. ಆದರೂ ಆಫ್ರೋ–ಏಷ್ಯನ್ ರಾಷ್ಟ್ರಗಳ ಸಮುದಾಯದಲ್ಲಿ ಹಾಗೂ ವಿಶ್ವಸಂಸ್ಥೆಯಲ್ಲಿ ಅದು ಚೀನಾದ ಕೈಗೊಂಬೆಯಂತೆ

ವರ್ತಿಸುತ್ತಿತ್ತು. ೧೯೬೫ರಲ್ಲಿ ಭಾರತದೊಡನೆ ಕದನ ಆರಂಭಿಸಿದಾಗ ಸೆಂಟೋ ಸಹಾಯವನ್ನು ಅದು ಅಪೇಕ್ಷಿಸಿತು. ಸೆಂಟೋ ಇಂಡೋ–ಪಾಕ್ ಯುದ್ಧದಲ್ಲಿ ಪಾತ್ರವಹಿಸಲು ಇಷ್ಟ ಪಡಲಿಲ್ಲ. ಆದರೆ ಇರಾನ್ ಮತ್ತು ಟರ್ಕಿ ಪಾಕಿಸ್ತಾನಕ್ಕೆ ಆಯುಧಗಳನ್ನೂ, ಮದ್ದು ಗುಂಡು ಮುಂತಾದ ಯುದ್ಧ ಸಾಮಗ್ರಿಗಳನ್ನು ಕೊಟ್ಟಿತು. ಅಮೆರಿಕಾಕ್ಕೆ ಇರಾನ್ ಮತ್ತು ಟರ್ಕಿಯ ವರ್ತನೆಯಿಂದ ಕ್ಲೇಶ ಉಂಟಾಯಿತು.

ಇನ್ನೊಂದು ಮಿಲಿಟರಿ ಮೈತ್ರಿಕೂಟ ಸೀಟೋ (SEATO) ಗೂ ಪಾಕಿಸ್ತಾನ ಸದಸ್ಯ ರಾಷ್ಟ್ರವಾಯಿತು. ಸೀಟೋ ಕೂಡ ಇಂಡೋ–ಪಾಕ್ ಕದನದಲ್ಲಿ ತಟಸ್ಥಭಾವ ತೋರಿತು. ಪಾಕಿಸ್ತಾನಕ್ಕೆ ಬೆಂಬಲವಾಗಿ ನಿಂತು ಅರಚಿದ್ದು ಒಂದು ದಕ್ಷಿಣ–ಏಷ್ಯಾ ದೇಶ – ಇಂಡೋನೇಷ್ಯಾ. ಅದು ಸೀಟೋ ಸದಸ್ಯ ರಾಷ್ಟ್ರವೇನೂ ಅಲ್ಲ. ಅದರ ವಿದೇಶಾಂಗ ನೀತಿ ಏನು ಅನ್ನುವುದು ಅರ್ಥಮಾಡಿಕೊಳ್ಳುವುದು ಸಾಧ್ಯವಿಲ್ಲ. ಅದರ ಅಧ್ಯಕ್ಷ ಮುಷ್ಟಿಯಷ್ಟು ಜಾಣತನವಿದ್ದ ಸುಕರ್ನೊ ಅವನ ಇಚ್ಛೆಯಂತೆ ದೇಶದ ವಿದೇಶಾಂಗ ನೀತಿ ಬದಲಾಗುತ್ತಿತ್ತು. ಸೆಪ್ಟೆಂಬರ್ ೩೦ ರಂದು ನಡೆದ ಕಮ್ಯುನಿಸ್ಟ್ ಕ್ರಾಂತಿ ಸುಕರ್ನೊಗೆ ಒಂದು ಪಾಠ ಕಲಿಸಿತು – ಅವಕಾಶವಾದ ಅನುಕೂಲವಲ್ಲ. ಇಂಡೋನೇಷ್ಯಾವಾಗಲೀ, ಪಾಕಿಸ್ತಾನವಾಗಲೀ ಅವು ತೆಗೆದುಕೊಳ್ಳುವ ನಿಲುವುಗಳು ಯಾವ ತತ್ವದ ಮೇಲೂ ಅವಲಂಬಿಸಿರುವುದಿಲ್ಲ. ಹೀಗಾಗಿಯೇ ಈ ಎರಡು ದೇಶಗಳನ್ನು ಚೀನಾ ತುಂಬ ಶ್ರಮಪಟ್ಟು ಪ್ರೀತಿಸುತ್ತಿತ್ತು. ಈ ದೇಶಗಳು ಚೀನಾದ ಅಪ್ಪುಗೆಗೆ ಸುಲಭವಾಗಿ ಒಪ್ಪಿದವು. ಆದರೆ ಈಗ ಈ ದೇಶಗಳಿಗೂ 'ಅನುಕೂಲ ಸಿಂಧು' ಮಾರ್ಗ ಸರಿಯಲ್ಲ ಎನ್ನುವುದು ಗೊತ್ತಾಗಿದೆ. ಅಮೆರಿಕಾದ ಅಧ್ಯಕ್ಷ ಲಿಂಕನ್ ಹೀಗೆ ಹೇಳಿದ್ದ – 'ನೀನು ಕೆಲವರನ್ನು ಸರ್ವಕಾಲಕ್ಕೂ ಮರುಳುಗೊಳಿಸಬಹುದು, ಎಲ್ಲರನ್ನೂ ಸ್ವಲ್ಪಕಾಲ. ಆದರೆ ಎಲ್ಲರನ್ನೂ ಎಲ್ಲಾ ಕಾಲಕ್ಕೂ ಮರುಳುಗೊಳಿಸುವುದು ಸಾಧ್ಯವಿಲ್ಲ.'

೧೯೫೬ರ ಶರತ್ಕಾಲದಲ್ಲಿ ಶೀತಲ ಸಮರದ ತೀಕ್ಷ್ಣ ಮಾರ್ದನಿ ಈಜಿಪ್ಟ್‌ನಲ್ಲಿ ಕೇಳಿಸಿತು. ಇದರಲ್ಲಿ ರಷ್ಯಾ ವಿರುದ್ಧದ ಮುಖ್ಯ ಪಾತ್ರಧಾರಿ ಅಮೇರಿಕಾ ಅಲ್ಲ, ಬದಲು ಗ್ರೇಟ್ ಬ್ರಿಟನ್. ಸಂದಿಗ್ಧ ಸಮಯದಲ್ಲಿ ಅಮೆರಿಕಾ ಬ್ರಿಟಿಷ್ ವಿರುದ್ಧ ರಷ್ಯಾವನ್ನು ಬೆಂಬಲಿಸಿತು. ೧೯೫೬ರಲ್ಲಿ ಬ್ರಿಟನ್ ಹತ್ತೊಂಬತ್ತನೆಯ ಶತಮಾನದ ಸಾಮ್ರಾಜ್ಯಶಾಹಿ ಆಯುಧ ಶಾಲೆಯಲ್ಲಿದ್ದ ತುಕ್ಕು ಹಿಡಿದ ಖಡ್ಗವನ್ನು ತೆಗೆದು ಸೂಯೆಜ್ ಮೇಲೆ ಧಾಳಿ ಮಾಡಿತು. ಅದರ ಜೊತೆಗಿದ್ದ ದೇಶಗಳೆಂದರೆ ಫ್ರಾನ್ಸ್ ಮತ್ತು ಇಸ್ರೇಲ್. ಬ್ರಿಟಿಷ್ ಸಾಮ್ರಾಜ್ಯ ಅಳಿಸಿಹೋಗಿದ್ದರೂ ಗ್ರೇಟ್ ಬ್ರಿಟನ್ ಪ್ರಪಂಚದ ಕೆಲವು ಭಾಗಗಳನ್ನು ತನ್ನದೆಂದು ಬಹು ಜತನದಿಂದ ನೋಡಿಕೊಳ್ಳುತ್ತಿತ್ತು. 'ರಷ್ಯಾ ಈಗ ಪ್ರಪಂಚದಲ್ಲಿ ಒಂದು ಬಲಿಷ್ಠರಾಷ್ಟ್ರ, ಬ್ರಿಟನ್‌ಗಿಂತಲೂ ಹೆಚ್ಚು ಬಲಾಢ್ಯ. ಹಾಗಾಗಿ ಅದಕ್ಕೆ ತನ್ನ ಧ್ವನಿ ಮಧ್ಯಪ್ರಾಚ್ಯದಲ್ಲಿ ಏಕಿರಬಾರದು ಎನಿಸಿತು. ಈಜಿಪ್ಟ್



ಮತ್ತು ಇತರ ಕೆಲವು ಕಡೆಗಳಲ್ಲಿ ಹಾಕಿದ 'ಅತಿಕ್ರಮ ಪ್ರವೇಶ ಮಾಡುವವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು' ಎನ್ನುವ ಸೂಚನೆಗೆ ಗೌರವ ಕೊಡುವುದು ಅದಕ್ಕೆ ಇಷ್ಟವಾಗಲಿಲ್ಲ.

ಈಜಿಪ್ಟ್‌ನೊಳಗೆ ಮೊದಲು ಅತಿಕ್ರಮ ಪ್ರವೇಶ ಮಾಡಿದ್ದು, ಜೆಕೋಸ್ಲೋವಾಕಿಯಾ, ರಷ್ಯಾ ಅಲ್ಲ. ಈಜಿಪ್ಟ್‌ಗೆ ಶಸ್ತ್ರಾಸ್ತ್ರಗಳು ಅಗತ್ಯವಾಗಿ ಬೇಕಾಗಿದ್ದವು. ಅವನ್ನ ಜೆಕೋಸ್ಲೋವಾಕಿಯಾ ಕೊಡಲು ಒಪ್ಪಿತು. ಇಂಗ್ಲೆಂಡ್ ಆಗಲೀ, ಅಮೆರಿಕಾ ಆಗಲೀ ಅಲ್ಪ ಸ್ವಲ್ಪ ಕೊಡಲು ತಯಾರಾಗಿದ್ದವು, ಅಷ್ಟೆ. ಪಾಶ್ಚಿಮಾತ್ಯದವರ 'ಮಿದುಳ ಮಗು' ಇಸ್ರೇಲ್. ಅದರ ಬಗ್ಗೆ ಅವರಿಗೆ ಆತಂಕ. ಇಸ್ರೇಲ್ ಅರಬರ ಪೀಡೆ ರಾಷ್ಟ್ರ. 'ಮ್ಯುಚುಯಲ್ ಸೆಕ್ಯುರಿಟಿ ಪ್ಯಾಕ್ಟ್' ನಂತೆ ಅಮೆರಿಕಾ, 'ಅಮೆರಿಕನ್ ಮಿಲಿಟರಿ ಮಿಷನ್' ಅನ್ನು ಒಪ್ಪದ ದೇಶಗಳಿಗೆ ಯುದ್ಧೋಪಕರಣಗಳನ್ನು ಮಾರುವ ಹಾಗಿಲ್ಲ. ಹಾಗಾಗಿ ಈಜಿಪ್ಟ್ ಜೆಕೋಸ್ಲೋವಾಕಿಯಾ ಕಡೆ ಕೈ ನೀಡಿತು; ಜೆಕೋಸ್ಲೋವಾಕಿಯಾ ಈಜಿಪ್ಟ್‌ಗೆ ಬೇಕಾದ ಅಸ್ತ್ರಗಳನ್ನು ಕೊಡಲು ಮುಂದಾಯಿತು. ಇದಾದ ಮೇಲೆ ಅಮೆರಿಕಾ ಈಜಿಪ್ಟ್‌ಗೆ ಆಸ್ವಾನ್ ಸೇತುವೆ ಕಟ್ಟಲು ಸಹಾಯ ಮಾಡುವುದಿಲ್ಲ ಎಂದಿತು. ಅಧ್ಯಕ್ಷ ನಾಸೆರ್ ಈ ಸೇತುವೆ ಕಟ್ಟಲು ಬಹಳ ಇಷ್ಟಪಟ್ಟಿದ್ದ. ಅಮೆರಿಕಾ ಸಹಾಯ ಮಾಡುವುದಾಗಿಯೂ ಆಶ್ವಾಸನೆ ಕೊಟ್ಟಿತ್ತು. ಕೊಟ್ಟ ಆಶ್ವಾಸನೆಯನ್ನು ಹಿಂತೆಗೆದುಕೊಳ್ಳುವ ಸಮಯದಲ್ಲಿ ಡಲ್ಲೆಸ್ ಈಜಿಪ್ಟ್ ಅನ್ನು ಹೀನಾಯಿಸಿದ, ಈಜಿಪ್ಟ್ ಸ್ಥಿರವಾಗಿ ಉಳಿಯುವುದರಲ್ಲೇ ಅನುಮಾನಪಟ್ಟ. ಡಲ್ಲೆಸ್ ಹೇಳುವುದನ್ನು ತೀವ್ರವಾಗಿ ಖಂಡಿಸಿದ ನಾಸೆರ್ ಸೂಯೆಜ್ ಅನ್ನು ಇದ್ದಕ್ಕಿದ್ದಂತೆ ರಾಷ್ಟ್ರೀಕರಣ ಮಾಡಿದ, ಮುಂದೆ ಪಾಶ್ಚಿಮಾತ್ಯ ದೇಶಗಳಿಂದ ಆಗಬಹುದಾದ ತೊಂದರೆಗಳನ್ನು ಧೈರ್ಯದಿಂದ ಎದುರಿಸುವುದಾಗಿ ಹೇಳಿದ. ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲ್ ಜಂಟಿಯಾಗಿ ಸೂಯೆಜ್ ಮೇಲೆ ಮಿಲಿಟರಿ ಕಾರ್ಯಾಚರಣೆ ನಡೆಸಲು ಮುಂದಾದವು, ಆದರೆ ಈಜಿಪ್ಟ್ ಮಣಿಯಲಿಲ್ಲ, ಅಧ್ಯಕ್ಷ ನಾಸೆರ್‌ನ ಕೀರ್ತಿ ಹೆಚ್ಚಿತು, ಅರಬ್ ಜಗತ್ತಿನಲ್ಲಿ ಅವನ ಪ್ರತಿಷ್ಠೆ ಇನ್ನಷ್ಟು ಬೆಳಗಿತು.

ಈ ಸಂದಿಗ್ಧ ಸಮಯದಲ್ಲಿ ಈಜಿಪ್ಟ್‌ಗೆ ಸತತ ಬೆಂಬಲ ನೀಡಿದ್ದು ರಷ್ಯಾದ ಮಿ. ಕ್ರುಶ್ಚೇವ್. ಈಜಿಪ್ಟ್ ಪರ ಹೋರಾಡಲು ತನ್ನ ಪುತ್ರನನ್ನು ಸ್ವಯಂ ಸೈನಿಕನಾಗಿ ಕಳುಹಿಸುತ್ತೇನೆ ಎಂದ. ವಾಗಾಡಂಬರದ ಮಾತು. ಅವನಿಂದ ಬ್ರಿಟನ್‌ನನ್ನು ಬೆದರಿಸುವ ಮಾತೂ ಬಂತು. ಮೆಡಿಟರೇನಿಯನ್ ಸಮುದ್ರದಲ್ಲಿರುವ ಬ್ರಿಟಿಷ್ ನೌಕೆಗಳ ಮೇಲೆ ರಷ್ಯಾದ ರಾಕೆಟ್ ಧಾಳಿಯಾಗುತ್ತದೆ ಎಂದ ಕ್ರುಶ್ಚೇವ್. ಅರಬ್ ದೃಷ್ಟಿಯಲ್ಲಿ ರಷ್ಯಾದ ಘನತೆ ಜಾಸ್ತಿಯಾಯಿತು. ಇನ್ನು ಯಾರೂ ಮಧ್ಯಪ್ರಾಚ್ಯದ ಯಾವುದೇ ಸಮಸ್ಯೆಯನ್ನು ಈಜಿಪ್ಟ್ ಬಿಟ್ಟು ಪರಿಹರಿಸುವ ಯತ್ನ ಸಾಧ್ಯವಿಲ್ಲ.

ಒಟ್ಟು ಫಲಿತಾಂಶವೇನೆಂದರೆ ರಷ್ಯಾವನ್ನು ಮಧ್ಯ ಪ್ರಾಚ್ಯದಿಂದ ದೂರ ಇಡಬೇಕೆಂದು ಮಾಡಿದ ಪ್ರಯತ್ನ ಅದನ್ನು ತನ್ನೊಳಗೆ ಒಮ್ಮೆಗೇ ಸೇರಿಸಿಕೊಳ್ಳುವ ಹಾಗಾಯಿತು.

ಹಾಗೆಂದ ಮಾತ್ರಕ್ಕೆ ಈಜಿಪ್ಟ್ ಆಗಲೀ ಅಥವಾ ಮಧ್ಯಪ್ರಾಚ್ಯದ ಯಾವ ದೇಶವೇ ಆಗಲೀ ರಷ್ಯಾ ಹೇಳುವುದೆಲ್ಲವನ್ನು ಸಹಿಸಿಕೊಳ್ಳುತ್ತದೆ ಅಥವಾ ಕಮ್ಯುನಿಸಂಗೆ ಒಲಿದು ಅದರ ಹತೋಟಿಗೆ ಬರುತ್ತದೆ ಎಂದಲ್ಲ. ಯು.ಎ.ಆರ್. (ಅರಾಬ್ ರಿಪಬ್ಲಿಕ್‌ಗಳ ಒಕ್ಕೂಟ) ತಾಟಸ್ಥ್ಯ ನೀತಿಗೆ ಬಲವಾಗಿ ಅಂಟಿತ್ತು. ತಾಟಸ್ಥ್ಯ ನೀತಿಗೆ ಇನ್ನು ಯಾವ ದೇಶವೂ, ಬಹುಶಃ ಭಾರತ ಬಿಟ್ಟು, ಇಷ್ಟು ನಿಷ್ಠೆ ಇಟ್ಟುಕೊಂಡಿರಲಿಲ್ಲ, ಭಾರತದ ಬಗ್ಗೆ ಇದಕ್ಕಿದ್ದಷ್ಟು ಮೈತ್ರಿಭಾವ ಇನ್ನು ಯಾವ ದೇಶಕ್ಕೂ ಇರಲಿಲ್ಲ. ನಾಸೆರ್ ಮತ್ತು ನೆಹರೂರವರ ಮಧ್ಯೆ ಅಚಲವಾದ ಪ್ರೀತಿ, ಗೌರವವಿತ್ತು. ಒಬ್ಬರು ಇನ್ನೊಬ್ಬರನ್ನು ಪೂರ್ತಿಯಾಗಿ ಅರ್ಥಮಾಡಿಕೊಂಡಿದ್ದರು.

ಕಮ್ಯುನಿಸಂ ಬಗ್ಗೆ ಈಜಿಪ್ಟ್‌ನ ನಿಲುವು ಭಾರತದ ನಿಲುವಿಗಿಂತ ಸ್ವಲ್ಪ ವ್ಯತ್ಯಾಸವಾಗಿದೆ. ಕಮ್ಯುನಿಸ್ಟ್ ಪಾರ್ಟಿಗೆ ನ್ಯಾಯಬದ್ಧ ಸ್ಥಾನ ಈಜಿಪ್ಟ್‌ನಲ್ಲಿ ಅಥವಾ ಮಧ್ಯಪ್ರಾಚ್ಯದಲ್ಲಿರುವ ಹೆಚ್ಚು ದೇಶಗಳಲ್ಲಿಲ್ಲ. ಅಲ್ಲಿ 'ಕಮ್ಯುನಿಸಂ' ಅನ್ನು ಒಂದು ಪೀಡೆ ಎಂದು ಭಾವಿಸುತ್ತಾರೆ. ಹಾಗಾಗಿಯೇ ರಷ್ಯಾದ ಪ್ರಾವ್ಡಾ ಪತ್ರಿಕೆ ಸಿಟ್ಟಿನಿಂದ ಹೀಗೆ ಬರೆಯಿತು – 'ಶೋಷಣೆ ಮಾಡುವವರು ಈಜಿಪ್ಟ್ ಅನ್ನು ಆಳುತ್ತಿದ್ದಾರೆ, ಜನ ಪ್ರಜಾಪ್ರಭುತ್ವದ ಬಗ್ಗೆ ಮಾತಾಡುತ್ತಾರೆ, ಪ್ರಗತಿಪರರು ತಮ್ಮ ರಾಜಕೀಯ ನಂಬಿಕೆಗಳಿಗಾಗಿ ಚಿತ್ರಹಿಂಸೆ ಕೊಡುವ ಕೋಣೆಗಳಲ್ಲಿ ಕುಗ್ಗಿಹೋಗುತ್ತಿದ್ದಾರೆ'. ಭಾರತ ಕಮ್ಯೂನಿಸ್ಟ್ ಪಕ್ಷವನ್ನು ಬಹಿಷ್ಕರಿಸಿಲ್ಲ. ದೇಶದಲ್ಲಿ ಇನ್ನಿತರ ಪಕ್ಷಗಳು ಇರುವಂತೆ ಅದೂ ಇದೆ. ಕೇರಳದಲ್ಲಿ ಅವರು ರಾಜ್ಯಭಾರ ನಡೆಸಿದಂತೆ ಮುಂದೆಯೂ ಅವರು ರಾಜ್ಯಭಾರಮಾಡಲಿ. ಆದರೆ ಅವರು ಹಿಂಸಾಚಾರಕ್ಕೆ ಇಳಿದರೆ ಅಥವಾ ವಿಧ್ವಂಸಕ ಚಟುವಟಿಕೆಗಳನ್ನು ಕೈಗೆತ್ತಿ ಕೊಂಡರೆ ಸರ್ಕಾರ ಅವರನ್ನು ದಂಡಿಸುತ್ತದೆ. ಸರ್ಕಾರದ ಈ ನಿಲುವು ಭಾರತದ ಮೂಲಭೂತ ಪ್ರಜಾಪ್ರಭುತ್ವದ ನೀತಿಗೆ ಅನುಗುಣವಾಗಿದೆ.

ಕಳೆದ ದಶಕದ ಅತ್ಯಂತ ಗಮನಾರ್ಹ ಬೆಳವಣಿಗೆಯೆಂದರೆ ಆಫ್ರಿಕಾದ ಸ್ವಾತಂತ್ರ್ಯೋದಯ. ಅಲ್ಲಿ ಒಂದಾದ ಮೇಲೆ ಒಂದರಂತೆ ರಾಜ್ಯಗಳು ಅತಿವೇಗದಲ್ಲಿ ಸ್ವಾತಂತ್ರ್ಯಗೊಂಡವು. ಇತಿಹಾಸ ಹಿಂದೆ ಇಂಥದನ್ನು ಕಂಡಿರಲಿಲ್ಲ. ನಿಜ, ಆಲ್ಜೀರಿಯಾದಂತೆ ಕೆಲವು ರಾಜ್ಯಗಳು ಸ್ವಾತಂತ್ರ್ಯಕ್ಕೆ ದೀರ್ಘವಾಗಿ ಹೋರಾಡಬೇಕಾಯಿತು. ಆದರೆ ಮಿಕ್ಕ ರಾಜ್ಯಗಳಿಗೆ ಸ್ವಾತಂತ್ರ್ಯ 'ಸೇಬುಗಳು ಕಳಚಿ ಮಡಲಿಗೆ ಬಿದ್ದಂತೆ' ಸುಲಭವಾಗಿ ಬಂತು. ಆದರೆ ಶೀತಲ ಸಮರದಿಂದ ಪೂರ್ಣವಾಗಿ ಯಾವ ರಾಜ್ಯವೂ ರಕ್ಷಿಸಲ್ಪಟ್ಟಿರಲಿಲ್ಲ, ಅಥವಾ ಅದಕ್ಕೆ ಯಾವುದೂ ವಶವಾಗಲಿಲ್ಲ. ಆಫ್ರಿಕಾದ ಕೆಲವು ರಾಜ್ಯಗಳು ಸ್ವ–ಇಚ್ಛೆಯಿಂದ ಸ್ವಾತಂತ್ರ್ಯದ ನಂತರವೂ ಫ್ರೆಂಚ್–



ಸಮುದಾಯದಲ್ಲೇ ಇದ್ದವು. ಆದರೆ ಒಂದು ರಾಜ್ಯ–ಗಿನಿಗೆ ಕಮ್ಯುನಿಸ್ಟ್ ನರಕದಲ್ಲಿ ಬೆಂದುಹೋಗುವುದು ಹಣೆಯಲ್ಲಿ ಬರೆದಿತ್ತು. ಅದೊಂದು ಪತಿತ, ಆತ್ಮ ಕಳೆದುಕೊಂಡ ರಾಜ್ಯ ಎಂದು ಪಾಶ್ಚಿಮಾತ್ಯ ದೇಶ ಅದನ್ನು ಬಿಟ್ಟುಬಿಟ್ಟಿದ್ದವು. ಆದರೆ ಅವರ ಭವಿಷ್ಯ ನಿಜವಾಗಲಿಲ್ಲ. ಸ್ವತಂತ್ರ ಗಿನಿಯನ್ನು ಮೊದಲು ಮಾನ್ಯ ಮಾಡಿದ್ದು ರಷ್ಯಾ. ಆರ್ಥಿಕವಾಗಿ ಅದಕ್ಕೆ ಸಹಾಯ ನೀಡಿ ಅದು ಸ್ವತಂತ್ರವಾಗಿ ಉಳಿಯಲು ಸೋವಿಯಟ್ ರಷ್ಯಾ ಬೆಂಬಲ ನೀಡಿತು. ಗಿನಿ ಒಂದೇ ವೇಳೆಯ – ಬಾಳೆ ಬೆಳೆಯುವ ರಾಜ್ಯ. ಫ್ರಾನ್ಸ್ ಇಲ್ಲಿಯ ಬಾಳೆಹಣ್ಣುಗಳನ್ನು ಖರೀದಿಸಲು ನಿರಾಕರಿಸಿತು – ಕ್ಯೂಬಾಕ್ಕೆ ಪಾಠ ಕಲಿಸಲು ಅಮೆರಿಕಾ ಕ್ಯೂಬಾದಿಂದ ಸಕ್ಕರೆ ಕೊಳ್ಳುವುದನ್ನು ನಿಲ್ಲಿಸಿದ ಹಾಗೆ. ಈಗ ರಷ್ಯಾ ಗಿನಿಯ ಸಹಾಯಕ್ಕೆ ಬಂತು. ಗಿನಿ ಬೆಳೆಯುವ ಎಲ್ಲಾ ಬಾಳೆಹಣ್ಣನ್ನು ತಾನು ಕೊಳ್ಳುವುದಾಗಿ ಹೇಳಿ, ಹಾಗೆಯೇ ಮಾಡಿತು. ಆಶ್ಚರ್ಯವೇನೆಂದರೆ ಗಿನಿ ರಷ್ಯಾದ ಉಪಗ್ರಹವಾಗಲಿಲ್ಲ. ೧೯೬೧ ರಲ್ಲಿ ಗಿನಿ ಮತ್ತು ರಷ್ಯಾ ನಡುವೆ ಭಿನ್ನಾಭಿಪ್ರಾಯ ಮೂಡಿತು. ಗಿನಿ, ರಷ್ಯಾದ ರಾಯಭಾರಿಯನ್ನು ತನ್ನ ರಾಜಧಾನಿಯಿಂದ ಕೂಡಲೇ ಕಾಲ್ತೆಗೆಯುವಂತೆ ಸೂಚಿಸಿತು. ಸೋವಿಯಟ್ ರಷ್ಯಾದಲ್ಲಿ ಓದುತ್ತಿದ್ದ ಗಿನಿ ವಿದ್ಯಾರ್ಥಿಗಳು ತಮ್ಮ ತಾಯ್ನಾಡಿಗೆ ವಾಪಸ್ಸಾದರು. ಈಗ ಎರಡು ರಾಷ್ಟ್ರಗಳ ಮಧ್ಯೆ ಇದ್ದ ವೈಮನಸ್ಯ ಹೋಗಿ ಎರಡೂ ಮಿತ್ರರಾಷ್ಟಗಳಾಗಿವೆ.

ಗಿನಿ ರಾಜ್ಯದ ಅಧ್ಯಕ್ಷ ಸೆಕೌ ಟೌರೆ (Sekou Toure) ಶೀತಲ ಸಮರದ ಬಗ್ಗೆ ಈ ಪ್ರಸಿದ್ಧ ನುಡಿಗಟ್ಟನ್ನು ಹೇಳಿದ. ಈ ನುಡಿಗಟ್ಟು ಅವನ ಹಾಗೂ ವಿವೇಕಶಾಲಿ ಏಷ್ಯಾ ಮತ್ತು ಆಫ್ರಿಕಾದ ಜನರ ಅನಿಸಿಕೆ ಅನ್ನಬಹುದು. 'ನಾವು ನಮ್ಮ ಸ್ವಂತ ಕನ್ನಡಕವನ್ನು ಹಾಕಿಕೊಳ್ಳಬೇಕು. ಸೆಕೌ ಟೌರೆ ಹೇಳಿದ ಮಾತು – 'ಏಷ್ಯಾ ಮತ್ತು ಆಫ್ರಿಕಾಗಳಲ್ಲಿ ಹೊರದೇಶದ ಕನ್ನಡಕ ಮಾರುವ ವ್ಯಾಪಾರಿಗಳಿದ್ದಾರೆ. ಅವರು ತಮ್ಮ ಕನ್ನಡಕವೇ ಉತ್ತಮ ಎಂದು ಹೇಳುತ್ತಾ ಬೇರೆಯವರ ಕನ್ನಡಕವನ್ನು ಹೀಯಾಳಿಸುತ್ತಾರೆ. ಏಷ್ಯಾ ಮತ್ತು ಆಫ್ರಿಕಾ ಅವರ ವಿರುದ್ಧ ನಿಲ್ಲಬೇಕು. ಆದರೆ ಅವಕ್ಕೆಲ್ಲಾ ಬೇಕಾದ ಶಕ್ತಿ ಇಲ್ಲ. ಕಾಂಗೋ ಬಗ್ಗೆ ಯೋಚಿಸಿ ಹಿಂದಿನ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಈಗ ಅದರ ಮೇಲೆ ಹಾರಾಡುತ್ತಾ ಅದನ್ನು ಮುಕ್ಕುತ್ತಿವೆ – ಹದ್ದುಗಳು ಹೆಣವನ್ನು ಕುಕ್ಕಿ ತಿನ್ನುವಂತೆ.'

ಇತ್ತೀಚೆಗೆ ಶೀತಲ ಸಮರ ಲ್ಯಾಟಿನ್ ಅಮೆರಿಕಾಕ್ಕೂ ಪ್ರಸರಿಸಿತು. ಇಲ್ಲಿ ಕೂಡ ಬಂಡವಾಳಶಾಹಿ ಮತ್ತು ಕಮ್ಯುನಿಸಂ ನಡುವೆ ನೇರ ಹೋರಾಟ ನಡೆಯಲಿಲ್ಲ. ಅದು ನೇರ ಹೋರಾಟವಾಗುತ್ತದೆ ಎಂದು ಡಲ್ಲೆಸ್ ಭ್ರಮಿಸಿದ್ದ.

ಕ್ಯೂಬಾದಲ್ಲಿ ನಡೆದ ಕ್ರಾಂತಿ ಆದಿಯಲ್ಲಿ ಕಮ್ಯುನಿಸ್ಟ್ ಕ್ರಾಂತಿಯಲ್ಲ, ಕಮ್ಯುನಿಸಂನ ಮನೋಭಾವ ಕ್ಯೂಬಾ ಪಡೆದದ್ದು ಮಾರ್ಕ್ಸ್‌ನಿಂದಲ್ಲ, ಮಾರ್ಟಿ ಎನ್ನುವವನಿಂದ. ಅದರ ಉದ್ದೇಶವಾದರೂ ಅಮೆರಿಕಾಕ್ಕೆ ಪೂರ್ಣವಾಗಿ ಅವಲಂಬಿತ ದೇಶವಾಗದೇ

ಇರುವುದು. ಮಾರ್ಟಿ ಹೇಳಿದ – 'ಯಾವ ದೇಶ ಆರ್ಥಿಕ ಪ್ರಗತಿಗಾಗಿ ಒಂದೇ ಬಗೆಯ ಬೆಳೆಯನ್ನು ನಂಬಿರುತ್ತದೋ ಮತ್ತು ಯಾವುದೋ ಒಂದು ದೇಶಕ್ಕೆ ಮಾತ್ರ ಅದನ್ನು ಮಾರುತ್ತದೋ ಅಂಥ ದೇಶ ಸ್ವಾತಂತ್ರ್ಯದಿಂದಿರಲಾರದು. ಅಮೆರಿಕಾ ಮೇಲೆ ತಾನು ಅವಲಂಬಿಸಿರುವುದನ್ನು ಕ್ಯೂಬಾ ತ್ಯಜಿಸಿದ ಕೂಡಲೇ ರಷ್ಯಾ ಅದರ ಆರ್ಥಿಕ ನೆರವಿಗೆ ಬಂತು, ನಂತರ ಮಿಲಿಟರಿ ಸಹಾಯವನ್ನೂ ಒದಗಿಸಿತು. ರಷ್ಯಾದ ವರ್ತನೆಯನ್ನು ಗಮನಕ್ಕೆ ತೆಗೆದುಕೊಳ್ಳದೇ ಇದ್ದರೆ 'ಕಮ್ಯುನಿಸ್ಟ್ ಸಾಂಕ್ರಾಮಿಕ ರೋಗ' ಲ್ಯಾಟಿನ್ ಅಮೆರಿಕಾದ ಎಲ್ಲಾ ರಾಜ್ಯಗಳಿಗೂ ಹರಡುತ್ತದೆ ಎನ್ನುವ ಭೀತಿ ಅಮೆರಿಕಾಕ್ಕೆ. ಮನ್ರೋನ ರಾಜಕೀಯ ತತ್ವಕ್ಕೆ ಅದೇ ಮರಣ ಗಂಟಾನಾದವಾಗುತ್ತದೆ. ಅಮೆರಿಕಾ ನಡೆದುಕೊಂಡ ರೀತಿಯಿಂದ ರಷ್ಯಾ ಮೇಲೆ ಕ್ಯೂಬಾದ ಅವಲಂಬನೆ ಮತ್ತಷ್ಟು ಜಾಸ್ತಿಯಾಯಿತು, ಕೇಡು ಹೆಚ್ಚಾಯಿತು. ಕಮ್ಯುನಿಸಂಗೆ ವಿರೋಧವಿದ್ದ ಕೆಲವು ಲ್ಯಾಟಿನ್ ಅಮೆರಿಕನ್ ರಾಜ್ಯಗಳು ಅಮೆರಿಕಾದ ಧೋರಣೆಯನ್ನು ತೀವ್ರವಾಗಿ ಖಂಡಿಸಿದವು. ಕ್ಯೂಬಾ ತನ್ನ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಬಗ್ಗೆ ಅವಕ್ಕೆ ಅನುಕಂಪವಿತ್ತು.

ಅಧ್ಯಕ್ಷ ಕೆನಡಿ ಹೆಚ್ಚು ವಿವೇಕದ ನಿಲುವನ್ನು ಅನುಸರಿಸಿದ. 'ಲ್ಯಾಟಿನ್ ಅಮೆರಿಕಾದಲ್ಲಿ ಆಗುತ್ತಿರುವ ಕೋಲಾಹಲ ಮತ್ತು ಘಟನೆಗಳನ್ನು ಅಲಕ್ಷ್ಯ ಮಾಡುವುದರಿಂದ ಯಾವ ಅನುಕೂಲವೂ ಆಗುವುದಿಲ್ಲ. ಸರ್ವಾಧಿಕಾರಿ ಧೋರಣೆಯನ್ನು ಬೆಂಬಲಿಸಿ ಪ್ರಜಾಪ್ರಭುತ್ವವನ್ನು ದಮನ ಮಾಡುವುದು ಸರಿಯಲ್ಲ' ಎಂದ ಕೆನಡಿ. 'ಪ್ರಜಾಪ್ರಭುತ್ವವಾದಿಗೆ ಬೆಚ್ಚನೆಯ ಅಪ್ಪುಗೆ, ಸರ್ವಾಧಿಕಾರಿಗೆ ತಣ್ಣನೆಯ ಹಸ್ತ ಲಾಘವ' – ಇದು ಕೆನಡಿಯ ಆದರ್ಶ ಸೂತ್ರ. ಕೆನಡಿ ಲ್ಯಾಟಿನ್ ಅಮೆರಿಕಾ ರಾಜ್ಯಗಳ ಆರ್ಥಿಕ ವ್ಯವಸ್ಥೆಯನ್ನು ಉತ್ತಮಗೊಳಿಸಲು 'ಪ್ರಗತಿ ಮೈತ್ರಿ'ಯನ್ನು ಪ್ರಾರಂಭಿಸಿದ. ಆದರೆ ಕ್ಯೂಬಾ ಅನುಸರಿಸುತ್ತಿದ್ದ ಮಾರ್ಗ ಮತ್ತು ಅಮೆರಿಕಾದ ಬದುಕು ತುಂಬ ವ್ಯಾತ್ಯಾಸವಿದ್ದುದರಿಂದ ಕ್ಯೂಬಾ ಜೊತೆ ಹೊಂದಾಣಿಕೆ ಅವನಿಗೆ ಸಾಧ್ಯವಾಗಲಿಲ್ಲ. ಕ್ಯೂಬಾದಲ್ಲಿ ರಷ್ಯಾ ತನ್ನ ಕ್ಷಿಪಣಿಗಳನ್ನು ಇರಿಸಿತ್ತು. ೧೯೬೨ರಲ್ಲಿ ಕೆನಡಿ ತನ್ನ ಆತಂಕವನ್ನು ತಿಳಿಸಿದ. ರಷ್ಯಾ ತಾನಿಟ್ಟ ಕ್ಷಿಪಣಿಗಳನ್ನು ಬೇರೆ ಕಡೆಗೆ ಸಾಗಿಸಿತು. ಈ ಸಂದಿಗ್ಧ ಸಮಯದಲ್ಲಿ ಮಿ. ಕ್ರುಶ್ಚೇವ್ ಮತ್ತು ಅಧ್ಯಕ್ಷ ಕೆನಡಿ ಬಹಳ ವಿವೇಕದಿಂದ ವರ್ತಿಸಿದರು. ಕ್ರುಶ್ಚೇವ್‌ನನ್ನು ಸಣ್ಣವನನ್ನಾಗಿ ಮಾಡಲು ಕೆನಡಿ ಇಷ್ಟಪಡಲಿಲ್ಲ. ಬದಲು ಅವನನ್ನು ಹೊಗಳಿ, ಶಾಂತಿಯನ್ನು ಕಾಪಾಡಲು ಕ್ರುಶ್ಚೇವ್ ದೊಡ್ಡ ಕೆಲಸಮಾಡಿದ ಎಂದ. ಡಲ್ಲೆಸ್‌ನಂತಹವರು ಕ್ರುಶ್ಚೇವ್‌ನನ್ನು ಹೆದರಿಸಿ ತಾವೇನೋ ದೊಡ್ಡ ಕೆಲಸ ಮಾಡಿದ್ದೇವೆ ಎಂದು ಬೀಗುತ್ತಿದ್ದರು. ಕೆನಡಿ ಹಾಗಲ್ಲ. ಪರಮಾಣು ಪರೀಕ್ಷೆ (Nuclear Tests) ಬಹಿಷ್ಕರಿಸಿ ಮಾಡಿಕೊಂಡ ಒಪ್ಪಂದಕ್ಕೆ ಕ್ರುಶ್ಚೇವ್ ಮತ್ತು ಕೆನಡಿ ರುಜು ಮಾಡಿದಾಗ ಜಗತ್ತು ನೆಮ್ಮದಿಯ ಉಸಿರು ಬಿಟ್ಟಿತು.



ಶೀತಲ ಮತ್ತು ಸುಡು ಸಮರಗಳ ಯುಗ ಮುಗಿಯಿತು, ಶಾಂತಿಯುಗ ಕಾಲಿಡುತ್ತಿದೆ ಎನ್ನುವ ಭರವಸೆ ಜನರಲ್ಲಿ ಮೂಡಿತು.

ಆದರೆ ಚೀನಾ ಮತ್ತು ರಷ್ಯಾದ ಮಧ್ಯೆ ಇದ್ದ ವಿರೋಧ 'ಕ್ಯೂಬಾದ ಬಿಕ್ಕಟ್ಟು' ಸಮಯದಲ್ಲಿ ಹೊರಗೆ ಬಂತು. ಸೋವಿಯಟ್ ರಷ್ಯಾದ 'ಸಾಹಸ ಕೃತ್ಯಕ್ಕೆ' ಮತ್ತು 'ಕರಾರು ನಾಮೆ'ಗೆ ಚೀನಾ ಅದನ್ನು ದೂಷಿಸಿತು. 'ಸಾಹಸ ಕೃತ್ಯ'ವೆಂದರೆ ಕ್ಯೂಬಾದಲ್ಲಿ ಕ್ಷಿಪಣಿಗಳನ್ನು ಇರಿಸುವುದು, 'ಕರಾರುನಾಮೆ' ಎಂದರೆ 'ಇಟ್ಟ ಕ್ಷಿಪಣಿಗಳನ್ನು ತೆಗೆದು ಹಾಕುವದು.' 'ಅಮೆರಿಕಾದೊಡನೆ ಕ್ಷಿಪಣಿ ಬಗ್ಗೆ ಏಕೆ ಕರಾರು? ಕ್ಯೂಬಾದಲ್ಲಿ ಕ್ಷಿಪಣಿಗಳನ್ನು ಇರಿಸಿದ ನಂತರ ಅವನ್ನು ಏಕೆ ವರ್ಗಾಯಿಸಬೇಕು? ಅಮೆರಿಕಾ ಯಾವ ಮಹಾದೇಶ? ಅದೊಂದು ಕಾಗದದ ಹುಲಿ' ಎಂದು ಹೇಳಿತು ಚೀನಾ.

'ಕಾಗದದ ಹುಲಿಗೆ ಪರಮಾಣು ಹಲ್ಲುಗಳಿವೆ' ಮಾರ್ನುಡಿದ ಕ್ರುಶ್ಚೇವ್. ಇದ್ದರೇನಂತೆ? ಬ್ಲ್ಯಾಕ್‌ಮೇಲ್‌ಗೆ ಹೆದರುವುದೇ? ಚೀನಾ ಇಂತಹ ಬೆದರಿಕೆಗಳಿಗೆ ಸೊಪ್ಪು ಹಾಕುವುದಿಲ್ಲ. ಪರಮಾಣು ಯುದ್ಧವಾದರೆ ಆಗುವ ಅತ್ಯಂತ ಕೇಡೇನು? ಮುನ್ನೂರು ದಶಲಕ್ಷ ಜನ ಸಾಯಬಹುದು. ಆದರೆ ಇನ್ನೂ ನಾನೂರು ದಶಲಕ್ಷ ಜನ ಉಳಿದಿದ್ದಾರೆ' ಎಂದ ಮಾವೋ ಟ್ಸೆ–ಟುಂಗ್. ಅವನನ್ನು ತಮಾಷೆ ಮಾಡುತ್ತಾ ರಷ್ಯಾ ಒಂದು ವ್ಯಂಗ್ಯ ಚಿತ್ರ ಪ್ರಕಟಿಸಿತು. ಅದರಲ್ಲಿ ಧಡಿಯ ಚೀನಿಯೊಬ್ಬ ಹೂದಾನಿಯಲ್ಲಿ ತಲೆ ಇರಿಸಿದ್ದಾನೆ. ಆ ಜೇಡ್‌ಶಿಲೆಯ ಹೂದಾನಿಗೆ ಪರಮಾಣು ಉಪಕರಣ ಜೋಡಿಸಿದ್ದಾರೆ. ಚೀನಿ ಹೇಳುತ್ತಿದ್ದಾನೆ – 'ನನ್ನ ಮೂರನೆಯ ಎರಡು ಭಾಗ ಇನ್ನೂ ಆಚೆ ಇದೆ.'

೧೯೬೩ರಲ್ಲಿ ಅಮೆರಿಕಾ ಮತ್ತು ಸೋವಿಯಟ್ ರಷ್ಯಾ ಪರಮಾಣು ಪರೀಕ್ಷೆಗಳನ್ನು ಬಹಿಷ್ಕರಿಸುವ ಬಗ್ಗೆ ಒಪ್ಪಂದ ಮಾಡಿಕೊಂಡಾಗ ಚೀನಾಕ್ಕೆ ಮತ್ತಷ್ಟು ಕೋಪ ಬಂತು. ಅದು ಒಪ್ಪಂದಕ್ಕೆ ರುಜು ಮಾಡಲಿಲ್ಲ. " 'ಪರಮಾಣು ಮನಾಪಲಿ' ಅಮೆರಿಕಾ ಮತ್ತು ರಷ್ಯಾಕ್ಕೆ ಬೇಕು. ಈ ದೇಶಗಳ ಮಧ್ಯೆ ಏನೋ ಗುಟ್ಟು ಅಡಗಿದೆ" ಎನ್ನುವುದು ಚೀನಾದ ಅನಿಸಿಕೆ. ಕೊನೆಗೂ ಚೀನಾ ತನ್ನ ಮನದಲ್ಲಿ ಅದುಮಿಟ್ಟುಕೊಂಡಿದ್ದ ಬೇಗುದಿಯನ್ನು ಹೊರಚೆಲ್ಲಿತು – 'ರಷ್ಯಾ, ಚೀನಾಕ್ಕೆ ಪರಮಾಣು ಆಯುಧಗಳನ್ನು ಕೊಡದೇ ಇರುವುದು, ಫಾರ್ಮೋಸಾವನ್ನು ಆಕ್ರಮಿಸಿಕೊಳ್ಳಲು ರಷ್ಯಾ ಚೀನಾಕ್ಕೆ ಸಹಾಯ ಮಾಡದೇ ಇದ್ದದ್ದು, ತನ್ನ ಯಂತ್ರ–ಶಿಲ್ಪಿಗಳನ್ನು ರಷ್ಯಾ ವಾಪಸ್ಸು ಕರೆಸಿಕೊಂಡದ್ದು, ಕ್ಯೂಬಾದೊಡನೆ ಮಾಡಿಕೊಂಡ ವಾಣಿಜ್ಯ ಒಪ್ಪಂದವನ್ನು ಮುರಿದದ್ದು, ಚೀನಾದ 'ಭಾರಿ ಮುನ್ನೆಗೆತ'ವನ್ನು ಟೀಕಿಸಿದ್ದು, ಇಂಡಿಯಾ – ಚೀನಿ ಗಡಿ ಸಮಸ್ಯೆಯಲ್ಲಿ ಆಕ್ರಮಣ ಮಾಡಿದವರು, ಆಕ್ರಮಣಕ್ಕೆ ಒಳಗಾದವರು – ಇಬ್ಬರನ್ನೂ ಸಮೀಕರಿಸಿದ್ದು, ಅಮೆರಿಕಾದ ಅಧ್ಯಕ್ಷ ಐಸೆನ್ ಹೋವರ್‌ನನ್ನು 'ಶಾಂತಿ ದೂತ' ಎಂದು ಹೊಗಳಿದ್ದು, ಚೀನಾ – ಸೋವಿಯಟ್ ಗಡಿ ರೇಖೆಯನ್ನು

ರಷ್ಯಾ ಉಲ್ಲಂಘಿಸಿದ್ದು, ಸಿಂಕಿಯಾಂಗ್ ಜನತೆಯನ್ನು ಚೀನಾದ ಮೇಲೆ ಬೀಳುವಂತೆ ಪ್ರಚೋದಿಸಿದ್ದು – ಇವೆಲ್ಲಾ ಚೀನಾದ ಬೇಗುದಿಗೆ ಕಾರಣ.

ಇದುವರೆಗೆ ಚೀನಾ ರಷ್ಯಾ ಮಧ್ಯೆ ವಾಗ್ವಾದ ನಯವಿನಯದಿಂದಲೇ ನಡೆಯುತ್ತಿತ್ತು. ಒಂದು ಇನ್ನೊಂದರ ಹೆಸರನ್ನು ಹೇಳುತ್ತಿರಲಿಲ್ಲ. ಚೀನಾಕ್ಕೆ ರಷ್ಯಾವನ್ನು ತೆಗಳಬೇಕೆನಿಸಿದಾಗ ಅದು ಯುಗೋಸ್ಲಾವಿಯಾವನ್ನು ಬಯ್ಯುತ್ತಿತ್ತು; ರಷ್ಯಾಕ್ಕೆ ಚೀನಾವನ್ನು ನಿಂದಿಸಬೇಕೆಂದೆನಿಸಿದಾಗ ಅದು ಆಲ್ಬೇನಿಯಾವನ್ನು ಅವಹೇಳನ ಮಾಡುತ್ತಿತ್ತು. ಹೀಗೆ ಯುಗೋಸ್ಲಾವಿಯಾ ಮತ್ತು ಆಲ್ಬೇನಿಯಾ ವಿರುದ್ಧ ಬೈಗುಳದ ಪ್ರವಾಹವನ್ನು ಹರಿಸುತ್ತಿದ್ದರೆ ಚೀನಾ ಮತ್ತು ರಷ್ಯಾ ಮಧ್ಯೆ ಶೀಘ್ರದಲ್ಲೇ ಯುದ್ಧ ಎಂದು ಜಗತ್ತಿಗೆ ಅರಿವಾಯಿತು. – ಕ್ರುಶ್ಚೇವ್ ತನ್ನದೇ ಆದ ಸರಳ ಭಾಷೆಯಲ್ಲಿ ಹೇಳಿದ – 'ಹೊಲಸು ಮಕ್ಕಳು ತಮಗಿಂತ ಹೊಲಸಾಗಿರುವ ದೊಡ್ಡವರಿಂದ ಹಣ ತೆಗೆದುಕೊಳ್ಳುವಂತೆ ಆಲ್ಬೇನಿಯಾದವರು ವರ್ತಿಸುತ್ತಿದ್ದಾರೆ. ಹುಡುಗರು ಹೊಲಸು ಪದಗಳಿಂದ ಸಜ್ಜನರನ್ನು ಕೀಟಲೆ ಮಾಡುವುದು ಹುಡುಗರಿಗೆ ತಮಾಷೆ ಎಂದು ಅವರು ತಿಳಿದುಕೊಂಡಿದ್ದಾರೆ.' ಆಲ್ಬೇನಿಯಾ, ಚೀನಾದ ಪ್ರಚೋದನೆಯಿಂದ, ರಷ್ಯಾ ವಿರುದ್ಧ ಹೊಲಸು ಮಾತಾಡಿತ್ತು.

ಚೀನಾ ಮತ್ತು ರಷ್ಯಾ ನಡುವೆ ಇದ್ದ ವೈಮನಸ್ಯಕ್ಕೆ ಕಾರಣ ಹಲವಾರು – ಕೆಲವು ಚಿಕ್ಕವು, ಕೆಲವು ದೊಡ್ಡವು ; ಕೆಲವು ರಾಜಕೀಯಕ್ಕೆ ಸಂಬಂಧಪಟ್ಟದ್ದು, ಕೆಲವು ಸಿದ್ಧಾಂತಕ್ಕೆ ; ಕೆಲವು ವೈಯಕ್ತಿಕ, ಕೆಲವು ವಾಸ್ತವಿಕ. ವೈಯಕ್ತಿಕವಾಗಿ ಕ್ರುಶ್ಚೇವ್ ಮತ್ತು ಮಾವೊತ್ಸೆ – ತುಂಗ್ ಮಧ್ಯೆ ಪ್ರೀತಿ, ವಿಶ್ವಾಸವಿರಲಿಲ್ಲ. ಕಮ್ಯುನಿಸಂನ ಅಗ್ರಗ್ಯ ಪುರೋಹಿತ ಸ್ಟ್ಯಾಲಿನ್ ನಂತರ ಅತ್ಯಂತ ಹೆಚ್ಚು ಅನುಭವ ಪಡೆದವನು ಮತ್ತು ಸಾಮರ್ಥ್ಯ ಇದ್ದವನು ಎಂದರೆ ಮಾರ್ಕ್ಸಿಸ್ಟ್ ಮಾವೋ. ಅವನು ಕಮ್ಯುನಿಸ್ಟ್ ಜಗತ್ತಿನಲ್ಲಿ ತನ್ನದು ಅಗ್ರಸ್ಥಾನ ಎಂದು ನಂಬಿದ್ದ. ಆದರೆ 'ಪಟಿಂಗ, ವಿದೂಷಕ' ಕ್ರುಶ್ಚೇವ್ ಸ್ಟ್ಯಾಲಿನ್ ಜಾಗವನ್ನು ಆಕ್ರಮಿಸಿದ, ಜೊತೆ ಜೊತೆಯಲ್ಲೇ ಸ್ಟ್ಯಾಲಿನ್‌ನನ್ನು ಕೆಳಮಟ್ಟಕ್ಕೆ ಇಳಿಸಿದ. ಪವಿತ್ರ ಮಾರ್ಕ್ಸಿಸಂ ಅನ್ನು ಇಪ್ಪತ್ತನೆಯ ಶತಮಾನದ ಮೋಸೆಸ್‌ನಂತೆ ತಿದ್ದಿದ – ಅದೂ ಚೀನಾದ ಅಭಿಪ್ರಾಯ ಕೇಳದೆ. ಇದನ್ನು ಸಹಿಸಲು ಮಾವೋಗೆ ಸಾಧ್ಯವಾಗಲಿಲ್ಲ. ವಿದೇಶಿಯರನ್ನು ಕಂಡರೆ ಪ್ರಾಚೀನ ಕಾಲದಿಂದಲೂ ಚೀನಿಯರಿಗೆ ತಿರಸ್ಕಾರದ ಭಾವನೆ. ಅವರ ಪಾಲಿಗೆ ಚೀನಿಯರು ಮಾತ್ರ 'ಆರಿಸಿದ ಉತ್ತಮರು' (Elect), ಉಳಿದವರು ಅನಾಗರಿಕರು, ಅಸಂಸ್ಕೃತರು. ಚೀನಾ 'ಚುಂಗ್ ಕುವೊ ಮಿನ್ ಹೂಆ' ಹಾಗೆಂದರೆ ಚೀನಾ ಪುಷ್ಪಗಳು ತುಂಬಿರುವ ಮಧ್ಯ ರಾಜ್ಯ. ಅದರಿಂದ ಹೊರಟ ಬೆಳಕು ಕತ್ತಲು ಆವರಿಸಿದ ಎಲ್ಲಾ ಜಾಗಗಳಿಗೂ ಹರಡಿದೆ. ವಿದೇಶಿಯರನ್ನು ಚೀನಿಯರು ಯಾಂಗ್ ಕುಯಿ ಟ್ಸೆ ಎನ್ನುತ್ತಾರೆ, ಹಾಗೆಂದರೆ 'ವಿದೇಶಿ ದೆವ್ವ'. ಅವರ ಕಣ್ಣುಗಳಿಗೆ ವಿದೇಶಿಯರು ದೆವ್ವಗಳಂತೆ



ಕಾಣುತ್ತಾರೆ. ಪ್ರಪಂಚದ ಇತರ ಭಾಗದ ಜನರು ಹೊಗಳುವ ವಿದೇಶಿಯನ ಬಾಹ್ಯರೂಪ ಚೀನೀ ಕಣ್ಣುಗಳಿಗೆ ಪಿಶಾಚಿಯಂತೆ ಕಾಣಿಸುತ್ತದೆ. ನನ್ನ ಮೂವರು ಹೆಣ್ಣುಮಕ್ಕಳು ಓದುತ್ತಿದ್ದ ಚೆಂಗ್‌ಟುಗೆ ನಾನು ಮತ್ತು ನನ್ನ ಪತ್ನಿ ಒಂದು ಬಾರಿ ಹೋದೆವು. ನಮ್ಮನ್ನು ನೋಡಲು ಅಲ್ಲಿದ್ದ ಹುಡುಗಿಯರೆಲ್ಲಾ ಬಂದರು. ಅವರು ಭಾರತೀಯರನ್ನು ನೋಡಿರಲಿಲ್ಲ. ನಾನು ಚೆಂಗ್‌ಟು ಬಿಟ್ಟು ಹೋದ ಮೇಲೆ ಕೆಲವು ಹುಡುಗಿಯರು ನಮ್ಮ ಹೆಣ್ಣು ಮಕ್ಕಳ ಬಳಿ ಬಂದು 'ನಿಮ್ಮ ತಾಯಿಯಲ್ಲಿ ವಿದೇಶಿ ರಕ್ತವಿದೆ ಅನಿಸುತ್ತದೆ' ಎಂದರಂತೆ. (ನಿಜ, ನನ್ನ ಹೆಂಡತಿಗೆ ಅಗಲವಾದ ಕಣ್ಣುಗಳು, ಪ್ರಮುಖವಾಗಿರುವ ಮೂಗು ಇದೆ) ಆದರೆ ನಿಮ್ಮ ತಂದೆ ನಮ್ಮ ಹಾಗೇ ಕಾಣುತ್ತಾರೆ.'

ಚೀನಾ ಮತ್ತು ರಷ್ಯಾ ಮಧ್ಯೆ ತಿಕ್ಕಾಟ ಇರುವುದಕ್ಕೆ ಕಾರಣ ಅವುಗಳಿರುವ ಭೌಗೋಳಿಕ ಸನ್ನಿವೇಶ ಕೂಡ. ಗಡಿನಾಡಿನಲ್ಲಿ ಆಗಾಗ್ಗೆ ಚೀನಾ ಮತ್ತು ರಷ್ಯಾಗಳ ಮಧ್ಯೆ ಯುದ್ಧಗಳಾಗಿದ್ದವು. ದೂರದಲ್ಲಿರುವ ಕೆಲವು ಗಡಿ ಪ್ರದೇಶ ಯಾರಿಗೆ ಸೇರಬೇಕು ಎನ್ನುವ ವಿಷಯದಲ್ಲಿ ಈಗಲೂ ವಿವಾದವಿದೆ. ಚೀನಾ ಈಗಾಗಲೇ ರಷ್ಯಾವನ್ನು ಖಚಿತ ಮಾತುಗಳಿಂದ ಎಚ್ಚರಿಸಿದೆ.

ಆದರೆ ಈ ವಾಕ್ಕಲಹಗಳು ೧೯೫೩ರವರೆಗೆ ಬಾಹ್ಯ ಪ್ರಪಂಚಕ್ಕೆ ಕಾಣಿಸಿಕೊಂಡಿರಲಿಲ್ಲ. ಮುಂಚೆ ಚೀನಾ ಮತ್ತು ರಷ್ಯಾಗಳ ಮಧ್ಯೆ ಇದ್ದ ವಿವಾದ ಕಮ್ಯುನಿಸ್ಟ್ ತತ್ವಕ್ಕೆ ಸಂಬಂಧಪಟ್ಟದ್ದು. ರಷ್ಯಾ ಇಪ್ಪತ್ತನೆಯ ಕಾಂಗ್ರೆಸ್‌ನಲ್ಲಿ ತೆಗೆದುಕೊಂಡ ಯಾವ ಪ್ರಸ್ತಾಪವನ್ನೂ ಗಮನಿಸಿರಲಿಲ್ಲ, ತೀರ್ಮಾನಗಳನ್ನು ಒಪ್ಪಿರಲಿಲ್ಲ. ಸಮಾಜವಾದದ ಗುರಿಯನ್ನು ತಲುಪಲು ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಮಾರ್ಗವನ್ನು ಹುಡುಕಿಕೊಳ್ಳುವುದಕ್ಕೆ ಸ್ವಾತಂತ್ರ್ಯವಿದೆ ಎನ್ನುವುದನ್ನು ಚೀನಾ ಒಪ್ಪಲಿಲ್ಲ. ಈ ಕಾರಣದಿಂದಲೇ ೧೯೫೬ರಲ್ಲಿ ಪೋಲೆಂಡ್‌ನಲ್ಲಿ ಕೋಲಾಹಲ, ಹಂಗೆರಿಯಲ್ಲಿ ಕ್ರಾಂತಿ ನಡೆಯಿತು ಎಂದರು ಚೀನಿಯರು. 'ಸಮಾಜವಾದಕ್ಕೆ ಸ್ವತಂತ್ರವಾದ ದಾರಿ ಎಂದರೆ ಸಮಾಜವಾದದಿಂದ ಹೊರಗಿರುವ ದಾರಿ ಅದಾಗಬಹುದು. ಯುಗೋಸ್ಲಾವಿಯಾವನ್ನು ನೋಡಿ ಅದರಲ್ಲಿರುವ ಸಮಾಜವಾದದಲ್ಲಿ ಮಧ್ಯಮ ತರಗತಿಯ (ಬೂರ್ಷ್ವಾ) ಘಟಕಾಂಶಗಳಿವೆ' ಎನ್ನುತ್ತದೆ ಚೀನಾ.

ಸಮಾಜದ ಮಾರ್ಪಾಡಿಗೆ ಹಿಂಸೆ ಅಗತ್ಯವಲ್ಲ ಎನ್ನುವುದನ್ನು ಚೀನಾ ಒಪ್ಪಲಿಲ್ಲ. ಹಿಂಸೆ ಅಗತ್ಯವಾಗಿತ್ತು, ಅಗತ್ಯವಾಗಿದೆ, ಮುಂದೆಯೂ ಅದು ಅಗತ್ಯ. ಸಾಮ್ರಾಜ್ಯಶಾಹಿ ಪ್ರತಿಪಾದಕರು, ಸಾಮ್ರಾಜ್ಯತತ್ವ ಅನುಸರಿಸುವವರು ತಮ್ಮಲ್ಲಿರುವ ಅಧಿಕಾರವನ್ನು ಸುಮ್ಮನೆ ಬಿಟ್ಟುಕೊಡುವುದಿಲ್ಲ. 'ಸರ್‌ಮನ್ ಆನ್ ದ ಮೌಂಟ್' (ಕ್ರಿಸ್ತನ ಧರ್ಮೋಪದೇಶ) ಉಪಯೋಗಕ್ಕೆ ಬರುವುದಿಲ್ಲ. ಈವರೆಗೆ ಅನೇಕಾನೇಕ ಯುದ್ಧಗಳಾದವು – ನ್ಯಾಯಬದ್ಧ ಯುದ್ಧ, ಅನ್ಯಾಯದ ಯುದ್ಧ ; ಕ್ರಾಂತಿಕಾರಕ

ಯುದ್ಧ, ಸಾಮ್ರಾಜ್ಯಶಾಹಿ ಯುದ್ಧ – ಇವುಗಳೆಲ್ಲವನ್ನು ಒಟ್ಟುಗೂಡಿಸಿ ಯುದ್ಧ ಬೇಡವೆಂದರೆ ಕಾರ್ಮಿಕ ವರ್ಗ ಬಂಡವಾಳಶಾಹಿ ಮುಷ್ಟಿಯಿಂದ ತಪ್ಪಿಸಿಕೊಳ್ಳಲು ಅವರಲ್ಲಿರುವ ಒಂದೇ ಅಸ್ತ್ರ ಕಿತ್ತುಕೊಂಡಂತಾಗುತ್ತದೆ. ಹಿಂದೆ ಹೇಳಿದಂತೆ ಯುದ್ಧವೆಂದರೆ ಅದು ಪರಮಾಣು ಯುದ್ಧಕ್ಕೂ ತಿರುಗಬಹುದು. ಆದರೆ ಚೀನಾ ಆ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ. ಮಾಸ್ಕೋಗೆ ಫಿನ್‌ಲ್ಯಾಂಡಿನ ರಾಯಭಾರಿ, ನಂತರ ಚೀನಾಕ್ಕೆ ರಾಯಭಾರಿಯಾಗಿದ್ದ ಮಿ. ಸಂಡ್‌ಸ್ಟ್ರಾಮ್ ಚೀನಾದಿಂದ ಹಿಂದಿರುವಾಗ ನನಗೊಂದು ವಿಷಯ ಹೇಳಿದ – ಮಾವೊ ಟ್ಸೆ–ಟುಂಗ್ ಜೊತೆ ಅವನು ನಡೆಸಿದ ವಿಸ್ಮಯಕಾರಿ ಸಂಭಾಷಣೆಯ ತುಣುಕು. ಮಾವೊನನ್ನು ಅವನು ಕೇಳಿದನಂತೆ – 'ಅಣು ಬಾಂಬಿನ ಬಗ್ಗೆ ನಿಮಗೆ ಭೀತಿ ಇಲ್ಲವೆ?' ಅದಕ್ಕೆ ಮಾವೊ 'ಇಲ್ಲ, ಪರಮಾಣುಬಾಂಬ್‌ಗಳು ಯುದ್ಧದಲ್ಲಿ ಬಳಕೆಯಾದರೆ ಕೈಗಾರಿಕೆಗಳು ದಟ್ಟವಾಗಿರುವ ಅಮೆರಿಕಾ ನಾಶವಾಗುತ್ತದೆ, ಇಂಗ್ಲೆಂಡ್ ಪೂರ್ಣ ಹಾಳಾಗುತ್ತದೆ, ರಷ್ಯಾ ಒಳಗೊಂಡಂತೆ ಪಶ್ಚಿಮ ಯೂರೋಪ್ ಅಳಿಸಿ ಹೋಗುತ್ತದೆ. ಚೀನಾ ಮಾತ್ರ ಚಿರಕಾಲ ಉಳಿಯುತ್ತದೆ.'

ಚೀನಾದ ಬಗುಳುವಿಕೆ ಕಚ್ಚುವುದಕ್ಕಿಂತ ಹೆಚ್ಚು ಕೇಡು. ಅದನ್ನು ನಾನು ಇಂಡೋ–ಚೀನಾದಲ್ಲಿ ನೋಡಿದೆವು. ಇತ್ತ ವಿಯಟ್ನಾಂ ಮೇಲೆ ಅಮೆರಿಕಾ ಬಾಂಬಿನ ಮಳೆಗರೆಯುತ್ತಲೇ ಇತ್ತು. ಆಗ ಚೀನಾ ಮಾಡಿದ್ದು ವಾಗ್ದಾಳಿ, ಪ್ರತಿಭಟನೆ, ಎಚ್ಚರಿಕೆಯ ಮಾತುಗಳು. ನೇರವಾಗಿ ಯುದ್ಧಕ್ಕೆ ಅದು ಏನನ್ನೂ ಮಾಡಲಿಲ್ಲ. ಆದರೆ ತನ್ನ ಸ್ವಹಿತಕ್ಕೆ 'ನ್ಯೂಕ್ಲಿಯರ್ ಹಲ್ಲು' ಹೊಂದಿರುವ ಅಮೆರಿಕಾದಿಂದ ಅಪಾಯ ಬರಬಹುದೆಂದು ಅದೂ ಕೂಡ 'ನ್ಯೂಕ್ಲಿಯರ್ ಹಲ್ಲು'ಗಳಿರುವ ರಾಷ್ಟ್ರವಾಗಲು ಮುಂದಾಯಿತು. ನಿಜ ಹೇಳಬೇಕಾದರೆ ಚೀನಾಕ್ಕೆ ಶಾಂತಿಯುತ ಸಹಬಾಳ್ವೆಯಲ್ಲಿ ನಂಬಿಕೆ ಇಲ್ಲ. ಶಾಂತಿಗೆ ಅದೊಂದು ಪಿಡುಗು.

ಮಾನ್ಯರೆ, ಶೀತಲ ಸಮರದ ರೂಪ ಬದಲಾವಣೆಯಾಗಿದೆ, ಈಗ ಅದು ೫೦ರ ದಶಕದಲ್ಲಿದ್ದಂತಿಲ್ಲ ಎನ್ನುವುದನ್ನು ನಾವು ಅರಿತೆವು. ಅಮೆರಿಕಾ ಮತ್ತು ಸೋವಿಯಟ್ ರಷ್ಯಾ ನಡುವೆ ಇದ್ದ ಶೀತಲ ಸಮರಕ್ಕಿಂತಲೂ ಚೀನಾ ರಷ್ಯಾಗಳ ನಡುವೆ ಹುಟ್ಟಿರುವ ಶೀತಲ ಸಮರ ಹೆಚ್ಚು ಉಗ್ರ ಹಾಗೂ ಅಪಾಯಕಾರಿ. ಹೊಸ ಶೀತಲ ಸಮರದಿಂದ ಅಮೆರಿಕಾ ಮತ್ತು ರಷ್ಯಾ ಮಧ್ಯೆ ಸೌಹಾರ್ದ ಉಂಟಾಗಿದೆ, ಇವೆರಡಕ್ಕೂ ಯುದ್ಧದಿಂದ ಆಗುವ ವಿಪತ್ತು ಮನವರಿಕೆಯಾಗಿದೆ. ಅಮೆರಿಕಾ ಮತ್ತು ರಷ್ಯಾ ನಡುವೆ ನಮ್ಮದು ತಾಟಸ್ಥ್ಯನೀತಿ ಅನ್ನುವುದರಲ್ಲಿ ಅರ್ಥ ಈಗ ಕಡಿಮೆ.

ಸದ್ಯ ರಾಷ್ಟ್ರಗಳ ಹೊಸ ಒಕ್ಕೂಟ ಹುಟ್ಟುವ ಹಾಗಿದೆ. ಸಾಧ್ಯವಾದರೆ ಚೀನಾ, ಉಳ್ಳವರು, ಇಲ್ಲದೇ ಇರುವವರ ಮಧ್ಯೆ ; ಶ್ವೇತ ಮತ್ತು ಕಪ್ಪು ವರ್ಣೀಯರ ನಡುವೆ ; ಪೌರಸ್ತ್ಯ, ಪಾಶ್ಚಿಮಾತ್ಯ ದೇಶಗಳ ಮಧ್ಯೆ ಅಥವಾ ಗೋಳದ ಉತ್ತರ, ದಕ್ಷಿಣ ದೇಶಗಳ ಮಧ್ಯೆ ; ಅಥವಾ ಏಷ್ಯಾ, ಆಫ್ರಿಕಾ ಮತ್ತು ದಕ್ಷಿಣ ಅಮೆರಿಕಾ ವಿರುದ್ಧ ಉತ್ತರ ಅಮೆರಿಕಾ, ರಷ್ಯಾ ಒಳಗೊಂಡಂತೆ ಯೂರೋಪ್, ಸಂಘರ್ಷಕ್ಕೆ ಒತ್ತಾಸೆ ಕೊಡುತ್ತದೆ. ಈ ಸಂಘರ್ಷದಲ್ಲಿ ಅದಕ್ಕೆ ಸಾರಥ್ಯವಹಿಸುವ ಇಷ್ಟ ಸಂಘರ್ಷದಲ್ಲಿ ಭಾರತ ಅವಶ್ಯಕವಾಗಿ, ಇಲ್ಲದವರ, ಕಪ್ಪು ವರ್ಣೀಯರ, ಆಫ್ರಿಕಾ, ಲ್ಯಾಟಿನ್ ಅಮೆರಿಕಾದವರ ಜೊತೆ ಸೇರುತ್ತದೆ. ಕಾರಣ ಪಾಶ್ಚಿಮಾತ್ಯರು ಜಗತ್ತನ್ನು ಶತಮಾನಗಳಿಂದ ಆಳುತ್ತಿದ್ದಾರೆ. ಹಾಗೆಂದರೆ ಭಾರತ ಯುದ್ಧ ಶುರು ಮಾಡಬೇಕು ಅಥವಾ ಪ್ರೋತ್ಸಾಹಿಸಬೇಕು ಎಂದು ಅರ್ಥವಲ್ಲ. ಯುದ್ಧವಾದರೆ ಇಲ್ಲದವರೂ ಆಫ್ರಿಕಾ, ಏಷ್ಯಾ ಮತ್ತು ಲ್ಯಾಟಿನ್ ಅಮೆರಿಕಾ ದೇಶದವರೂ ಉಳಿದವರಂತೆ ವಿಪತ್ತನ್ನು ಅನುಭವಿಸಬೇಕಾಗುತ್ತದೆ, ನಾಗರಿಕತೆ ನಾಶವಾಗುತ್ತದೆ ಎಂದು ಭಾರತಕ್ಕೆ ಗೊತ್ತು. ಹೋರಾಟ ನಡೆಸದೆ ಮುಕ್ತರಾಗುವುದು ಸಾಧ್ಯ ಎನ್ನುವುದನ್ನು ಅದು ತನ್ನ ಅನುಭವದಿಂದಲೇ ಗೊತ್ತು ಮಾಡಿಕೊಂಡಿದೆ. ಬ್ರಿಟನ್ ಇಂಡಿಯಾಕ್ಕೆ ಸ್ವಾತಂತ್ರ್ಯಕೊಟ್ಟದ್ದು ಅದರಲ್ಲಿರುವ ಮೃಗೀಯ ಬಲಕ್ಕೆ ಹೆದರಿಯಲ್ಲ. ಗಾಂಧೀಜಿಯವರ ಅಹಿಂಸಾ ಚಳವಳಿ ಅವರನ್ನು ಅಧಿಕಾರ ತ್ಯಜಿಸುವಂತೆ ಮಾಡಿತು. ವಿಶ್ವಸಂಸ್ಥೆ ಕೂಡಾ ಕೆಲವು ಸಂದಿಗ್ಧ ಸಮಯದಲ್ಲಿ ಆಗಬಹುದಾದ ಸಂಘರ್ಷಗಳನ್ನು ಶಾಂತಿಯಿಂದ ತಪ್ಪಿಸಿತು ; ಶಾಂತಿಯ ಸ್ವಾತಂತ್ರ್ಯದ ರಕ್ಷಕ ಎನ್ನಿಸಿಕೊಂಡಿತು. ಇತ್ತೀಚೆಗೆ ವಿಶ್ವಸಂಸ್ಥೆಯಲ್ಲಿರುವ ಸದಸ್ಯರು – ಕಪ್ಪು ಮತ್ತು ಶ್ವೇತವರ್ಣೀಯರು, ಪೌರಸ್ತರು ಮತ್ತು ಪಾಶ್ಚಿಮಾತ್ಯದವರು ಹಾಗೂ ಉಳ್ಳವರು ಮತ್ತು ಇಲ್ಲದವರು – ಎಲ್ಲರೂ ರೊಡೇಶಿಯಾ ಸ್ವಾತಂತ್ರ್ಯ ಘೋಷಿಸಿಕೊಂಡದ್ದನ್ನು ಒಟ್ಟಾಗಿ ವಿರೋಧಿಸಿದರು. ರೋಡೇಶಿಯಾ ಬಗ್ಗೆ ಅನುಕಂಪವಿದ್ದದ್ದು ಎರಡೇ ದೇಶಗಳಿಗೆ – ದಕ್ಷಿಣ ಆಫ್ರಿಕಾ ಮತ್ತು ಪೋರ್ಚುಗಲ್. ವಿಶ್ವಸಂಸ್ಥೆಯ ಠರಾವನ್ನು ಮೀರಿ, ಜಾಗತಿಕ ಅಭಿಪ್ರಾಯಕ್ಕೆ ಮನ್ನಣೆ ಕೊಡದೆ, ಪೋರ್ಚುಗಲ್ ಮತ್ತು ದಕ್ಷಿಣ ಆಫ್ರಿಕಾದೊಡನೆ ನಿರಾಶಾವಾದಿ ಚೀನಾ, ಅವಕಾಶ ಅನುಯಾಯಿ ಪಾಕಿಸ್ತಾನ, ಲಾಭದಾಯಕ ವ್ಯಾಪಾರ ಮಾಡುತ್ತಿವೆ.

ಮಾನ್ಯರೆ, ನವೀನ ಶೀತಲ ಸಮರ (ಚೀನಿಯರು ಇಷ್ಟಪಡುವ ವಿರೋಧಾಲಂಕಾರವಿರುವ ನುಡಿಗಟ್ಟು – ನವೀನ ಶೀತಲ – ಸುಡು ಸಮರ)ದಲ್ಲಿ ಭಾರತವೂ ಉಪಯುಕ್ತ ಪಾತ್ರ ವಹಿಸಬಹುದು. ಹಿಂದೆ ಜಗತ್ತಿನ ಕೆಲವು ಕಡೆ ಶೀತಲ ಸಮರ ಉಗ್ರವಾಗಿದ್ದ ಸಮಯದಲ್ಲಿ ಅದು ಪರಿಣಾಮಕಾರಿ ಪಾತ್ರವಹಿಸಿ ಜಯ ಸಾಧಿಸಿತ್ತು.

ಇತ್ತೀಚೆಗೆ ನಾವು ಅನುಭವದಿಂದ ಕೆಲವು ಅಪ್ರಿಯ ಪಾಠಗಳನ್ನು ಕಲಿತುಕೊಂಡಿದ್ದೇವೆ. ನಾವು ಇತರರಿಗೆ ಒಳ್ಳೆಯವರಾದರೆ ಅವರೂ ನಮಗೆ

ಒಳ್ಳೆಯವರಾಗುತ್ತಾರೆ ಎಂದು ನಾವು ನಂಬಿದ್ದೆವು. ಆದರೆ ಹಾಗಲ್ಲ ಎನ್ನುವುದು ನಮಗೆ ಖಚಿತವಾಗಿದೆ. ತಾಟಸ್ಥ್ಯ ನೀತಿಯೊಂದೇ ಆಕ್ರಮಣವನ್ನು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ ಎಂದು ಕಂಡುಕೊಂಡಿದ್ದೇವೆ. ಅಂತರರಾಷ್ಟ್ರೀಯ ಬದುಕಿನಲ್ಲಿ ಇನ್ನೂ ಜಂಗಲಿ ಕಟ್ಟಳೆಗಳಿವೆ. ನೀವು ಸುರಕ್ಷಿತವಾಗಿರಬೇಕಾದರೆ ಬಲಾಢ್ಯರಾಗಿರಬೇಕು. ಹಾಗೆಂದರೆ ಮಾವೊ ಹೇಳಿದ ತತ್ವ – 'ಅಧಿಕಾರ ಕೋವಿಯಿಂದ ಬರುತ್ತದೆ! ಎನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗಿಲ್ಲ, ಒಪ್ಪಿದರೆ ಅದು ಚೀನಾಕ್ಕೆ ದೊರೆತ ಜಯ. ಆಕ್ರಮಣಕಾರಿಯನ್ನು ಮುನ್ನುಗ್ಗದಂತೆ ತಡೆಯಬೇಕು, ಯಾರಲ್ಲಿ ನಮಗೆ ವಿಶ್ವಾಸವಿದೆಯೋ ತಡೆಯುವ ಬಲವಿದೆಯೋ ಅವರನ್ನು ನಾವು ಹತ್ತಿರ ಸೆಳೆದುಕೊಳ್ಳಬೇಕಾಗುತ್ತದೆ. ಅಷ್ಟಾದರೆ ನಮ್ಮ ಕೆಲಸ ಮುಗಿದಂತಲ್ಲ, ಅದು ಆರಂಭ. ನಮ್ಮ ಕೆಲಸವಾದರೂ ತಡೆಯುವುದು ಮಾತ್ರವಲ್ಲ, ಸುಧಾರಣೆ ಕೂಡಾ ತಪ್ಪು ಮಾಡುವ ಗುಂಪನ್ನು ನಾವು ಸುಧಾರಿಸಲಾರೆವು. ಆದರೆ ಯಾವೊಬ್ಬ ವ್ಯಕ್ತಿ ಅಥವಾ ರಾಷ್ಟ್ರ ತಿದ್ದಲಾಗದಷ್ಟು ಕೆಟ್ಟಿರುವುದಿಲ್ಲ. ಆಕ್ರಮಣಕಾರಿ ದೇಶವನ್ನು ವಿಶ್ವಸಂಸ್ಥೆಗೆ ಸೇರಿಸಿಕೊಂಡು ನಮ್ಮ ಪ್ರಭಾವ ಬೀರಿ, ಶಿಸ್ತಿಗೆ ಒಳಪಡಿಸಿದರೆ ಅದು ಸುಧಾರಿಸುತ್ತದೆ ಎನ್ನುವುದು ಖಚಿತ. ಚೀನಾ ಬಗ್ಗೆ ನಮಗೆ ನಿಷ್ಠುರವಾದ ಅನುಭವವಿದ್ದರೂ ಅದನ್ನು ವಿಶ್ವಸಂಸ್ಥೆಗೆ ಸೇರಿಸಿಕೊಳ್ಳುವ ಬಗ್ಗೆ ನಮ್ಮ ಒಪ್ಪಿಗೆ ಇತ್ತು.

ನಮ್ಮ ತಾಟಸ್ಥ್ಯ ನೀತಿ ನಮ್ಮ ಪ್ರಾಚೀನ ತತ್ವಜ್ಞಾನದ ತಳಹದಿಯ ಮೇಲೆ ಸ್ಥಿರವಾಗಿ ನಿಂತಿದೆ. ನಾವು ಎಂದೂ 'ಶಂಕೆ ದೇವರ'ನ್ನು ನಂಬಿಲ್ಲ. ಅಂದರೆ ನಾವು ಅನುಮಾನ ಪ್ರಕೃತಿಯವರಲ್ಲ. ನಾವೆಂದೂ 'ಆರಿಸಲ್ಪಟ್ಟ ಜನಾಂಗ' ಎಂದು ಹೇಳಿಕೊಂಡಿಲ್ಲ. ನಾವು ಹೇಳುವುದೇ ಸತ್ಯ, ಅದಕ್ಕೆ ನಾವು ಮಾತ್ರ ಹಕ್ಕುದಾರರು ಎಂಬ ಭಾವನೆ ನಮಗಿಲ್ಲ. ಭಗವದ್ಗೀತೆಯಲ್ಲಿ ಹೀಗೆ ಹೇಳಿದೆ –

> ಯಾವಾನಾರ್ಥ ಉದಪಾನೇ ಸರ್ವತಃ ಸಂಪ್ಲುತೋದಕೇ ।
> ತಾವಾನ್ ಸರ್ವೇಷು ವದೇಷು ಬ್ರಾಹ್ಮಣಸ್ಯ ವಿಜಾನತಃ ॥

ಸತ್ಯವೆಲ್ಲಾ ವೇದದಲ್ಲಿದೆ ಎಂದು ಬ್ರಾಹ್ಮಣ ತಿಳಿದುಕೊಳ್ಳುವುದು, ಹಳ್ಳಿಯಲ್ಲಿ ಪ್ರವಾಹ ಬಂದಾಗ ಕೆರೆಯನ್ನು ನೋಡಿ ಜಗತ್ತಿನಲ್ಲಿರುವ ಜಲ ಇಲ್ಲಿದೆ ಎಂದು ಹೇಳಿದ ಹಾಗೆ.

> ಏಪ್ಯನ್ಯ ದೇವತಾ ಭಕ್ತಾ ಯಜಂತೇ ರುದ್ಧಯಾನ್ವಿತಾಃ ।
> ತೇಪಿ ಮಾಮೇವ ಕೌಂತೇಯ ಯಜನ್ತ್ಯ ವಿಧಿಪೂರ್ವಕಂ ॥

ಹೀಗೆಂದರೆ, ಪವಿತ್ರ ಗ್ರಂಥಗಳು ಹೇಳಿರುವುದಕ್ಕೆ ವಿರುದ್ಧವಿದ್ದರೂ ಒಬ್ಬ ಅನ್ಯದೇವರುಗಳನ್ನು ಪೂಜಿಸುವವನು, ನಂಬಿಕೆಯಿಟ್ಟು ನನ್ನಲ್ಲಿಗೆ ಬರಬಹುದು. ನಾವು ಅನ್ಯ ಮತ, ತತ್ವ, ಸಿದ್ಧಾಂತಕ್ಕೆ ನಮ್ಮ ಬಾಗಿಲನ್ನು ಮುಚ್ಚುವುದಿಲ್ಲ. ಗಾಂಧೀಜಿ ಹೇಳಿದರು – 'ನನ್ನ ಮನೆಯ ಸುತ್ತಲೂ ಗೋಡೆ ನಿರ್ಮಿಸುವುದನ್ನು, ಕಿಟಕಿಗಳನ್ನು



ಮುಚ್ಚುವುದನ್ನು ನಾನು ಇಷ್ಟಪಡುವುದಿಲ್ಲ. ನನಗೆ ಬೇರೆಲ್ಲಾ ದೇಶಗಳ ಸಂಸ್ಕೃತಿ, ಆದಷ್ಟು ಮುಕ್ತವಾಗಿ, ನನ್ನ ಮನೆಯೊಳಗೆ ಪ್ರವೇಶಿಸಬೇಕು, ಆದರೆ ಅದು ಯಾವುದೂ ನನ್ನನ್ನು ಹಾರಿಸಿಕೊಂಡು ಹೋಗಲು ನಾನು ಬಿಡುವುದಿಲ್ಲ. ೧೯೬೨ರಲ್ಲಿ ಟಿಬೆಟ್ ಪ್ರಸ್ಥಭೂಮಿಯಿಂದ ನಮ್ಮ ಸುಂದರ ನಾಡಿನ ಕಡೆ ಒಂದು ಚಳಿಗಾಳಿ ಬೀಸಿತು. ಇನ್ನೊಂದು ಕೇಡು ಮಾಡುವ ಗಾಳಿ ಚೀನಾದ ಗಾಳಿಯೊಡನೆ ಸೇರಿ ಪಾಕಿಸ್ತಾನದಿಂದ ಭಾರತದ ಮೇಲೆ ಕಳೆದ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಬೀಸಿತು. ಆದರೆ ಭಾರತ ಎನ್ನುವ ಸೌಧ ಅಲುಗಾಡಲಿಲ್ಲ. ಇಂತಹ ಗಾಳಿ ಸೌಧದ ಬುನಾದಿಯನ್ನು ಗಟ್ಟಿಗೊಳಿಸಿತು. ಸತ್ಯ, ನ್ಯಾಯ, ಸಹಿಷ್ಣುತೆ, ಕರುಣೆ – ಇವು ನಮ್ಮ ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ಬುನಾದಿಯನ್ನು ಬಲಗೊಳಿಸಿವೆ. ಈ ವಿಶೇಷ ಗುಣಗಳು ಭಾರತೀಯ ನಾಗರಿಕತೆಯನ್ನು ಅನಾದಿ ಕಾಲದಿಂದಲೂ ಎತ್ತಿ ಹಿಡಿದಿವೆ. ಭಾರತ ತನ್ನ ತಳಹದಿಗೆ ಗಟ್ಟಿಯಾಗಿ ಅಂಟಿಕೊಂಡಿದ್ದರೆ ಎಂತಹ ಗಾಳಿ – ಬಿಸಿಯಾಗಲೀ, ಶೀತವಾಗಲಿ, ಯಾವ ದಿಕ್ಕಿನಿಂದಲೇ ಆಗಲೀ, ಯಾವ ವೇಗದಿಂದಲೇ ಆಗಲೀ, ಬೀಸಿದರೂ ಅದು ಸ್ಥಿರವಾಗಿ ನಿಂತಿರುತ್ತದೆ ಎನ್ನುವುದರಲ್ಲಿ ನನಗೆ ಸ್ವಲ್ಪವೂ ಸಂಶಯವಿಲ್ಲ.

* * * *